ಸಂಪುಟ: 06 ಸಂಚಿಕೆ: 32 ಪುಟಗಳು: 08 ಗುರುವಾರ 16 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಮನುಷ್ಯ ಅವನ ಯೋಚನೆಗಳ ಉತ್ಪನ್ನವಾಗಿದ್ದಾನೆ. ಅವನ ಯೋಚನೆಯಂತೆ ಅವನಾಗುತ್ತಾನೆ

## ಅಕ್ರಮ ಗಣಿಗಾರಿಕೆ: ನಷ್ಟ ವಸೂಲಿಗೆ ದಾಖಲೆ ಸಲ್ಲಿಸಿಲ್ಲ

• ಉದಯವಾಹಿನಿ, ಬಳ್ಳಾರಿ

'ಓಬುಳಾಪುರಂ ಮೈನಿಂಗ್ ಕಂಪನಿ ಮತ್ತು ಅದರ ಗುಂಪು ಕಂಪನಿಗಳು ನಡೆಸಿರುವ ಅಕ್ರಮ ಗಣಿಗಾರಿಕೆಯಿಂದ ಕರ್ನಾಟಕಕ್ಕೆ ಆಗಿರುವ ನಷ್ಟ ವಸೂಲು ಮಾಡಲು ಗಣಿ ಉದ್ಯಮಿ ಟಪಾಲ್ ಗಣೇಶ್ ಅವರು ಸೂಕ್ತ ದಾಖಲೆಗಳನ್ನು ಸಲ್ಲಿಸಿಲ್ಲ' ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಏ. 9ರಂದು ಗಣಿ ಇಲಾಖೆಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ವರದಿ ನೀಡಿದ್ದಾರೆ.

'ಟಪಾಲ್ ಗಣೇಶ್‌ರವರು ಓಬುಳಾಪುರಂ ಮೈನಿಂಗ್ ಕಂಪನಿ ಮತ್ತು ಅದರ ಗುಂಪು ಕಂಪನಿಗಳಿಂದ 884 ಕೋಟಿ ವಸೂಲಿ ಮಾಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಮತ್ತು ಒಎಂಸಿ ಪ್ರಕರಣದಲ್ಲಿ ನ್ಯಾಯಮೂರ್ತಿ ಸುಧಾಂಶು ದುಲಿಯಾ ನೇತೃತ್ವದ ಸಮಿತಿಗೆ ಮನವಿಗಳನ್ನು ಸಲ್ಲಿಸಿದ್ದಾರೆ.

ಪತ್ರದಲ್ಲಿ ನಮೂದಿಸಿದಂತೆ ಒಎಂಸಿ ಗಣಿಗುತ್ತಿಗೆಯು ಆಂಧ್ರಪ್ರದೇಶ ರಾಜ್ಯದ ವ್ಯಾಪ್ತಿಗೆ ಬರುತ್ತಿದೆ. ಆಂಧ್ರ ಸರ್ಕಾರವು ಈ ಕುರಿತು ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಗಡಿ ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಬಗ್ಗೆ ಸಂಪೂರ್ಣ ದಾಖಲೆಗಳನ್ನು ಟಪಾಲ್ ಗಣೇಶ್ ರವರು ಸಲ್ಲಿಸಿರುವುದಿಲ್ಲ' ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ ರಂಗಪ್ಪ ಅವರು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

## ಸಿಬಿಎಸ್‌ಇ: ಬೆಂಗಳೂರಲ್ಲಿ ಶೇ 98.91ರಷ್ಟು ಉತ್ತೀರ್ಣ

• ಉದಯವಾಹಿನಿ, ಬೆಂಗಳೂರು

ಸಿಬಿಎಸ್‌ಇ 10ನೇ ತರಗತಿಯ ಮೊದಲ ಹಂತದ ಪರೀಕ್ಷಾ ಫಲಿತಾಂಶ ಬುಧವಾರ ಪ್ರಕಟಗೊಂಡಿದ್ದು, ಬೆಂಗಳೂರು ವಲಯವು ಶೇ. 98.91 ಫಲಿತಾಂಶ ಪಡೆದಿದೆ. ಸಿಬಿಎಸ್‌ಇಗೆ ಸಂಯೋಜಿತವಾಗಿರುವ ಶಾಲೆಗಳು ಬೆಂಗಳೂರು ವಲಯದ ಅಡಿಯಲ್ಲಿ ಬರುತ್ತವೆ. 2025ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿಯೂ ಇಷ್ಟೇ ಫಲಿತಾಂಶ ದಾಖಲಿಸಿತ್ತು. ಬೆಂಗಳೂರು ವಲಯವು ರಾಷ್ಟ್ರೀಯ ಮಟ್ಟದಲ್ಲಿ ಮೂರನೇ ಸ್ಥಾನ ಪಡೆದುಕೊಂಡಿದೆ. ತಿರುವನಂತಪುರ ಮತ್ತು ವಿಜಯವಾಡ ವಲಯಗಳು ಶೇ. 99.79 ಫಲಿತಾಂಶದೊಂದಿಗೆ ದೇಶದಲ್ಲೇ ಮೊದಲ ಸ್ಥಾನ ಪಡೆದಿವೆ, ಚೆನ್ನೈ ವಲಯ ಶೇ.99.58 ಫಲಿತಾಂಶದೊಂದಿಗೆ ಎರಡನೇ ಸ್ಥಾನ ಪಡೆದಿದೆ. ಒಟ್ಟಾರೆ ಅಗ್ರ ಮೂರು ಸ್ಥಾನಗಳಲ್ಲಿ ದಕ್ಷಿಣ ಭಾರತದ ವಲಯಗಳೇ ಇವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ರಾಷ್ಟ್ರೀಯ ಮಟ್ಟದ ಫಲಿತಾಂಶ ಅಲ್ಪ, ಅಂದರೆ ಶೇ 0.04ರಷ್ಟು ಹೆಚ್ಚಳವಾಗಿದೆ. ಬೆಂಗಳೂರು ವಲಯದಿಂದ ಒಟ್ಟು 1,01,660 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ, 1,00,554 ಮಂದಿ ಉತ್ತೀರ್ಣರಾಗಿದ್ದಾರೆ. ಬಾಲಕಿಯರು ಶೇ99.43ರಷ್ಟು, ಬಾಲಕರು ಶೇ 98.5ರಷ್ಟು ತೇರ್ಗಡೆ ಆಗಿದ್ದಾರೆ. ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 54,963 ಬಾಲಕರಲ್ಲಿ 54,864 ಮಂದಿ ಹಾಜರಾಗಿದ್ದು, 54,023 ಮಂದಿ ತೇರ್ಗಡೆಯಾಗಿದ್ದಾರೆ. ನೋಂದಣಿ ಮಾಡಿಕೊಂಡಿದ್ದ 46,843 ಹುಡುಗಿಯರ ಪೈಕಿ, 46,796 ಪರೀಕ್ಷೆಗೆ ಹಾಜರಾಗಿದ್ದು, 46,531 ಉತ್ತೀರ್ಣರಾಗಿದ್ದಾರೆ. 2025–26ರ ಶೈಕ್ಷಣಿಕ ವರ್ಷದ ಫಲಿತಾಂಶವು ವಿದ್ಯಾರ್ಥಿಗಳು ಸಾಮರ್ಥ್ಯ ಆಧಾರಿತ ಮೌಲ್ಯಮಾಪನಕ್ಕೆ ಉತ್ತಮವಾಗಿ ಸಿದ್ಧರಾಗಿರುವುದಕ್ಕೆ ಸಾಕ್ಷಿ' ಎಂದು ಸಿಬಿಎಸ್‌ಇ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಕರ್ನಾಟಕದ ಹಲವು ಶಾಲೆಗಳು ಶೇ 100 ಫಲಿತಾಂಶ ದಾಖಲಿಸಿವೆ. ಅನೇಕ ವಿದ್ಯಾರ್ಥಿಗಳು ಶೇ 99 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿಗೆ ಅಂಕ ಕೊಡಿ: ಹೈ ಆದೇಶ

• ಉದಯವಾಹಿನಿ, ಹಾವೇರಿ

ಪ್ರಸಕ್ತ 2025–26ನೇ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ. ಗ್ರೇಡಿಂಗ್ ವ್ಯವಸ್ಥೆಯನ್ನು ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ವಿ. ನಾಯ್ಕ ಅವರ ವಾದ ಪುರಸ್ಕರಿಸಿರುವ ನ್ಯಾಯಪೀಠ, 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆ ವಿಷಯಗಳಿಗೆ ಗ್ರೇಡ್ ಬದಲಿಗೆ ಅಂಕಗಳನ್ನು ನೀಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲಿಗೆ ಗ್ರೇಡ್ ನೀಡಬೇಕೆಂದು ರಾಜ್ಯ ಸರ್ಕಾರ ಇತ್ತೀಚೆಗಷ್ಟೇ ಅಧಿಸೂಚನೆ ಹೊರಡಿಸಿತ್ತು.

ಹಿಂದಿಗೆ ಅಂಕದ ಬದಲು ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಕನ್ನಡಪರ ಸಂಘಟನೆಗಳು, ಸಾಹಿತಿ, ಲೇಖಕರು ಬೆಂಬಲ ವ್ಯಕ್ತಪಡಿಸಿದ್ದರು. ದೇಶಿಯ ಭಾಷೆಗಳ ಹಿತರಕ್ಷಣಾ ಒಕ್ಕೂಟ ಹಾಗೂ ಬಿಜೆಪಿಯ ನಾಯಕರು ತೀವ್ರ ವಿರೋಧವನ್ನು ತೋರಿದ್ದರು.



ಎಲ್ಲರೂ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ

ಕನ್ನಡದಲ್ಲಿ ಭಾಷಣ ಆರಂಭಿಸಿದ ಮೋದಿ

# ಭೈರವೈಕ್ಯ ಮಂದಿರ ಲೋಕಾರ್ಪಣೆ

## ಸಮಾವೇಶದಲ್ಲಿ ಪ್ರಧಾನಿ ಮೋದಿ ಭಾಷಣ



ಸಿದ್ಧಾಂತಗಳನ್ನು ಬಳಕೆ ಮಾಡುವ ಮೂಲಕ ದೇಶೀಯ ಉತ್ಪನ್ನಗಳನ್ನು ಹೆಚ್ಚು ಖರೀದಿಸಿ

### ವೇದಿಕೆ ಮೇಲೆ ಮೋದಿ ಮತ್ತು ದೇವೇಗೌಡರ ಮಾತುಕತೆ

ಬೆಟ್ಟದ ತಪ್ಪಲಿನಲ್ಲಿರುವ ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆಗೊಳಿಸಿ, ಬಿಜಿಎಸ್ ಕ್ರೀಡಾಂಗಣದಲ್ಲಿ ಹಮಿಕೊಂಡಿದ್ದ ಕಾರ್ಯಕ್ರಮದ ವೇದಿಕೆಗೆ ಆಗಮಿಸುತ್ತಿದ್ದಂತೆ ಕುರ್ಚಿಯಲ್ಲಿ ಆಸೀನರಾಗಿದ್ದ ದೇವೇಗೌಡರಿಗೆ ಮೋದಿಯವರು ಹಸ್ತಲಾಘವ ಮಾಡಿ, ಯೋಗಕ್ಷೇಮ ವಿಚಾರಿಸಿದರು. ಪರಸ್ಪರ ಇಬ್ಬರೂ ನಾಯಕರು ಉಭಯ ಕುಶಲೋಪರಿ ನಡೆಸಿದರು. ವೇದಿಕೆ ಮೇಲೆ ಮೋದಿ ಮತ್ತು ದೇವೇಗೌಡರ ನಡುವೆ ನಡೆದ ಈ ಸಂಭಾಷಣೆ ನೆರೆದಿದ್ದ ಎಲ್ಲರ ಗಮನವನ್ನು ಸೆಳೆಯಿತು ಹಾಗೂ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿತು.ನಂತರ ಭಾಷಣ ಮಾಡುವ ಸಂದರ್ಭದಲ್ಲೂ ಮೋದಿಯವರು ದೇವೇಗೌಡರ ಕೈ ಹಿಡಿದುಕೊಂಡು ಕೆಲಹೊತ್ತು ಮಾತುಕತೆ ನಡೆಸಿದ್ದು ವಿಶೇಷವಾಗಿತ್ತು.

• ಉದಯವಾಹಿನಿ, ಬೆಂಗಳೂರು

20 ನಿಮಿಷಗಳ ಭಾಷಣದಲ್ಲಿ ಮೋದಿಯವರು, ಕರ್ನಾಟಕದ ಸಂಸ್ಕೃತಿ, ತತ್ವಜ್ಞಾನ, ತಂತ್ರಜ್ಞಾನ, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ಪದಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಸಮಾಜಸೇವೆ ಹಾಗೂ ಅದರ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಶ್ರೀಮಠದ ಪ್ರಸ್ತುತ ಪೀಠಾಧ್ಯಕ್ಷರಾಗಿರುವ ಡಾ. ಶ್ರೀ.ನಿರ್ಮಲಾನಂದನಾಥ ಸ್ವಾಮೀಜಿಯವರನ್ನು ಮುಕ್ತಕಂಠದಿಂದ ಹೊಗಳಿದರು.

ಎಲ್ಲಾ ನನ್ನ ಸಹೋದರ, ಸಹೋದರಿಯರಿಗೆ ನಮನಗಳು ಎಂದು ಕನ್ನಡದಲ್ಲಿ ಭಾಷಣ ಆರಂಭಿಸಿದ ಮೋದಿಯವರು, ಮಂಡ್ಯ ಜಿಲ್ಲೆ ಕಬ್ಬಿಗೆ ಹೆಸರುವಾಸಿ. ಇಲ್ಲಿನ ಜನರ ಮಾತು ಕೂಡ ಕಬ್ಬಿನಷ್ಟೇ ಸಿಹಿ. ಶ್ರೀಮಠಕ್ಕೆ ಬರುವುದೆಂದರೆ ನನಗೆ ಹೊಸ ಆಧ್ಯಾತ್ಮಿಕ ಲೋಕವನ್ನೇ ಸೃಷ್ಟಿಸುತ್ತದೆ ಎಂದು ಬಣ್ಣಿಸಿದರು.

ಕರ್ನಾಟಕ ಕೇವಲ ತಂತ್ರಜ್ಞಾನಕ್ಕೆ ಮಾತ್ರ ಹೆಸರುವಾಸಿಯಾಗಿಲ್ಲ. ಇದು ತತ್ವಜ್ಞಾನಕ್ಕೂ ಕೂಡ ಪ್ರಖ್ಯಾತಿ ಪಡೆದಿದೆ. 1800 ವರ್ಷಗಳ ಇತಿಹಾಸವಿರುವ ಆದಿಚುಂಚನಗಿರಿ ಪೀಠ ಅನ್ನ, ಅಕ್ಷರ, ಆರೋಗ್ಯ ಸೇರಿದಂತೆ ವಿವಿಧ ಸೇವೆಗಳ ಮೂಲಕ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಅವರು ಕೊಂಡಾಡಿದರು. ಮಠದ ಹಿಂದಿನ ಪೀಠಾಧ್ಯಕ್ಷರಾಗಿದ್ದ ಡಾ. ಶ್ರೀ.ಬಾಲಗಂಗಾಧರನಾಥ ಸ್ವಾಮೀಜಿಯವರು ಕೇವಲ ಸಮಾಜಸೇವೆಗೆ ತಮ ಜೀವನವನ್ನು ಮುಡುಪಾಡಿಗಿಟ್ಟರಲಿಲ್ಲ. ಪರಿಸರ ಹಾಗೂ ನವಿಲುಗಳ ಸಂರಕ್ಷಣೆಗಾಗಿ ಸಮಾಜದಲ್ಲಿ ದೊಡ್ಡ ಆಂದೋಲನವನ್ನೇ ಪ್ರಾರಂಭಿಸಿದ್ದರು. ನವಿಲು ಭಗವಾನ್ ಸುಬ್ರಹ್ಮಣ್ಯನ ವಾಹನ. ಅದನ್ನು ರಕ್ಷಣೆ ಮಾಡುವುದು ಇಂದಿನ ಪ್ರಜೆಗಳ ಕರ್ತವ್ಯ ಎಂದು ಮೋದಿಯವರು ಸಲಹೆ ಮಾಡಿದರು. ನಮ ಸರ್ಕಾರ ಪ್ರತಿಯೊಬ್ಬರಿಗೂ ಉಚಿತವಾಗಿ ಆರೋಗ್ಯ ಸೇವೆಯನ್ನು ನೀಡುತ್ತದೆ. ಆಯುಷ್ಮಾನ್ ಭಾರತ್ ಯೋಜನೆ ಮೂಲಕ ಉಚಿತವಾಗಿ ವೈದ್ಯಕೀಯ ಸೇವೆ ನೀಡುತ್ತಿದ್ದೇವೆ. ಅದೇ ರೀತಿ ಆದಿಚುಂಚನಗಿರಿ ಮಠವು ಆರೋಗ್ಯ ಕ್ಷೇತ್ರದಲ್ಲಿ ಅಪಾರವಾದ ಸುಧಾರಣೆಯನ್ನು ಮಾಡಿದೆ. ಇದು ನಮೆಲ್ಲರಿಗೂ ಪ್ರೇರಣೆ ಎಂದರು.

ತತ್ವಜ್ಞಾನ ಮತ್ತು ತಂತ್ರಜ್ಞಾನದ ಸಮೃದ್ಧಿ ಕರ್ನಾಟಕದ ಮಣ್ಣಿನ ಗುಣ ಎಂದು ಬಣ್ಣಿಸಿದ ಮೋದಿಯವರು, ಈ ಮಣ್ಣು ತತ್ವಜ್ಞಾನ ಮತ್ತು ತಂತ್ರಜ್ಞಾನ ಎರಡರಲ್ಲೂ ಸಮೃದ್ಧವಾಗಿದೆ. ಇಲ್ಲಿ ದರ್ಶನದ ಆಳವೂ ಇದೆ, ಟೆಕ್ನಾಲಜಿಯ ಶಕ್ತಿಯೂ ಇದೆ ಎಂದರು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರನ್ನು ಸ್ಮರಿಸಿದ ಮೋದಿ ಅವರು, ಅವರು ಶಾರೀರಿಕವಾಗಿ ನಮ ಜೊತೆ ಇಲ್ಲ ಅಷ್ಟೇ. ಆದರೆ ಅವರು ಇಲ್ಲಿ ಎಲ್ಲರ ಮನಸ್ಸಿನಲ್ಲೂ ಅಚ್ಚಳಿಯದೇ ಉಳಿದಿದ್ದಾರೆ ಎಂದು ಭಾವುಕರಾದರು. ಇದೇ ವೇಳೆ ಪ್ರಧಾನಿ ಮೋದಿ ಮತ್ತು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಜಂಟಿಯಾಗಿ ಸೌಂದರ್ಯ ಲಹರಿ ಮತ್ತು ಶಿವ ಮಹಿಮ್ನಾ ಸ್ತೋತ್ರಂ ಎಂಬ ಧಾರ್ಮಿಕ ಗ್ರಂಥವನ್ನು ಲೋಕಾರ್ಪಣೆ ಮಾಡಿದರು. ಪ್ರಧಾನಿಯವರಿಗೆ ರೇಷ್ಮೆ ಶಾಲು, ಬೆಳ್ಳಿಯ ನವಿಲು ನೀಡಿ ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ.ನಿರ್ಮಲಾನಂದನಾಥ ಸ್ವಾಮೀಜಿ, ಗುಜರಾತ್‌ನ ರಾಜ್‌ಕೋಟ್‌ನ ಅರ್ಷ ವಿದ್ಯಾಮಂದಿರದ ಜಗದ್ಗುರು ಸ್ವಾಮಿ ಪರಮಾತಾನಂದ ಸರಸ್ವತಿ ಜೀ, ರಾಜ್ಯಪಾಲ ಥಾವರ್‌ಚಂದ್ ಗೆಹೋಟ್, ಮಾಜಿ ಪಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

### ಆಧ್ಯಾತ್ಮಿಕ ಮೌಲ್ಯಗಳ ಜೀವಂತ ಸಾಕ್ಷಾತ್ ರೂಪ

ಆದಿಚುಂಚನಗಿರಿ ಮಠವು ಕಳೆದ ಎರಡು ಸಾವಿರ ವರ್ಷಗಳಿಂದ ಭಾರತದ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಜೀವಂತವಾಗಿರಿಸಿರುವ ಸಾಕ್ಷಾತ್ ರೂಪ ಎಂದು ಹೇಳಿದರು. ಬಾಲಗಂಗಾಧರನಾಥ ಶ್ರೀಗಳು ಕೇವಲ ಆಧ್ಯಾತ್ಮಿಕ ಮಾರ್ಗದರ್ಶನಕ್ಕೆ ಸೀಮಿತವಾಗಿರಲಿಲ್ಲ. ಗ್ರಾಮೀಣ ಭಾಗದಿಂದ ಬಂದಿದ್ದರಿಂದ ಅವರಿಗೆ ಹಳ್ಳಿಯ ಯುವಕರ ಆಕಾಂಕ್ಷೆ ಮತ್ತು ಸವಾಲುಗಳ ಅರಿವಿತ್ತು. ಭಕ್ತಿ ಎಂದರೆ ಸಮಾಜದಿಂದ ದೂರ ಹೋಗುವುದಲ್ಲ, ಸಮಾಜದ ಜವಾಬ್ದಾರಿ ತೆಗೆದುಕೊಳ್ಳುವುದು ಎಂದು ಅವರು ತೋರಿಸಿಕೊಟ್ಟರು. ಬಡಮಕ್ಕಳಿಗೆ ಇಂಜಿನಿಯರಿಂಗ್, ಮೆಡಿಕಲ್ ಶಿಕ್ಷಣ ನೀಡುವ ಮೂಲಕ ಅವರು ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಗುಣಗಾನ ಮಾಡಿದರು.

### ಅಧ್ಯಾತ್ಮ, ತ್ರಿವಿಧ ದಾಸೋಹದ ಧ್ರುವತಾರೆ

ಇತಿಹಾಸದಲ್ಲಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ಪದ್ಮಭೂಷಣ ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಅಜರಾಮರ ಧ್ರುವತಾರೆಯಾಗಿದ್ದಾರೆ. ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅಸಂಖ್ಯಾತ ಬಡ ಮಕ್ಕಳ ಪಾಲಿಗೆ ಜ್ಞಾನದ ಬೆಳಕಾಗಿ, ಅಸಂಖ್ಯಾತ ಬಡ ಕುಟುಂಬಗಳ ಪ್ರತ್ಯಕ್ಷ ದೈವವಾಗಿ ಮಹಾ ಸ್ವಾಮೀಜಿ ಅವರು ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅವಿರತವಾಗಿ ದುಡಿದ ಮಹಾ ಸ್ವಾಮೀಜಿಗಳು ತಮ್ಮ ಸಾಧನೆ ಮತ್ತು ಸಂದೇಶಗಳ ಮೂಲಕ ನಮಗೆಲ್ಲರಿಗೂ ದಾರಿದೀಪವಾಗಿದ್ದಾರೆ ಎಂದು ಕೇಂದ್ರದ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಬಣ್ಣಿಸಿದರು.




## ಅಪರಾಧ ಸಾಬೀತು ವಿನಯ್ ಕುಲಕರ್ಣಿ ಶಾಸಕ ಸ್ಥಾನಕ್ಕೂ ಕುತ್ತು!

• ಉದಯವಾಹಿನಿ, ಬೆಂಗಳೂರು

ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅಪರಾಧಿ ಎಂದು ಸಾಬೀತಾಗಿದ್ದು, ಸದ್ಯ ಅವರ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ಸ್ಥಾನಕ್ಕೂ ಕುತ್ತು ಬಂದಿದೆ. ಸದ್ಯ ಕೋರ್ಟ್‌ನಿಂದ ಅವರಿಗೆ ಶಿಕ್ಷೆ ಪ್ರಮಾಣ ಪ್ರಕಟವಾಗಿಲ್ಲ. ಒಂದು ವೇಳೆ 2 ವರ್ಷಕ್ಕಿಂತ ಹೆಚ್ಚು ಶಿಕ್ಷೆಗೆ ಅವರು ಗುರಿಯಾದರೆ ಶಾಸಕ ಸ್ಥಾನವನ್ನು ಕಳೆದುಕೊಳ್ಳಲಿದ್ದಾರೆ.

ಕೊಲೆ ಕೇಸ್ ಅನ್ನು ಸಿಬಿಐ ವಿಚಾರಣೆ ನಡೆಸಿದ್ದು, ಜನಪ್ರತಿನಿಧಿಗಳ ನ್ಯಾಯಾಲಯವು ಬುಧವಾರ ಶಾಸಕರನ್ನು ದೋಷಿ ಎಂದು ತೀರ್ಮಾನಿಸಿದೆ. ಆದರೆ, ಶಿಕ್ಷೆಯ ಪ್ರಮಾಣವನ್ನು ಮಾತ್ರ ಪ್ರಕಟ ಮಾಡಿಲ್ಲ. ಗುರುವಾರ ಶಿಕ್ಷೆಯನ್ನು ಕೋರ್ಟ್ ಪ್ರಟಿಸಲಿದ್ದು, ಆ ಸಂದರ್ಭದಲ್ಲಿ 2 ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಗೆ ವಿನಯ್ ಕುಲಕರ್ಣಿ ಗುರಿಯಾದರೆ ಕೂಡಲೇ ಶಾಸಕ ಸ್ಥಾನದಿಂದ ಅನರ್ಹರಾಗುತ್ತಾರೆ.

**ಶಾಸಕತ್ವ ರದ್ದಿನ ಬಗ್ಗೆ ನಿಯಮ ಏನಿದೆ?**

ಜನಪ್ರತಿನಿಧಿ ಕಾಯ್ದೆ, 1951 ಪ್ರಕಾರ ಕೊಲೆ ಕೇಸ್‌ನಲ್ಲಿ ಶಾಸಕರೊಬ್ಬರು ಅಪರಾಧಿ ಎಂದು ಸಾಬೀತಾಗಿ ಕೋರ್ಟ್ ಶಿಕ್ಷೆ ಘೋಷಿಸಿದ ತಕ್ಷಣ, ಅವರ ಶಾಸಕ ಸ್ಥಾನ ಅಧಿಕೃತವಾಗಿ ರದ್ದಾಗುತ್ತದೆ. ಯಾವುದೇ ಶಾಸಕ ಅಥವಾ ಸಂಸದರು ಕ್ರಿಮಿನಲ್ ಪ್ರಕರಣದಲ್ಲಿ ದೋಷಿ ಎಂದು ಸಾಬೀತಾಗಿ, ಅವರಿಗೆ ನ್ಯಾಯಾಲಯವು ಕನಿಷ್ಠ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಜೈಲು ಶಿಕ್ಷೆ ವಿಧಿಸಿದರೆ, ಅವರು ತಕ್ಷಣವೇ ತಮ್ಮ ಸ್ಥಾನದಿಂದ ಅನರ್ಹಗೊಳ್ಳುತ್ತಾರೆ. ಕೊಲೆ ಪ್ರಕರಣಗಳಲ್ಲಿ (ಐಪಿಸಿ ಸೆಕ್ಷನ್ 302 ಅಥವಾ ಬಿಎನ್‌ಎಸ್ ಸೆಕ್ಷನ್ 103)



**ವಿನಯ್ ಕುಲಕರ್ಣಿ ಮುಂದಿನ ದಾರಿ ಏನು?**

ಜನಪ್ರತಿನಿಧಿ ನ್ಯಾಯಾಲಯವು ಶಿಕ್ಷೆ ಪ್ರಕಟಿಸಿದ ತಕ್ಷಣವೇ ಶಾಸಕರು ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು. ಮೇಲಿನ ನ್ಯಾಯಾಲಯವು ಕೇವಲ ಅವರ ಜೈಲು ಶಿಕ್ಷೆಯ ಮೇಲಷ್ಟೇ ಅಲ್ಲದೆ, ಅವರ ಮೇಲಿನ ಅಪರಾಧ ನಿರ್ಣಯದ ಮೇಲೂ ತಡೆಯಾಜ್ಞೆ ನೀಡಿದರೆ ಮಾತ್ರ ಅವರ ಶಾಸಕ ಸ್ಥಾನ ಮರಳಿ ಸಿಗುತ್ತದೆ. ಕೇವಲ ಜಾಮೀನು ಸಿಕ್ಕರೆ ಸ್ಥಾನ ಉಳಿಯುವುದಿಲ್ಲ.

ಅಪರಾಧ ಸಾಬೀತಾದರೆ ಕನಿಷ್ಠ ಶಿಕ್ಷೆ ಜೀವಾವಧಿ ಕಾರಾಗೃಹ ವಾಸ ಅಥವಾ ಗರಿಷ್ಠ ಮರಣದಂಡನೆ ಆಗಿರುತ್ತದೆ. ಇದು 2 ವರ್ಷಗಳಿಗಿಂತ ಬಹಳ ಹೆಚ್ಚಿರುವುದರಿಂದ, ಕೊಲೆ ಪ್ರಕರಣದಲ್ಲಿ ದೋಷಿಯಾದ ತಕ್ಷಣ ಶಾಸಕ ಸ್ಥಾನ ರದ್ದಾಗುತ್ತದೆ.

**ಅನರ್ಹತೆಯ ಅವಧಿ ಎಷ್ಟು?:** ಕೇವಲ ಶಾಸಕ ಸ್ಥಾನ ರದ್ದಾಗುವುದು ಮಾತ್ರವಲ್ಲ, ಅವರು ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆಯಾದ ದಿನದಿಂದ ಮುಂದಿನ 6 ವರ್ಷಗಳ ಕಾಲ ಯಾವುದೇ ಚುನಾವಣೆಗೆ (ಶಾಸಕ, ಸಂಸದ ಇತ್ಯಾದಿ) ಸ್ಪರ್ಧಿಸುವಂತಿಲ್ಲ.

# ಪ್ರಧಾನಿಯನ್ನು ಸ್ವಾಗತಿಸಿ 18 ಬೇಡಿಕೆಗಳ ಮನವಿ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ


## ■ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಾತಿಯ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಬೇಕೆಂದು ಮನವಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕಕ್ಕೆ ಭೇಟಿ ನೀಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಾತಿಯ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಬೇಕು ಎಂಬುದು ಸೇರಿದಂತೆ ಒಟ್ಟು 18 ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಿದ್ದಾರೆ.

ಎಸ್‌ಸಿ–ಎಸ್‌ಟಿ, ಒಬಿಸಿ ಪಟ್ಟಿಯಲ್ಲಿರುವ ಜಾತಿಗಳ ಮೀಸಲಾತಿಯ ಪ್ರಮಾಣವನ್ನು ಶೇ. 56ಕ್ಕೆ ಹೆಚ್ಚಿಸಿರುವ ರಾಜ್ಯಸರ್ಕಾರದ ನಿರ್ಣಯವನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆ ಮಾಡಬೇಕು. ರಾಜ್ಯ ಸರ್ಕಾರ ಶಿಫಾರಸು ಮಾಡಿರುವ ಕೆಲವು ಹಿಂದುಳಿದ ಜಾತಿಗಳನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕೆಂದು ಮನವಿ ಮಾಡಿದ್ದಾರೆ.

ಕಲ್ಯಾಣ ಕರ್ನಾಟಕ 371ಜೆ ಅಡಿಯಲ್ಲಿ ಕೇಂದ್ರ ಸರ್ಕಾರ ವಾರ್ಷಿಕ 5 ಸಾವಿರ ಕೋಟಿ ರೂ. ಅನುದಾನವನ್ನು ನೀಡಬೇಕು. ಉತ್ತರ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಸಾರ್ವಜನಿಕ ವಲಯದ ಉದ್ಯಮವನ್ನು ಸ್ಥಾಪಿಸಬೇಕು ಎಂದು ಸಲಹೆ ನೀಡಿದ್ದಾರೆ. ಕರ್ನಾಟಕವು ದೇಶದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದು, ಮಾಹಿತಿ ತಂತ್ರಜ್ಞಾನ, ಉತ್ಪಾದನೆ, ಕೃಷಿ ಹಾಗೂ ಸೇವಾ ವಲಯದಲ್ಲಿ ಮುಂಚೂಣಿಯಲ್ಲಿದೆ.



ಸಹಕಾರ ಒಕ್ಕೂಟದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಕರ್ನಾಟಕ ಅತೀ ಹೆಚ್ಚು ಭಾಗಿದಾರಿಕೆ ಹೊಂದಿದೆ. ರಾಷ್ಟ್ರೀಯ ಖಜಾನೆಗೆ ಹೆಚ್ಚಿನ ತೆರಿಗೆ ನೀಡುತ್ತಿದೆ. ದೀರ್ಘ ಕಾಲದಿಂದ ಬಾಕಿ ಉಳಿದಿರುವ ಸಮಸ್ಯೆಗಳಿಗೆ ಕೇಂದ್ರ ಸರ್ಕಾರ ತುರ್ತು ಗಮನ ನೀಡಬೇಕು. ಕರ್ನಾಟಕದ ಪ್ರಗತಿಯಲ್ಲಿ ವೇಗಗೊಳಿಸಲು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

### ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ

ಮಹಾದಾಯಿ ನದಿಗೆ ಅಡ್ಡಲಾಗಿ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಅನುಮತಿ ಕೊಡಿಸಬೇಕು. ನದಿಗಳ ಜೋಡಣೆಯಲ್ಲಿ ಗೋದಾವರಿ–ಕಾವೇರಿ, ಬೇಡ್ತಿ–ವರದಾ ಜೋಡಣೆಯ ಯೋಜನೆಯಲ್ಲಿ ಕರ್ನಾಟಕಕ್ಕೆ ಕನಿಷ್ಠ 40 ರಿಂದ 45 ಟಿಎಂಸಿ ನೀರು ಹಂಚಿಕೆಯಾಗುವಂತೆ ಎಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ. ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಅನುಮೋದನೆ ನೀಡಬೇಕು. 2 ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ ಸ್ಟೋರೇಜ್ ಯೋಜನೆಗೆ ಅರಣ್ಯ ಪರಿಷ್ಕರ ಮತ್ತು ವನ್ಯಜೀವಿಗಳ ಪರಿಷತ್ತಿನಿಂದ ಅನುಮೋದನೆ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಕೋಲಾರದಲ್ಲಿ ರೈಲ್ವೆ ಕೋಚ್ ಫ್ಯಾಕ್ಟರಿಯನ್ನು ಈ ಮೊದಲು ರೈಲ್ವೆ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಅದಕ್ಕಾಗಿ ಕೋಲಾರದಲ್ಲಿ 1,123 ಎಕರೆ ಜಮೀನನ್ನು ಒದಗಿಸಲಾಗಿದೆ. ಆದರೆ ಈವರೆಗೂ ಅಲ್ಲಿ ಕಾರ್ಖಾನೆ ಆರಂಭವಾಗಿಲ್ಲ. ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ ಮತ್ತು ಉತ್ತಮ ಸಂಪರ್ಕಕ್ಕಾಗಿ ಪ್ರಸ್ತಾಪಿತ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆಯಲ್ಲಿ ಬೆಂಗಳೂರು ಮತ್ತು ಮೈಸೂರು ವಿಭಾಗವನ್ನು ಸೇರಿಸಬೇಕು ಎಂದು ಮನವಿ ಮಾಡಿದ್ದಾರೆ.

ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಹಣ ಬಿಡುಗಡೆ ಮಾಡಬೇಕು. ಬೆಂಗಳೂರು–ಮುಂಬೈ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆಯನ್ನು ಶೀಘ್ರವೇ ಉದ್ಘಾಟಿಸಬೇಕೆಂದು ಮನವಿ ಮಾಡಿದ್ದಾರೆ. ಸುರಕ್ಷಿತ ಕುಡಿಯುವ ನೀರಿನ ಯೋಜನೆ ಜಲಜೀವನ್ ಮಿಷನ್ ಅಡಿ ಕೇಂದ್ರದ ಪಾಲು 17,554 ಕೋಟಿ ರೂಪಾಯಿಗಳನ್ನು ಶೀಘ್ರವೇ ಬಿಡುಗಡೆ ಮಾಡಬೇಕು. ನವೀಕರಣ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಹಣ ಬಿಡುಗಡೆ ಮಾಡಬೇಕು. ನೀತಿ ನಿಯಮಗಳ ಸಮಸ್ಯೆಗಳನ್ನು ಬಗೆ ಹರಿಸಬೇಕು. ಕಳೆದ 12 ವರ್ಷಗಳಿಂದಲೂ ರಾಜ್ಯದ ಹೊಸ ಹೆದ್ದಾರಿ ಯೋಜನೆಗಳನ್ನು ಕೇಂದ್ರ ಸ್ವೀಕರಿಸಿಲ್ಲ, ಈ ಬಗ್ಗೆ ಗಮನ ಹರಿಸಬೇಕು. ಬೆಂಗಳೂರಿಗೆ ಮೂಲ ಸೌಕರ್ಯ ಬಲಪಡಿಸಲು 6 ಸಾವಿರ ಕೋಟಿ ರೂ. ಅನುದಾನ ನೀಡಬೇಕು.


ಬೆಂಗಳೂರಿನ ಕುಡಿಯುವ ನೀರಿಗಾಗಿ 67 ಟಿಎಂಸಿ ಸಾಮರ್ಥ್ಯದ 400 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನೆಯ ಮೇಕೆದಾಟು ಯೋಜನೆಗೆ ಅನುಮೋದಿಸಲು ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ಜಲ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಪಿಎಂಕೆಎಸ್‌ವೈ–ಎಐಬಿಪಿ ಯೋಜನೆಯಡಿ ಭದ್ರಾಮೇಲ್ದಂಡೆ ಯೋಜನೆಗೆ 2023ರ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾದ 5,300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು ಮತ್ತು ಯೋಜನೆಗೆ ರಾಷ್ಟ್ರೀಯ ಸ್ಥಾನಮಾನ ನೀಡಬೇಕು. ಕೃಷ್ಣಾಜಲ ವಿವಾದ ನ್ಯಾಯಮಂಡಳಿ ಎರಡರ ತೀರ್ಪನ್ನು ಅಧಿಸೂಚನೆ ಹೊರಡಿಸಬೇಕು. ಕರ್ನಾಟಕ ತನ್ನ ಪಾಲಿನ 173 ಟಿಎಂಸಿ ನೀರನ್ನು ಬಳಸಿಕೊಳ್ಳಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.96 ₹/L | ಡೀಸೆಲ್ : 90.99 ₹/L | ಬಂಗಾರ: ₹15,535/Gram24ct ₹14,240/Gram22ct | ಬೆಳ್ಳಿ: ₹270.00/Gram

# ಖಾಸಗಿ ವಿಡಿಯೋ ಮುಂದಿಟ್ಟು 1 ಕೋಟಿ ಹಣಕ್ಕೆ ಬೇಡಿಕೆ

• ಉದಯವಾಹಿನಿ, ಬೆಂಗಳೂರು

ಖಾಸಗಿ ವಿಡಿಯೋ, ಫೋಟೊ ವೈರಲ್ ಮಾಡುವುದಾಗಿ ಉದ್ಯಮಿಗೆ ಬೆದರಿಕೆ ಹಾಕಿ 1.5 ಕೋಟಿ ರೂ.ಗೆ ಬೇಡಿಕೆಯಿಟ್ಟ ಆರೋಪ ಸಂಬಂಧ ಇನ್‌ಫ್ಲೂಯನ್ಸರ್ ಸಾಧನಾ ಶೆಟ್ಟಿ ಅವರ ವಿರುದ್ಧ ಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸೆಲೆಬ್ರೆಟಿ ಮೇಕಪ್ ಕ್ಲಿನಿಕ್ ಮಾಲೀಕ, ಉದ್ಯಮಿ ಕಾರ್ತಿಕ್ ಪುತಾ (32) ನೀಡಿದ ದೂರಿನನ್ವಯ ಸಾಧನಾ ಶೆಟ್ಟಿ ವಿರುದ್ಧ ಸುಲಿಗೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯಿದೆ ಅನ್ವಯ ಪ್ರಕರಣ ದಾಖಲಿಸಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಬೆಂಗಳೂರು, ಹೈದರಾಬಾದ್‌ನಲ್ಲಿ ಮೇಕಪ್ ಕ್ಲಿನಿಕ್, ಹಾಸ್ಪಿಟಲ್ ನಡೆಸುತ್ತಿರುವ ಕಾರ್ತಿಕ್‌ಗೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ನಲ್ಲಿ ಇನ್ ಫ್ಲೂಯರ್ಸ್ ಆಗಿರುವ ಸಾಧನಾ 2024ರಲ್ಲಿ ಪರಿಚಯವಾಗಿದ್ದರು. ಕ್ಲಿನಿಕ್



ಪ್ರಮೋಷನ್ ಸಲುವಾಗಿ ಸಾಧನಾ ಆತ್ಮೀಯಳಾಗಿದ್ದು, ಹಲವು ಬಾರಿ ಭೇಟಿಯಾಗಿದ್ದೆವು. ಜತೆಗಿದ್ದ ಸಮಯದ ಖಾಸಗಿ ಫೋಟೊ, ವಿಡಿಯೋ ಹಾಗೂ ಸಂಭಾಷಣೆ ರೆಕಾರ್ಡಿಂಗ್ ಮುಂದಿಟ್ಟು ನನ್ನ ಪತ್ನಿ, ಕುಟುಂಬ ಸದಸ್ಯರಿಗೆ ಕಳುಹಿಸುವುದಾಗಿ ಬೆದರಿಸುತ್ತಿದ್ದರು. ಜತೆಗೆ, ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಮಾಡುವುದಾಗಿ ಹೆದರಿಸಿ 1.5 ಕೋಟಿ ರೂ. ನೀಡುವಂತೆ ಬೇಡಿಕೆ ಇಟ್ಟಿದ್ದಾರೆ ಎಂದು ಕಾರ್ತಿಕ್ ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ.

**ಐದು ಲಕ್ಷ ರೂ. ಹಾಗೂ ಐಫೋನ್ ಸುಲಿಗೆ:** ಮರ್ಯಾದೆಗೆ ಹೆದರಿ ಸಾಧನಾ ಶೆಟ್ಟಿ ಅವರ ಗೂಗಲ್ ಪೇ ಹಾಗೂ ಬ್ಯಾಂಕ್ ಖಾತೆಗೆ ಐದು ಲಕ್ಷ ರೂ. ವರ್ಗಾಯಿಸಿದ್ದೆ. ನಗದು ರೂಪದಲ್ಲಿ ಐದು ಲಕ್ಷ ರೂ. ಕೊಟ್ಟಿದ್ದೆ. ಜತೆಗೆ, ಒಂದು ಚಿನ್ನದ ಉಂಗುರ, ಒಂದು ಚಿನ್ನದ ಸರ ಕೊಟ್ಟಿದ್ದೆ. 1.5 ಲಕ್ಷ ರೂ. ಬೆಲೆ ಬಾಳುವ ಐ ಫೋನ್ ಕೂಡ ಕೊಡಿಸಿದ್ದೆ. ಇಷ್ಟಾದರೂ ಸಾಧನಾ ಶೆಟ್ಟಿ ಪುನಃ ಹಣಕ್ಕೆ ಬೇಡಿಕೆ ಮುಂದುವರಿಸಿದ್ದಾರೆ, ಎಂದು ಕಾರ್ತಿಕ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹಣ ಕೊಡಲು ಸಾಧ್ಯವಿಲ್ಲ ಎಂದಿದ್ದಕ್ಕೆ ಖಾಸಗಿ ವಿಡಿಯೋ ಸಂಭಾಷಣೆ ತುಣುಕುಗಳನ್ನು ನನ್ನ ಪತ್ನಿಗೆ ವ್ಯಾಟ್ಸಪ್ ಮಾಡಿದ್ದು, ಇದರಿಂದ ಕೌಟುಂಬಿಕ ಕಲಹ ಉಂಟಾಗಿದೆ. ಜತೆಗೆ, ಜಯನಗರದಲ್ಲಿರುವ ಆಸ್ಪತ್ರೆ ಬಳಿ ಬಂದು 1.5 ಕೋಟಿ ರೂ.ನೀಡಲೇಬೇಕು ಎಂದು ಬೆದರಿಸುತ್ತಿದ್ದಾರೆ. ಖಾಸಗಿ ವಿಡಿಯೋ, ಫೋಟೊಗಳನ್ನು ಪ್ರತ್ಯೇಕ ಪೆನ್‌ಡ್ರೈವ್‌ನಲ್ಲಿ ಇಟ್ಟಿರುವುದಾಗಿಯೂ ಹೇಳುತ್ತಿದ್ದಾರೆ .ಈ ನಿಟ್ಟಿನಲ್ಲಿ ನಿರಂತರ ಸುಲಿಗೆ ಮಾಡುತ್ತಿರುವ ಸಾಧನಾ ಶೆಟ್ಟಿ ವಿರುದ್ಧ ಕ್ರಮ ಜರುಗಿಸಬೇಕು ಎಂದು ದೂರಿನಲ್ಲಿ ಕಾರ್ತಿಕ್ ಆರೋಪಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ಕೆಲವು ಸಾಕ್ಷ್ಯಾಧಾರ ನೀಡುವಂತೆ ದೂರುದಾರರಿಗೆ ಸೂಚಿಸಲಾಗಿದೆ. ಆರೋಪಿ ಇನ್‌ಫ್ಲೂಯನ್ಸರ್‌ಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲು ತೀರ್ಮಾನಿಸಿದ್ದು, ಪ್ರಕರಣದ ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಅಬ್ದುಲ್ ಜಬ್ಬಾರ್ ವಿರುದ್ಧ ಕಠಿಣ ಕ್ರಮ

## ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಅಮಾನತು, ಕೆಪಿಸಿಸಿ ಅಧ್ಯಕ್ಷರ ಆದೇಶ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆಯ ಬೆನ್ನಲ್ಲೇ ಮಹತ್ವದ ಬೆಳವಣಿಗೆ ನಡೆದಿದೆ. ಸಿಎಂ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹ್ಮದ್ ವಜಾ ಬೆನ್ನಲ್ಲೇ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ವಜಾ ಮಾಡಲಾಗಿದೆ.

ಪಕ್ಷ ವಿರೋಧ ಚಟುವಟಿಕೆ ಹಿನ್ನೆಲೆಯಲ್ಲಿ ಅಬ್ದುಲ್ ಜಬ್ಬಾರ್ ಅವರನ್ನು ಅಮಾನತು ಮಾಡಲಾಗಿದೆ. ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಈ ಸಂಬಂಧಿಸಿದಂತೆ ಆದೇಶ ಹೊರಡಿಸಿದ್ದಾರೆ. ಈ ಬೆಳವಣಿಗೆ ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ.

**ಆಡಿಯೋ ಎಫೆಕ್ಟ್:** ದಾವಣಗೆರೆ ದಕ್ಷಿಣ ಕ್ಷೇತ್ರದ ಚುನಾವಣೆ ವಿಚಾರವಾಗಿ ಅಬ್ದುಲ್ ಜಬ್ಬಾರ್ ವಿರುದ್ಧ ಮತ್ತಷ್ಟು ದಾಖಲೆಗಳು ಲಭ್ಯವಾದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ. ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಈ ಕ್ರಮ ಆಗಿದೆ. ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

ಅಬ್ದುಲ್ ಜಬ್ಬಾರ್ ಆಡಿಯೋದಲ್ಲಿ ಕೆಲವೊಂದು ಮಹತ್ವದ ಅಂಶಗಳ ಉಲ್ಲೇಖ ಇದೆ. ಈ ದಾಖಲೆ ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಸಿಕ್ಕಿದೆ. ಶೋಕಾಸ್ ನೋಟಿಸ್ ನೀಡದೆ ಜಬ್ಬಾರ್ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ದಾವಣಗೆರೆ ದಕ್ಷಿಣ ಉಪ ಚುನಾವಣೆಯಲ್ಲಿ ಅಬ್ದುಲ್ ಜಬ್ಬಾರ್ ಅವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಜಮೀರ್ ಬೆಂಬಲವೂ ಅವರಿಗಿತ್ತು. ಆದರೆ ಹೈಕಮಾಂಡ್ ಜಬ್ಬಾರ್‌ಗೆ ಟಿಕೆಟ್ ನೀಡದೆ ಸಮರ್ಥ್‌ಗೆ ಟಿಕೆಟ್ ನೀಡಿತ್ತು. ಇದು ಜಬ್ಬಾರ್, ಜಮೀರ್, ಬಣದ ಅಸಮಾಧಾನಕ್ಕೆ ಕಾರಣವಾಗಿತ್ತು.



### ಆಡಿಯೋ ಸಾಕ್ಷಿ ಆಧಾರ

**ಮಹತ್ವದ ಬೆಳವಣಿಗೆಯೊಂದರಲ್ಲಿ ಪಕ್ಷ ವಿರೋಧಿ ಚಟುವಟಿಕೆಗಳ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಲಾಗಿದೆ. ಅಬ್ದುಲ್ ಜಬ್ಬಾರ್ ಅವರನ್ನು ಅಮಾನತುಗೊಳಿಸಿದ ಆದೇಶ ಪ್ರತಿಗೆ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಸಹಿ ಮಾಡಿದ್ದು, ಪಕ್ಷದ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸುವಂತಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ, ಅಬ್ದುಲ್ ಜಬ್ಬಾರ್ ಪಕ್ಷವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದರು ಎಂಬುದಕ್ಕೆ ಲಭ್ಯವಾದ ಆಡಿಯೋ ಸಾಕ್ಷಿಯನ್ನು ಆಧಾರವಾಗಿಟ್ಟುಕೊಂಡು, ಈ ಅಮಾನತು ನಡೆದಿದೆ.**

### ಅಬ್ದುಲ್ ಜಬ್ಬಾರ್ ಪ್ರತಿಕ್ರಿಯೆ

**ಪಕ್ಷದಿಂದ ಅಮಾನತುಗೊಂಡ ನಂತರ ಅಬ್ದುಲ್ ಜಬ್ಬಾರ್ ಪ್ರತಿಕ್ರಿಯೆ ನೀಡಿದ್ದಾರೆ. ಅಮಾನತು ಆದೇಶ ನನಗೆ ತಲುಪಿಲ್ಲ. ಆದೇಶದ ಪ್ರತಿ ಬಂದ ಬಳಿಕ ಉತ್ತರ ನೀಡುತ್ತೇನೆ. ಮಾಧ್ಯಮದ ಮೂಲಕವೇ ಈ ವಿಚಾರ ಗೊತ್ತಾಗಿದೆ ಎಂದರು. ನನ್ನ ವಿರುದ್ಧ ಯಾವುದಾದರೂ ದಾಖಲೆ ಇದ್ದರೆ ತೋರಿಸಲಿ. ಆಡಿಯೋ ಅಥವಾ ವಿಡಿಯೋ ಇದ್ದರೆ ತೋರಿಸಲಿ. ಒಬ್ಬರಿಗೊಂದು ನ್ಯಾಯ, ಇನ್ನೊಬ್ಬರಿಗೆ ಮತ್ತೊಂದು ನ್ಯಾಯ ನೀತಿ ಅನುಸರಿಸುತ್ತಿದ್ದಾರೆ. ಹಿಂದೆ ಏನೆಲ್ಲ ಆಗಿದೆ, ಅದನ್ನೇ ಬಿಟ್ಟಿದ್ದಾರೆ. ನಾನೇ ಖುದ್ದಾಗಿ ರಾಜೀನಾಮೆ ನೀಡಿದ್ದೇನೆ. ಅಲ್ಲಿನ ಮುಖಂಡರು ಆಗಲಿ, ಅಭ್ಯರ್ಥಿ ಆಗಲಿ, ಯಾರು ಕೂಡ ಬಂದು ಮಾತನಾಡಿಸಿಲ್ಲ. ಹಾಗಾಗಿಯೇ ನಾನೇ ರಾಜೀನಾಮೆ ನೀಡಿದ್ದೇನೆ ಎಂದು ಅಬ್ದುಲ್ ಜಬ್ಬಾರ್ ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ.**

ಈ ಹಿನ್ನೆಲೆಯಲ್ಲಿ ಅವರು ದಾವಣಗೆರೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿರಲಿಲ್ಲ. ಬದಲಾಗಿ ವಿರೋಧ ಪಕ್ಷಗಳಿಗೆ ಬೆಂಬಲ ನೀಡಿದ್ದಾರೆ ಎಂಬ ಆರೋಪ ಇದೆ. ಹೀಗಾಗಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತೆ ಎಂಬ ನಿರೀಕ್ಷೆ ಇತ್ತು. ಈ ನಡುವೆ ಅಬ್ದುಲ್ ಜಬ್ಬಾರ್ ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದರ ಬೆನ್ನಲ್ಲೇ ಇದೀಗ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಲಾಗಿದೆ.

# ಆಟೋ ಎಲ್‌ಪಿಜಿ ದರ ಹೆಚ್ಚಳ ಚಾಲಕರಿಗೆ ಆರ್ಥಿಕ ಹೊಡೆತ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಆಟೋರಿಕ್ಷಾ ಎಲ್‌ಪಿಜಿ ಅನಿಲದ ಸರಬರಾಜು ಪ್ರಮಾಣ ಹೆಚ್ಚಿದ್ದರೂ ಸಮಸ್ಯೆ ಇನ್ನೂ ಸಂಪೂರ್ಣ ಬಗೆಹರಿದಿಲ್ಲ. ದರ ಹೆಚ್ಚಳದಿಂದಾಗಿ ಚಾಲಕರಿಗೆ ಆರ್ಥಿಕ ಹೊಡೆತ ಬಿದ್ದಿದೆ. ಜಾಗತಿಕವಾಗಿ ನಡೆಯುತ್ತಿರುವ ಸಂಘರ್ಷದಿಂದಾಗಿ ಪೂರೈಕೆ ನಿಧಾನಗೊಂಡಿರುವುದರಿಂದ ಅನಿಲ ದರ ಏರಿಕೆಯಾಗಿದೆ. ಐಒಸಿಎಲ್, ಎಚ್‌ಪಿಸಿಎಲ್, ಬಿಪಿಸಿಎಲ್ ಮುಂತಾದ ಸರ್ಕಾರಿ ಸ್ವಾಮ್ಯದ ಬಂಕ್‌ಗಳಲ್ಲಿ ಯುದ್ಧ ಶುರುವಾಗುವ ಮೊದಲು ಎಲ್‌ಪಿಜಿಗೆ ಲೀಟರ್‌ಗೆ 69 ಇದ್ದಿದ್ದು, ಈಗ 90ರ ಆಸುಪಾಸಿನಲ್ಲಿದೆ. ಖಾಸಗಿ ಪೆಟ್ರೋಲ್ ಬಂಕ್‌ಗಳು ಎಲ್‌ಪಿಜಿ ಅನಿಲಕ್ಕೆ ಲೀಟರ್‌ಗೆ 120ರಿಂದ 130ರವರೆಗೆ ಹೆಚ್ಚಿಸಿವೆ. ನಾಯಂಡಹಳ್ಳಿ ಸಹಿತ ಹಲವು ಕಡೆ ಈಗಲೂ ಬಂಕ್‌ಗಳಲ್ಲಿ ದಾಸ್ತಾನು ಇಲ್ಲ ಎನ್ನುವ ಫಲಕಗಳನ್ನು ಅಳವಡಿಸಲಾಗಿದೆ.

ಎಲ್‌ಪಿಜಿ ಅನಿಲ ಕೊರತೆ ನಂತರ ದರದಲ್ಲೂ ಗಣನೀಯ ಏರಿಕೆ ಕಂಡು ಬಂದಿದೆ. ಇರಾನ್ ಹಾಗೂ ಇಸ್ರೇಲ್ ನಡುವೆ ಕದನ ವಿರಾಮ ಘೋಷಣೆಯಾಗಿದ್ದರೂ ಮತ್ತೆ ಯಾವ ಕ್ಷಣದಲ್ಲಾದರೂ ಯುದ್ಧದ ಸನ್ನಿವೇಶ ಎದುರಾಗಬಹುದು. ಇದರಿಂದ ಎಲ್‌ಪಿಜಿ ಸಮಸ್ಯೆ ಮತ್ತಷ್ಟು ಹೆಚ್ಚಬಹುದು' ಎಂದು ಆಟೋ ಚಾಲಕರು ಆತಂಕ ವ್ಯಕ್ತಪಡಿಸಿದರು. ಮೂರ್ನಾಲ್ಕು ವಾರದಿಂದ ಸಮಸ್ಯೆ ಎದುರಿಸುತ್ತಿದ್ದೇವೆ. ಕೆಲವು ದಿನಗಳಿಂದ ಸರಬರಾಜು ಪ್ರಮಾಣ ಹೆಚ್ಚಿದ್ದರೂ ಎಲ್ಲರಿಗೂ ಅನಿಲ ಸಿಗುತ್ತಿಲ್ಲ. ಹೀಗಾಗಿ ಹಲವು ಆಟೋ ಚಾಲಕರು ಕೆಲಸ ನಿಲ್ಲಿಸಿದ್ದಾರೆ. ಅನಿಲವಿಲ್ಲದ ಕಾರಣ ನಿತ್ಯ ಬರುತ್ತಿದ್ದ 400–500 ಆದಾಯಕ್ಕೂ ಕುತ್ತು ಬಂದಿದೆ. ಇದರಿಂದಾಗಿ ಬಾಡಿಗೆ ಕೊಡಲು ಆಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಸಾರಥಿ ಆಟೋ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದರು.

# ಅಂಬೇಡ್ಕರ್ ಕಾಲಾತೀತ ನಾಯಕ: ಸಂಸದ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಸಂವಿಧಾನ ತಜ್ಞ, ಸಂವಿಧಾನದ ಮೂಲಕ ಸಮಾನತೆಯ ಶಕ್ತಿ ತುಂಬಿದ ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ನಗರದ ವಿವಿಧೆಡೆ ಆಚರಿಸಲಾಯಿತು. ರಾಜಕೀಯ ಪಕ್ಷಗಳ ಕಚೇರಿ, ವಿಶ್ವವಿದ್ಯಾಲಯ, ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಜಯಂತಿಯಲ್ಲಿ ಅಂಬೇಡ್ಕರ್ ಅವರ ವಿಚಾರ, ಸಮಾಜದ ಸದ್ಯದ ಸನ್ನಿವೇಶದ ಕುರಿತು ಚರ್ಚೆಗಳು ನಡೆದವು. ಕೆಲವರು ಕಾಲಕ್ಕೆ ಸೀಮಿತವಾದ ನಾಯಕರಾದರೆ ಅಂಬೇಡ್ಕರ್ ಅವರು ಕಾಲಾತೀತ ನಾಯಕ ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಅಭಿಪ್ರಾಯಪಟ್ಟರು. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧನ ಪ್ರೇರಣೆ, ಬಸವಣ್ಣನ ಸಮಾನತೆ ಇವೆರಡನ್ನೂ ಪಡೆದ ಅಂಬೇಡ್ಕರ್ ಭಾರತಕ್ಕೆ ಸಮಾನತೆ, ಪ್ರಜಾಪ್ರಭುತ್ವ, ವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿರುವ ಶ್ರೇಷ್ಠ ವ್ಯಕ್ತಿ ಎಂದರು.

**ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಬೇಕು:** 21ನೇ ಶತಮಾನದಲ್ಲೂ ಭಾರತದಲ್ಲಿ ಜಾತಿ ಕ್ರೌರ್ಯ, ಮೇಲು– ಕೀಳು, ಭೇದ–ಭಾವ ಹಾಸು ಹೊಕ್ಕಾಗಿದೆ. ಜಾತಿ ವಿನಾಶದ ಕುರಿತು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಬೇಕು ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಅಭಿಪ್ರಾಯಪಟ್ಟರು. ಜ್ಞಾನಭಾರತಿ ಆವರಣದಲ್ಲಿ ಅಂಬೇಡ್ಕರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಆಳುವ ಸರ್ಕಾರಗಳು ಕಣ್ಣು ಮುಚ್ಚಿ ಕೂತಿವೆ. ದೇಶದಲ್ಲಿ ಅಲಿಖಿತ ಸಂವಿಧಾನ ಜಾರಿಯಲ್ಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರ ಬಹುಶಿಸ್ತೀಯ ಚಿಂತನಶೀಲ ಬರವಣಿಗೆಗಳ ಕುರಿತು ವಿದ್ಯಾರ್ಥಿಗಳು ಗಂಭೀರ ಅಧ್ಯಯನ ಮಾಡಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾಕುಮಾರಿ ತಿಳಿಸಿದರು.

# ನಜೀರ್–ಜಮೀರ್ ಭೇಟಿ : ಜೆಡಿಎಸ್ ಸೇರ್ಪಡೆಗೆ ಸಲಹೆ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭೆಯ ಉಪಚುನಾವಣೆ ಹಿನ್ನೆಲೆಯಲ್ಲಿ ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ವಜಾಗೊಂಡ ವಿಧಾನಪರಿಷತ್ ಸದಸ್ಯ ನಜೀರ್ ಅಹಮದ್ ಅವರ ಮನೆಗೆ ವಸತಿ, ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ಜಮೀರ್ ಅಹಮದ್ ಖಾನ್ ಭೇಟಿ ನೀಡಿ ಮಾತುಕತೆ ನಡೆಸಿದರು.

ಜಮೀರ್ ಅವರ ಈ ನಡೆಗೆ ಕಾಂಗ್ರೆಸ್‌ನಲ್ಲಿ ತೀವ್ರ ಅಸಮಾಧಾನಗಳು ಕೇಳಿ ಬಂದಿವೆ ಹೈಕಮಾಂಡ್ ಖುದ್ದು ಪರಿಶೀಲನೆ ನಡೆಸಿ, ಆದೇಶ ನೀಡಿದ ಬಳಿಕ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ನಜೀರ್ ಅಹಮದ್ ಅವರನ್ನು ವಜಾಗೊಳಿಸಲಾಗಿದೆ. ಹೈಕಮಾಂಡ್‌ನ ನಿಲುವಿಗೆ ವಿರುದ್ಧವಾಗಿ ನಜೀರ್ ಅವರ ಮನೆಗೆ ಜಮೀರ್ ಅಹಮದ್ ಖಾನ್ ಭೇಟಿ ನೀಡಿದ್ದಾರೆ ಎಂಬ ವ್ಯಾಖ್ಯಾನಗಳು ನಡೆಯುತ್ತಿವೆ. ಬುಧವಾರ ಬೆಳಗ್ಗೆ ನಜೀರ್ ಅವರ ಜಯಮಹಲ್ ಹತ್ತಿರ ಇರುವ ಸರ್ಕಾರಿ ನಿವಾಸಕ್ಕೆ ಜಮೀರ್ ಭೇಟಿ ನೀಡಿದರು. ಈ ವೇಳೆ ಇಬ್ಬರ ನಡುವೆ ರಹಸ್ಯ ಮಾತುಕತೆ ನಡೆದಿದೆ. ರಾಜ್ಯದಲ್ಲಿ ನಡೆಯುತ್ತಿರುವ ಷಡ್ಯಂತ್ರಗಳ ಬಗ್ಗೆ ದೆಹಲಿಗೆ ಹೋಗಿ ಹೈಕಮಾಂಡ್ ಗಮನಕ್ಕೆ ತರುವಂತೆ



ಜಮೀರ್ ಸಲಹೆ ಮಾಡಿದ್ದಾರೆ ಎನ್ನಲಾಗಿದೆ. 2026ರ ಜೂನ್‌ಗೆ ನಜೀರ್‌ಅಹಮದ್ ಅವರ ವಿಧಾನಪರಿಷತ್ ಸದಸ್ಯತ್ವ ಮುಕ್ತಾಯವಾಗಲಿದೆ. ಎರಡೂವರೆ ತಿಂಗಳು ಮಾತ್ರ ಅಧಿಕಾರಾವಧಿ ಇರುವುದರಿಂದ ಮತ್ತೊಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಲು ನಜೀರ್ ಪ್ರಯತ್ನಿಸಿದರು.

ಆದರೆ ದಾವಣಗೆರೆ ಉಪಚುನಾವಣೆ ಅವರ ರಾಜಕೀಯ ಭವಿಷ್ಯವನ್ನೇ ಮಂಕುಗೊಳಿಸಿದೆ. ಜಮೀರ್ ಅವರ ಮಾತು ಕೇಳಿ, ಪಕ್ಷ ವಿರುದ್ಧವಾಗಿ ನಡೆದುಕೊಂಡ ನಜೀರ್ ಅವರ ರಾಜಕೀಯ ಈಗ ಕವಲುದಾರಿಯಲ್ಲಿದೆ. ಕರ್ನಾಟಕದ ಮಟ್ಟಿಗೆ ಅಲ್ಪಸಂಖ್ಯಾತರಿಗೆ ಅವಕಾಶ ಕಲ್ಪಿಸಬಲ್ಲ ಬೇರೆ ಪಕ್ಷಗಳಿಲ್ಲ ಎಂಬ ಚಿಂತೆ ನಜೀರ್ ಅವರನ್ನು ಕಾಡುತ್ತಿದೆ. ಅನಿವಾರ್ಯವಾಗಿ ಕಾಂಗ್ರೆಸ್‌ನಲ್ಲೇ ಉಳಿಯಬೇಕು. ಇಲ್ಲ ಬಿಜೆಪಿ–ಜೆಡಿಎಸ್‌ನತ್ತ ಮುಖ ಮಾಡಬೇಕು. ಬಿಜೆಪಿಯಲ್ಲಿ ಅಲ್ಪಸಂಖ್ಯಾತರಿಗೆ ಅವಕಾಶಗಳ ಸಂಖ್ಯೆ ಕಡಿಮೆ. ಜೆಡಿಎಸ್ ಪಕ್ಷವೂ ಎನ್‌ಡಿಎ ಸೇರಿದ ಮೇಲೆ ಅಲ್ಪಸಂಖ್ಯಾತರ ಮೇಲೆ ಹೆಚ್ಚಿನ ಒಲವು ವ್ಯಕ್ತಪಡಿಸಿದಂತೆ ಕಂಡು ಬಂದಿಲ್ಲ. ಹೀಗಾಗಿ ನಜೀರ್ ಅವರಿಗೆ ಇಕ್ಕಟ್ಟಿನ ಪರಿಸ್ಥಿತಿ ನಿರ್ಮಾಣವಾಗಿದೆ.

ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ, ವಿಧಾನಪರಿಷತ್ ಸದಸ್ಯತ್ವ ಎಲ್ಲವೂ ಏಕಾಏಕಿ ಬುಡಮೇಲಾಗಿದೆ. ಕೋಲಾರ ಜಿಲ್ಲೆಯ ರಾಜಕಾರಣದ ಮಟ್ಟಿಗೆ ನಜೀರ್ ಅಪ್ರಸ್ತುತ ಎನ್ನುವಂತಹ ಪರಿಸ್ಥಿ ನಿರ್ಮಾಣ ಆಗುತ್ತಿದೆ. ಮೂಲಗಳ ಪ್ರಕಾರ ಜಮೀರ್ ಅವರು ನಜೀರ್ ಅಹಮದ್ ಅವರನ್ನು ಜೆಡಿಎಸ್ ಪಕ್ಷಕ್ಕೆ ಸೇರುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್ ಪಕ್ಷದಲ್ಲಿ ದಿನೇ ದಿನೇ ಉಸಿರುಗಟ್ಟಿಸುವ ವಾತಾವರಣ ನಿರ್ಮಾಣವಾಗುತ್ತಿದೆ. ಮುಂದಿನ ದಿನಗಳಲ್ಲಿ ತಾವು ಕೂಡ ಜೆಡಿಎಸ್ ಸೇರುವ ಬಗ್ಗೆ ಪರಿಶೀಲನೆ ನಡೆಸಲಿದ್ದು, ಕಾಂಗ್ರೆಸ್‌ನಲ್ಲಿನ ಬೆಳವಣಿಗೆಗಳನ್ನು ಪರಾಮರ್ಶಿಸಿ ನಿರ್ಣಯಿಸುವುದಾಗಿ ತಿಳಿಸಿದ್ದಾರೆ ಎನ್ನಲಾಗಿದೆ.

# ಅಯೋಧ್ಯೆ ಶ್ರೀರಾಮನ ದರ್ಶನ ಪಡೆದ ಕರ್ನಾಟಕದ ಕಾಂಗ್ರೆಸ್ ಶಾಸಕರು

• ಉದಯವಾಹಿನಿ, ಬೆಂಗಳೂರು

ಸಂಪುಟ ಪುನರ್ ರಚನೆಯಾಗಬೇಕೆಂದು ಹಠ ಹಿಡಿದಿದ್ದ ಹಿರಿಯ ಶಾಸಕರು ಬುಧವಾರ ಅಯೋಧ್ಯೆಗೆ ಭೇಟಿ ನೀಡಿದ್ದು ಶ್ರೀರಾಮನ ದರ್ಶನ ಪಡೆದಿದ್ದಾರೆ. ಹಿರಿಯ ಶಾಸಕ ಟಿ.ಬಿ.ಜಯಚಂದ್ರ, ಹಂಪನಗೌಡ ಬಾದರ್ಲಿ, ವೈ.ವಿ. ಪಾಟೀಲ್, ಜಿ.ಎಸ್.ಪಾಟೀಲ್, ಬಸವರಾಜ್ ಶಿವಣ್ಣನವರ್, ಬಿ. ಶಿವಣ್ಣ, ಡಿ.ಜಿ.ಶಾಂತನಗೌಡ, ಜಿ.ಟಿ.ಪಾಟೀಲ್, ಯಶ್ವಂತರಾಯಗೌಡ, ಕೆ.ಷಡಕ್ಷರಿ, ಅಶೋಕ್ ಪಟ್ಟಣ್, ರಾಘವೇಂದ್ರ ಹಿಟ್ನಾಳ್ ಸೇರಿದಂತೆ ಒಟ್ಟು 15 ಶಾಸಕರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಟಿ.ಬಿ.ಜಯಚಂದ್ರ ಅಯೋಧ್ಯೆಗೆ ಭೇಟಿ ನೀಡಬೇಕು. ಶ್ರೀರಾಮನ ದರ್ಶನ ಪಡೆಯಬೇಕು ಎಂಬುದು ತಮ್ಮ ಜೀವಮಾನದ ಕನಸಾಗಿತ್ತು. ಅದು ಇಂದು ನನಸಾಗಿದೆ ಎಂದು ಹೇಳಿಕೊಂಡಿದ್ದಾರೆ. ಅಯೋಧ್ಯೆಗೂ–ಕರ್ನಾಟಕಕ್ಕೂ ಅವಿನಾಭಾವ


ಉದಯವಾಹಿನಿ ಚಿತ್ರ

ಸಂಬಂಧವಿದೆ. ಬಾಲರಾಮನ ಪ್ರತಿಮೆಯನ್ನು ವಿನ್ಯಾಸಗೊಳಿಸಿದ್ದು, ಕರ್ನಾಟಕದ ಶಿಲ್ಪಿ. ಯೋಗಿರಾಜ್. ರಾಮಾಯಣದಲ್ಲಿ ರಾಮನಭಂಟ ಆಂಜನೇಯ ಹುಟ್ಟಿದ್ದು ಕಿಷ್ಕಿಂಧೆಯಲ್ಲಿ. ಹೀಗಾಗಿ ಕರ್ನಾಟಕ ಮತ್ತು ಅಯೋಧ್ಯೆ ನಡುವೆ ಉತ್ತಮ ಸಂಬಂಧಗಳಿವೆ ಎಂದರು.

**ದೆಹಲಿಯಲ್ಲಿ ವಾಸ್ತವ್ಯ:** 20ಕ್ಕೂ ಹೆಚ್ಚು ಶಾಸಕರು ಭಾನುವಾರದಿಂದಲೂ ದೆಹಲಿಯಲ್ಲೇ ಬೀಡು ಬಿಟ್ಟಿದ್ದು, ಹೈಕಮಾಂಡ್‌ನ ನಾಯಕರೆಲ್ಲಾ ವಿವಿಧ ಚುನಾವಣೆಗಳ ಕಾರ್ಯದೊತ್ತಡದಲ್ಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಕರ್ನಾಟಕದವರೇ ಆಗಿದ್ದರಿಂದಾಗಿ ಹಿರಿಯ ಶಾಸಕರ ನಿಯೋಗಕ್ಕೆ ಶನಿವಾರವೇ ಸಮಯ ಕೊಟ್ಟು ಭೇಟಿ ಮಾಡಿದ್ದರು.

ಈವರೆಗೂ ರಾಹುಲ್‌ಗಾಂಧಿ, ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಶಾಸಕರ ನಿಯೋಗವನ್ನು ಭೇಟಿ ಮಾಡಿಲ್ಲ. ಮಲ್ಲಿಕಾರ್ಜುನ್ ಖರ್ಗೆಯವರಿಂದ ಸಂಪುಟ ಪುನರ್ ರಚನೆ ಭರವಸೆ ದೊರೆತಿದೆ. ಇದು ಒಂದು ಹಂತದಲ್ಲಿ ಹಿರಿಯ ಶಾಸಕರಿಗೆ ಸಂತಸ ತಂದಿದ್ದರೆ, ಮತ್ತೊಂದು ರೀತಿಯಲ್ಲಿ ಯಾರಿಗೆ ಅವಕಾಶ ಸಿಗುತ್ತದೆ ಎಂಬ ಗೊಂದಲ ಹೆಚ್ಚಾಗಿದೆ. ಸಚಿವ ಸಂಪುಟದಲ್ಲಿ ಈಗಾಗಲೇ ಅವಕಾಶ ಪಡೆದವರನ್ನು ಬದಲಾವಣೆ ಮಾಡಿ, ಹೊಸಬರಿಗೆ ಮತ್ತು ಯುವ ಉತ್ಸಾಹಿಗಳಿಗೆ ಅವಕಾಶ ನೀಡಬೇಕೆಂಬುದು ಹಿರಿಯ ಶಾಸಕರ ಅಭಿಪ್ರಾಯಗಳಾಗಿವೆ. ಮಲ್ಲಿಕಾರ್ಜುನ್ ಖರ್ಗೆಯವರು ಸಂಪುಟ ಪುನರ್ ರಚನೆಯಾಗಲಿದೆ ಎಂದು ಹೇಳಿದ್ದಾರೆ. ಆದರೆ ರಾಹುಲ್ ಗಾಂಧಿಯವರ ಕಡೆಯಿಂದ ಈವರೆಗೂ ಯಾವುದೇ ಸಂದೇಶ ತಲುಪಿಲ್ಲ. ಹೀಗಾಗಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ, ರಾಹುಲ್ ಗಾಂಧಿ ಅವರ ಅಭಿಪ್ರಾಯವನ್ನು ಪಡೆದುಕೊಳ್ಳಲು ಶಾಸಕರ ನಿಯೋಗ ಬಯಸಿದೆ. ಹೀಗಾಗಿ ದೆಹಲಿಯಲ್ಲೇ ಬೀಡುಬಿಟ್ಟು ವರಿಷ್ಠರ ಭೇಟಿಗಾಗಿ ಕಾದು ಕುಳಿತಿದ್ದಾರೆ.


# ನಾನಾ ಜಿಲ್ಲೆಗಳಲ್ಲಿ ಮುಂದಿನ 5 ದಿನಗಳ ಕಾಲ ತಾಪಮಾನ ಏರಿಕೆ

## ಕರಾವಳಿ ಕರ್ನಾಟಕದಾದ್ಯಂತ ಬಿಸಿ, ತೇವಾಂಶದ ವಾತಾವರಣ, ಉತ್ತರಕನ್ನಡ ಜಿಲ್ಲೆಯಲ್ಲಿ ಒಣಹವೆಯೊಂದಿಗೆ ಬಿಸಿ ವಾತವಾರಣ ಮುಂದುವರಿಯಲಿದೆ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರು ಸೇರಿದಂತೆ ನಾನಾ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ತಾಪಮಾನ ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಏ. 18 ರವರೆಗೆ ಕರಾವಳಿ ಕರ್ನಾಟಕದಾದ್ಯಂತ ಬಿಸಿ, ತೇವಾಂಶದ ವಾತಾವರಣ ಇರುವ ಸಾಧ್ಯತೆಯಿದೆ. ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಬಿಸಿಗಾಳಿ ಹೆಚ್ಚಾಗಲಿದೆ ಎಂದು ಮುನ್ನೆಚ್ಚರಿಕೆ ನೀಡಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಒಂದು, ಎರಡು ಸ್ಥಳಗಳಲ್ಲಿ ಬಿಸಿ, ತೇವಾಂಶದೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಣಹವೆಯೊಂದಿಗೆ ಬಿಸಿ ವಾತವಾರಣ ಮುಂದುವರಿಯಲಿದೆ. ಬೆಳಗಾವಿ, ಧಾರವಾಡ, ಹಾವೇರಿ, ರಾಯಚೂರು ಜಿಲ್ಲೆಗಳಲ್ಲಿ ಬಿರುಗಾಳಿಯೊಂದಿಗೆ ಹಗುರ ಮಳೆಯಾಗುವ ಸಾಧ್ಯತೆಯಿದೆ. ಬೀದರ್, ವಿಜಯಪುರ, ಬಾಗಲಕೋಟೆ,



ಹಗುರ ಮಳೆಯಾಗುವ ಸಾಧ್ಯತೆ

ಗದಗ, ಕೊಪ್ಪಳ, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಲ್ಲಿ ಉಷ್ಣ ಮಾರುತದ ವಾತಾವರಣ ಇರುವ ಸಾಧ್ಯತೆಯಿದೆ.

**ಬಿಸಿಗಾಳಿ ಮುಂದುವರಿಯಲಿದೆ:** ದಕ್ಷಿಣ ಒಳನಾಡಿನ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಹಗುರ ಸಾಧಾರಣ ಮಳೆಯಾಗಲಿದೆ. ಏ.16 ರಂದು ಕರಾವಳಿ ಕರ್ನಾಟಕ ಭಾಗದ ದಕ್ಷಿಣ ಕನ್ನಡ, ಉಡುಪಿ, ಜಿಲ್ಲೆಗಳಲ್ಲಿ ಬಿಸಿಗಾಳಿ ಮುಂದುವರಿಯಲಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ರಾಯಚೂರು, ಹಾವೇರಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬಿಸಿಗಾಳಿ, ಉಷ್ಣಾಂಶದ ವಾತಾವರಣ ಇರಲಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಜಿಲ್ಲೆಗಳಲ್ಲಿ ತಾಪಮಾನ ಏರಿಕೆಯಾಗಲಿದ್ದು, ಉಳಿದ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ.

### ಹಗುರ ಮಳೆಯಾಗುವ ಸಾಧ್ಯತೆ

**ಏ.17 ರಂದು ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಭಾಗದಲ್ಲಿ ಬಿಸಿಗಾಳಿ ಮುಂದುವರಿಯಲಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಸಿಲಿನ ವಾತಾವರಣ ಮುಂದುವರಿಯಲಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಒಂದೆರಡು ಕಡೆ ಹಗುರದಿಂದ ಸಾಧಾರಣ ಮಳೆಯಾಗಲಿದೆ. ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದ್ದು, ಉಳಿದ ಕಡೆಗಳಲ್ಲಿ ಒಣಹವೆ ಮುಂದು ವರಿಯಲಿದೆ.**

### ಬಿಸಿಗಾಳಿಯ ತೀವ್ರತೆ ಹೆಚ್ಚಾಗುವ ಮುನ್ನೆಚ್ಚರಿಕೆ

**ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳ ಕಾಲ ಬಿಸಿಲು ಹೆಚ್ಚಾಗಲಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಿಸಿ ಹಾಗೂ ತೇವಾಂಶದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದ ಒಳನಾಡಿನ ಜಿಲ್ಲೆಗಳಲ್ಲಿ ಬಿಸಿಗಾಳಿಯ ತೀವ್ರತೆ ಹೆಚ್ಚಾಗುವ ಮುನ್ನೆಚ್ಚರಿಕೆ ನೀಡಲಾಗಿದೆ.**

## ಶ್ರೀ ಶ್ರೀನಿವಾಸ ಕಲ್ಯಾಣ ಪ್ರವಚನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಶ್ರೀ ಕಲ್ಯಾ ನರಸಿಂಹ ಮೂರ್ತಾಚಾರ್ ಇವರಿಂದ ಶ್ರೀ ಶ್ರೀನಿವಾಸ ಕಲ್ಯಾಣ ಪ್ರವಚನ. ಸಮಯ ಪ್ರತಿದಿನ ಸಂಜೆ 7–00ಕ್ಕೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ ಈಜುಕೊಳದ ಬಡಾವಣೆ, ಸುಧೀಂದ್ರನಗರ. ಬೆಂಗಳೂರು 560003

ಸುಬ್ರಹ್ಮಣ್ಯನಗರ ಸೋಸಲೆ ಶ್ರೀ ವ್ಯಾಸರಾಜ ಮಠ ಸುಬ್ರಹ್ಮಣ್ಯನಗರ ಶಾಖೆಯಲ್ಲಿ ಶ್ರೀಚಂದ್ರಶೇಖರ ಆಚಾರ್ಯರಿಂದ ಶ್ರೀ ಶ್ರೀನಿವಾಸ ಕಲ್ಯಾಣ ಪ್ರವಚನ. ಸಮಯ ಪ್ರತಿದಿನ ಸಂಜೆ 6–00ಕ್ಕೆ ಸ್ಥಳ: ಶ್ರೀ ವ್ಯಾಸರಾಜ ಮಠ, 5ನೇ ಮುಖ್ಯರಸ್ತೆ, 'ಎ'ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು–560010 ಪ್ರಕಾಶನಗರ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಖೇಡಾ ವೇದವ್ಯಾಸಾಚಾರ್ಯರಿಂದ ಶ್ರೀನಿವಾಸ ಕಲ್ಯಾಣ ಪ್ರವಚನ. ಸಮಯ ಪ್ರತಿದಿನ ಸಂಜೆ 7–00ಕ್ಕೆ. ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ 6ನೇ ಅಡ್ಡರಸ್ತೆ ಪ್ರಕಾಶನಗರ, ಬೆಂಗಳೂರು–560021. ಹೆಚ್.ಎಸ್.ಆರ್. ಲೇಔಟ್ ಶ್ರೀಸುಬ್ರಹ್ಮಣ್ಯ ಮಠದಲ್ಲಿ ಶ್ರೀ ಕಲ್ಲಾಪುರ ಪವಮಾನಾಚಾರ್ಯರಿಂದ ಏಪ್ರಿಲ್ 19 ರಿಂದ 25ರ ವರೆಗೆ ಶ್ರೀನಿವಾಸ ಕಲ್ಯಾಣ ಪ್ರವಚನ. ಸಮಯ ಪ್ರತಿದಿನ ಸಂಜೆ 6–15ಕ್ಕೆ ಸ್ಥಳ: ಶ್ರೀಸುಬ್ರಹ್ಮಣ್ಯ ಮಠ, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು.

## ಭಕ್ತಿ ಪುಷ್ಪಾಂಜಲಿ ಸಮೂಹದ 7ನೇ ವಾರ್ಷಿಕೋತ್ಸವ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಭಕ್ತಿ ಪುಷ್ಪಾಂಜಲಿ ಮುಖಪುಟ ಸಮೂಹದ 7ನೇ ವಾರ್ಷಿಕೋತ್ಸವವು ನಗರದ ಕತ್ರಿಗುಪ್ಪೆಯ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ವಿಜೃಂಭಣೆಯಿಂದ ನಡೆಯಿತು. ಹರಿದಾಸರತ್ನ ಶ್ರೀ ವರಾಹಹರಿವಿಠಲದಾಸರಿಂದ ದೀಪಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಕು. ಸಾನ್ವಿ ಜೋಯಿಸ್ ಹಾಗೂ ಕು. ಐಕ್ಯ ಕುಲಕರ್ಣಿ ಅವರಿಂದ ಗಣಪತಿ ಸ್ತುತಿ ನೆರವೇರಿತು. ಸಮೂಹದ ಸಂಸ್ಥಾಪಕಿ ಶ್ರೀಮತಿ ವಿಜಯಲಕ್ಷ್ಮಿ ಮಯ್ಯ ಅವರು ವರದಿ ವಾಚಿಸಿದರು. ಬಳಿಕ ಸದಸ್ಯರಿಂದ ಗುಂಪುಗಾಯನ, ಕೋಲಾಟ, ಸಮೂಹ ಗೀತೆ, ಮಕ್ಕಳಿಂದ ಶ್ಲೋಕ ಪಠಣ ಹಾಗೂ ನೃತ್ಯ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನಸೆಳೆದವು. ಭಂಡಾರಕೇರಿ ಮಠದ ಪೀಠಾಧೀಶರಾದ ಶ್ರೀ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿಯವರಿಂದ ಹರಿದಾಸಿನಿ ಡಾ. ಎನ್. ಜಿ. ವಿಜಯಲಕ್ಷ್ಮಿ ಅವರ 27ನೇ ಕೃತಿ ''ಅಯೋಧ್ಯ ಕ್ಷೇತ್ರ ಪ್ರವಾಸ ಕಥನ ಮತ್ತು ಶ್ರೀರಾಮ ಭಜನಾಮೃತ'' ಬಿಡುಗಡೆಯಾಯಿತು. ಈ ವೇಳೆ ಸ್ವಾಮೀಜಿಯವರು ಸಮೂಹದ ಹಿರಿಯ ಸದಸ್ಯರನ್ನು ಸನ್ಮಾನಿಸಿ, ವಿವಿಧ ಥೀಮ್‌ಗಳಲ್ಲಿ ಭಾಗವಹಿಸಿದ ಸದಸ್ಯರಿಗೆ ಅಭಿನಂದನಾ ಪತ್ರಗಳನ್ನು ವಿತರಿಸಿದರು. ತಮ್ಮ ಆಶೀರ್ವಚನದಲ್ಲಿ ಸಮೂಹವು ದಾಸಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಹರಿದಾಸಿನಿ ಬಿ. ಕೆ. ಶ್ರೀಮತಿರಾವ್ ಅವರ ಕೃತಿಗಳನ್ನು ಪ್ರಶಂಸಿಸಿದರು. ಸಮೂಹದ ನಿರ್ವಾಹಕಿ ಶ್ರೀಮತಿ ಸುಮನ ಪ್ರಭಾಕರ್ ವಂದನಾರ್ಪಣೆ ಸಲ್ಲಿಸಿದರು.

## ಹಿಂದುಳಿದವರ ಹಕ್ಕುಗಳಿಗಾಗಿ ತಮ್ಮ ಜೀವನವನ್ನೇ ಅರ್ಪಿಸಿದ ಅಂಬೇಡ್ಕರ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಅಸಮಾನತೆಯ ವಿರುದ್ಧ ಹೋರಾಡಿ, ಹಿಂದುಳಿದವರ ಹಕ್ಕುಗಳಿಗಾಗಿ ತಮ್ಮ ಜೀವನವನ್ನೇ ಅರ್ಪಿಸಿದ ಮಹಾನ್ ವ್ಯಕ್ತಿತ್ವ ಅಂಬೇಡ್ಕರ್ ಅವರದ್ದು ಎಂದು ಮಾಜಿ ಗ್ರಾಮ ಪಂಚಾಯತಿ ಸದಸ್ಯ ಕೆ.ಕುಮಾರ್‌ಹೇಳಿದರು. ಮಹದೇವಪುರ ಕ್ಷೇತ್ರದ ಹಿರಂಡಹಳ್ಳಿ ಗ್ರಾಮದಲ್ಲಿ ಮಹಾನಾಯಕ ಯುವಕರ ಸಂಘ ಆಯೋಜಿಸಿದ ಅಂಬೇಡ್ಕರ್ ಜಯಂತಿ ಉತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮತನಾಡಿದರು.

ಉಪನ್ಯಾಸಕರು. ವಕೀಲರಾದ ಮುನಿರಾಜ. ಹೆಚ್ ಎಂ ಮತನಾಡಿ, ಶಿಕ್ಷಣವೇ ಮುಕ್ತಿಯ ದಾರಿ ಎಂದು ಅವರು ಹೇಳಿದ ಮಾತುಗಳು ನಮ್ಮ ಯುವಕರಿಗೆ ಬೆಳಕು ನೀಡುತ್ತಿವೆ. ಸಮಾಜದ ಪ್ರತಿಯೊಂದು ವರ್ಗವೂ ಬೆಳೆಯಬೇಕು ಎಂಬುದು ಅವರ ಕನಸು ಎಂದರು. ಇದೇ ವೇಳೆ ಸಾವಿರಾರು ಜನರಿಗೆ ನೀರು ಮಜ್ಜಿಗೆ,ಬೆಲ್ಲದ ಪಾನಕ, ಕೋಸಂಬರಿ, ಅನ್ನ ದಾಸೋಹವನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಮುಖಂಡರು, ದಲಿತ ನಾಯಕರು ಮತ್ತಿತರರು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು.

## ವಿಜಯಪುರದಲ್ಲಿ ಉದ್ಯಮಿ ಹತ್ಯೆ ಪ್ರಕರಣ ಹಂತಕರ ಪತ್ತೆಗೆ 3 ತಂಡ ರಚನೆ

• ಉದಯವಾಹಿನಿ, ಬೆಂಗಳೂರು

ವಿಜಯಪುರದಲ್ಲಿ ನಿನ್ನೆ ಹಾಡಹಗಲೇ ರಿಯಲ್ ಎಸ್ಟೇಟ್ ಉದ್ಯಮಿ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿ ಪರಾರಿಯಾಗಿರುವ ದುಷ್ಕರ್ಮಿಗಳ ಬಂಧನಕ್ಕೆ ಮೂರು ತಂಡಗಳನ್ನು ರಚಿಸಲಾಗಿದೆ. ಒಂದು ತಂಡ ಮಹಾರಾಷ್ಟ್ರಕ್ಕೆ, ಮತ್ತೊಂದು ತಂಡ ಗೋವಾಕ್ಕೆ ಹೋಗಿದ್ದು, ಇನ್ನೊಂದು ತಂಡ ರಾಜ್ಯದಲ್ಲಿ ಶೋಧ ನಡೆಸುತ್ತಿದೆ.

ತಾಂಗರೂನ ದೊಡ್ಡಿಯ ನಿವಾಸಿ, ಉದ್ಯಮಿ ರಾಜು ಖಡೆ (40) ಅವರ ಚಲನವಲನಗಳ ಮೇಲೆ ಹಂತಕರು ಹಲವು ದಿನಗಳಿಂದ ಕಣ್ಣಿಟ್ಟಿದ್ದರು. ಅವರು ಜೀಪಿನಲ್ಲಿ ವಿಜಯಪುರಕ್ಕೆ ಬರುತ್ತಿರುವ ವಿಷಯ ತಿಳಿದು ನಿನ್ನೆ ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಹೊರವಲಯದ ಅಲಿಯಾಬಾದ್ ಬಳಿ ದುಷ್ಕರ್ಮಿಗಳು ಹೊಂಚು ಹಾಕಿದ್ದಾರೆ. ಈ ಜೀಪು ಬರುತ್ತಿದ್ದಂತೆ ಹಂತಕರು ಟಿಪ್ಪರ್ ವಾಹನದಲ್ಲಿ ಮುಖಾಮುಖಿ ಡಿಕ್ಕಿ ಮಾಡಿ ನಂತರ ಏಕಾಏಕಿ ಜೀಪಿನ ಮೇಲೆ ದಾಳಿ ನಡೆಸಿ ಬಾಗಿಲು ತೆರೆದುಕೊಳ್ಳದಂತೆ ಕಲ್ಲುಗಳನ್ನು ಎತ್ತಿಹಾಕಿ, ರಾಜು ಮೇಲೆ ಗುಂಡಿನ ದಾಳಿ ನಡೆಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಹಳೆ ವೈಷಮ್ಯದಿಂದ ಈ ಭೀಕರ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆರೋಪಿಗಳ ಬಂಧನದ ನಂತರವಷ್ಟೇ ಉದ್ಯಮಿ ಕೊಲೆಗೆ ನಿಖರ ಕಾರಣವೇನು ಎಂಬುವುದು ಗೊತ್ತಾಗಲಿದೆ. ವಿಜಯಪುರ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

## ಐದು ವರ್ಷವೂ ಸಿದ್ದರಾಮಯ್ಯ ಮುಖ್ಯಮಂತ್ರಿ: ಯತೀಂದ್ರ

• ಉದಯವಾಹಿನಿ, ಮೈಸೂರು

ಸಿದ್ದರಾಮಯ್ಯ ಅವರೇ ಐದು ವರ್ಷವೂ ಸಿಎಂ ಆಗಿರುತ್ತಾರೆ ಎಂದು ಪುತ್ರ, ವಿಧಾನಪರಿಷತ್ ಸದಸ್ಯ, ಡಾ.ಯತೀಂದ್ರ ಸಿದ್ದರಾಮಯ್ಯ ಪುನರುಚ್ಚರಿಸಿದರು. ಇಲ್ಲಿ ಬುಧವಾರ ಪತ್ರಕರ್ತರಿಗೆ ಪ್ರತಿಕ್ರಿಯಿಸಿದ ಅವರು, ಈ ವಿಚಾರವನ್ನು ಖುದ್ದು ಮುಖ್ಯಮಂತ್ರಿಯವರೇ ವಿಧಾನಮಂಡಲ ಅಧಿವೇಶನದಲ್ಲಿ ಸ್ಪಷ್ಟಪಡಿಸಿದ್ದಾರೆ. ಅವರೇ ಹೇಳಿರುವುದರಿಂದ ಬೇರೆ ಚರ್ಚೆಯೇ ಇಲ್ಲ. ಎರಡೂವರೆ ವರ್ಷದಿಂದಲೂ ನಾನು ಇದನ್ನೇ ಹೇಳುತ್ತಿದ್ದೇನೆ. ಈಗಲೂ ಅದನ್ನೇ ಹೇಳುತ್ತೇನೆ. ತಂದೆಯ ಮಾತೇ ನನ್ನದೂ ಎಂದು ಹೇಳಿದರು. ಸಚಿವ ಸಂಪುಟ ಪುನರಚನೆ ಮಾಡುವಂತೆ ಕೇಳಲೆಂದು ಶಾಸಕರು ನವದೆಹಲಿಗೆ ಹೋಗಿದ್ದಾರೆ. ಶಾಸಕರು ಅಲ್ಲಿಗೆ ಹೋಗಿರುವುದಕ್ಕೂ, ಉಪ ಚುನಾವಣೆ ಫಲಿತಾಂಶಕ್ಕೂ ಸಿಎಂ ಸ್ಥಾನಕ್ಕೂ ಸಂಬಂಧವಿಲ್ಲ. ನಮ್ಮ ಸರ್ಕಾರ ಭದ್ರವಾಗಿದೆ. ಸಿಎಂ ಸ್ಥಾನವೂ ಭದ್ರವಾಗಿದೆ. ನಾನು ಎಷ್ಟು ಸಲ ಇದನ್ನು ಸ್ಪಷ್ಟಪಡಿಸಲಿ ಹೇಳಿ' ಎಂದು ಕೇಳಿದರು. 'ಸರ್ಕಾರಕ್ಕೆ ಮೂರು ವರ್ಷ ಸಮೀಪಿಸುತ್ತಿದೆ. ಹೀಗಾಗಿ, ಸಂಪುಟ ಪುನರ್‌ರಚನೆಗೆ ಕೇಳುತ್ತಿದ್ದಾರೆ. ಇದನ್ನು ಮಾಡಬೇಕಾಗಿದ್ದು, ಯಾವಾಗ ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ತಂದೆ ಸಿಎಂ ಆಗಿರುವವರೆಗೂ ನಾನು ಆ ಸ್ಥಾನ ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. 'ಮುಖ್ಯಮಂತ್ರಿಯು ಪುತ್ರನನ್ನು ಹಣ ವಸೂಲಿಗೆ ಇಟ್ಟುಕೊಂಡಿದ್ದಾರೆ ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನನ್ನ ಮೇಲಿನ ಆರೋಪಕ್ಕೆ ಒಂದೇ ಒಂದು ಸಾಕ್ಷಿ ಕೊಡಿ. ವರ್ಗಾವಣೆ ದಂಧೆ ಎನ್ನುತ್ತಾರೆ, ಅದಕ್ಕೆ ಸಾಕ್ಷಿ ಇದೆಯೇ ಸಾಕ್ಷಿಯೇ ಇಲ್ಲದೆ ಎರಡೂವರೆ ವರ್ಷಗಳಿಂದ ನನ್ನ ವಿರುದ್ಧ ಕೇವಲ ಆರೋಪ ಮಾಡುತ್ತಿದ್ದಾರೆ.

ಸಾಕ್ಷಿ ಕೊಟ್ಟು ಆರೋಪಿಸಿದರೆ ಬೆಲೆ ಎಂದರು. ಕುಮಾರಸ್ವಾಮಿ ವಸೂಲಿ ಮಾಡುತ್ತಿದ್ದಾರೆ ಎಂಬ ನಾನೂ ಹೇಳಬಹುದಲ್ಲವೇ ಸಾಕ್ಷಿಯೇ ಇಲ್ಲದೆ ಆರೋಪಿಸುವುದು ಸುಲಭ. ನಾನು ಆ ರೀತಿ ಮಾಡುವುದಿಲ್ಲ. ನಮ್ಮ ಸರ್ಕಾರ ಬಂದಾಗಿನಿಂದ ವಿರೋಧ ಪಕ್ಷದವರ ಕಣ್ಣಿಗೆ ನಾನೇ ಟಾರ್ಗೆಟ್. ಜನರಲ್ಲಿ ನನ್ನ ಮೇಲೆ ತಪ್ಪು ಅಭಿಪ್ರಾಯ ಮೂಡಿಸಲು ಈ ರೀತಿ ಸುಳ್ಳು ಹೇಳುತ್ತಿದ್ದಾರೆ ಎಂದು ಹೇಳಿದರು ತಂದೆ ನನ್ನನ್ನು ವಸೂಲಿಗಾಗಿ ನೇಮಿಸಿಕೊಂಡಿಲ್ಲ. ನಾನು ಯಾವತ್ತೂ ವಸೂಲಿ ಮಾಡಿಲ್ಲ ತಂದೆಯ ಪರವಾಗಿ ವರುಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು. ನಮ್ಮದು ಕುಟುಂಬ ರಾಜಕಾರಣ ಅಲ್ಲ ಎಂದು ಪ್ರತಿಪಾದಿಸಿದ ಅವರು, ತಂದೆಯ ರಾಜಕೀಯ ಜೀವನದ ಮುಂದುವರಿಕೆಯ ಭಾಗವಾಗಿ ನಾನು ಎಂಎಲ್‌ಸಿ ಆಗಿದ್ದೇನೆ. ಕ್ಷೇತ್ರದ ಜನರು, ತಂದೆಯ ಅಭಿಮಾನಿಗಳ ರಕ್ಷಣೆಗಾಗಿ ನಾನು ರಾಜಕೀಯಕ್ಕೆ ಬಂದಿದ್ದೇನೆ. ತಂದೆ ನನ್ನನ್ನೇನಾದರೂ ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದ್ದಾರಾ ಮಕ್ಕಳನ್ನೇ ಪಕ್ಷದ ಅಧ್ಯಕ್ಷರಾಗಿಸುವುದು, ಶಾಸಕ ಅಥವಾ ಸಂಸದರನ್ನಾಗಿ ಮಾಡುವುದು ಕುಟುಂಬ ರಾಜಕಾರಣ. ನಮ್ಮದು ಆ ರೀತಿಯಲ್ಲ ಎಂದು ವ್ಯಾಖ್ಯಾನಿಸಿದರು. ಅಣ್ಣನ ಅಕಾಲಿಕ ಮರಣದ ಕಾರಣದಿಂದ ನಾನು ರಾಜಕೀಯಕ್ಕೆ ಬಂದೆ ಎಂದರು. ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾರಿ ನಿರ್ದೇಶನಾಲಯವು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿರುವುದು ರಾಜಕೀಯ ಪ್ರೇರಿತ. ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದು ಹೀಗೆ ಮಾಡಿದೆ ಎಂದು ದೂರಿದರು. ಆ ಕೇಸ್ ನಿಲ್ಲುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.



### 21ಕ್ಕೆ ಕಪ್ಪುಭಾವುಟ ಪ್ರದರ್ಶನ : ಸಿಎಂ ಸಿದ್ದರಾಮಯ್ಯ ವಿರುದ್ಧ ರೈತ ಸಂಘ ಕಿಡಿ

## ಸಿಎಂ ಗದ್ದುಗೆ ಸಿದ್ದರಾಮಯ್ಯ ಅವರಿಗೆ ಶಾಶ್ವತವಲ್ಲ

• ಉದಯವಾಹಹಿನಿ, ಗುಂಡ್ಲುಪೇಟೆ

ಏ 21ಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಆಗಮಿಸುತ್ತಿರುವ ಸಿದ್ದರಾಮಯ್ಯ ಅವರಿಗೆ ಕಪ್ಪುಭಾವುಟ ಪ್ರದರ್ಶನ ಮಾಡಲಾಗುವುದು ಎಂದು ರೈತ ಸಂಘ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ಹೇಳಿದರು. ಪಟ್ಟಣದ ಪ್ರವಾಸಿಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ವರ್ಷ ಚಾಮರಾಜನಗರದಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಿದ್ದರಾಮಯ್ಯ ಅವರು ರೈತರು ನೀಡಿದಂತ ಒತ್ತಾಯದ ಮನವಿಯನ್ನ ಕಸದ ಬುಟ್ಟಿಗೆಸೆದು ತೆರಳಿದ್ದನ್ನ ನಾವು ಮರೆತಿಲ್ಲ ಹಾಗಾಗಿ ದುರಂಹಕಾರದ ಪರಮಾವಧಿಯಲ್ಲಿ ಮಿಂದೇಳುತ್ತಿರುವ ಇವರ ವಿರುದ್ದ ಕಪ್ಪುಭಾವುಟ ಪ್ರದರ್ಶನ ಮಾಡುತ್ತೇವೆ ಎಂದು ಗುಡುಗಿದರು. ಸಿಎಂ ಗದ್ದುಗೆ ಸಿದ್ದರಾಮಯ್ಯ ಅವರಿಗೆ ಶಾಶ್ವತವಲ್ಲ ರೈತರು ನೀಡಿದ ಹಕ್ಕೊತ್ತಾಯಗಳ ಮನವಿಯನ್ನ ಪುರಷ್ಕರಿಸದೆ ಅವಿವೇಕವಾಗಿ ನಡೆದುಕೊಂಡು ನಾನೊಬ್ಬ ರೈತ ವಿರೋಧಿ ಎಂಬುದನ್ನ ಸಾಭೀತುಪಡಿಸಿದ್ದಾರೆ. ಗಡಿಭಾಗದಲ್ಲಿನ ಅಕ್ರಮಗಳ ಪಟ್ಟಿಯನ್ನ ಕ್ರೂಡಿಕರಿಸಿ ಮನವಿ ಸಲ್ಲಿಸಿದರೂ ಸಮರ್ಪಕವಾಗಿ ಸ್ಪಂದಿಸದೆ ಉಡಾಫೆತನ ತೋರಿದ ಇವರಿಗೆ ತಕ್ಕ ಪಾಠ ಕಲಿಸುತ್ತೇವೆ , ಅಂದಿನ ಕಾರ್ಯಕ್ರಮದಲ್ಲಿ ಸಿಎಂ ಭೇಟಿಗೆ ರೈತ ಸಂಘಕ್ಕೆ ಅವಕಾಶವಿದೆ ಆದರೆ ರೈತರನ್ನ ಯಕಚಿತ್ತಾಗಿ ಕಂಡವರಿಗೆ ಮನವಿ ನೀಡುವ ಇಂಗಿತ ನಮಗಿಲ್ಲ ಎಂದು ಹರಿಹಾಯ್ದರು.

**ಹಳ್ಳಹಿಡಿದ ಆಡಳಿತ ವ್ಯವಸ್ಥೆ**

**ಸರ್ಕಾರಿ ಕಚೇರಿಗಳಲ್ಲಿ ಲಂಚ ನೀಡದೆ ಜನಸಾಮಾನ್ಯರ ಕೆಲಸಗಳಾಗುತ್ತಿಲ್ಲ , ಬಡವರ ಬಳಿ ಸುಳಿಗೆಗಿಳಿದಿರುವ ಅಧಿಕಾರಿಗಳು ತಮ್ಮಿಚ್ಛೆಯನುಸಾರ ನಡೆದುಕೊಳ್ಳುತ್ತಿದ್ದಾರೆ, ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಗುಂಡ್ಲುಪೇಟೆಯಲ್ಲಿ ಲಂಚಗುಳಿತನ ತಾಂಡವಾಡುತ್ತಿದೆ, ಇಲ್ಲಿ ಸರ್ಕಾರವೇ ಲೂಟಿಗೆ ಪ್ರೇರೇಪಣೆ ನೀಡುತ್ತಿದೆಯೇ ಎಂಬ ಅನುಮಾನವಿದೆ ಎಂದರು.**

**110 ಕೆರೆ ಯೋಜನೆ ಚುನಾವಣೆ ಗಿಮಿಕ್:** ಕಳೆದ ವರ್ಷ ಡಿಸೆಂಬರ್ ಅಂತ್ಯದ ವೇಳೆಗೆ ನಾಲ್ಕು ಕೆರೆಗಳಿಗೆ ನೀರು ತುಂಬಿಸಲಾಗುವುದು ಎಂಬ ಭರವಸೆ ನೀಡಿ ನಾಲ್ಕು ತಿಂಗಳುಗಳೇ ಗತಿಸಿವೆ ಆದರೆ ಕೆರೆಗಳಿಗೆ ನೀರು ಮಾತ್ರ ಹರಿದುಬಂದಿಲ್ಲ. ಬೆರಳೆಣಿಕೆಯಷ್ಟು ಕೆರೆಗಳಿಗೆ ನೀರು ತುಂಬಿಸಲಾಗದ ಇವರು 110 ಕೆರೆಗಳಿಗೆ ಹರಿಸುವರೋ ಇದು ರೈತರ ಕಣ್ಣೊರೆಸುವ ತಂತ್ರವಾಗಿದ್ದು ಕೇವಲ ಚುನಾವಣೆ ಮತಭದ್ರಕ್ಕಾಗಿ ಯೋಜನೆ ವಿಚಾರವನ್ನ ಚಾಲ್ತಿಯಲ್ಲಿರಿಸಿದ್ದಾರೆ ಎಂದು ಲೇವಡಿ ಮಾಡಿದರು.

**ಕೇರಳದ ಮೇಲೆ ವಿಶೇಷ ಕಾಳಜಿ :** ಸ್ಥಳೀಯ ರೈತರ ಬೇಕು ಬೇಡಗಳಿಗೆ ಸ್ಪಂದಿಸುವಷ್ಟು ಸಮಯವಿಲ್ಲದಿರುವ ಸಿದ್ದರಾಮಯ್ಯ ಅವರಿಗೆ ನೆರೆಯ ಕೇರಳದ ಮೇಲೆ ವಿಶೇಷ ಕಾಳಜಿ ಆಸಕ್ತಿ ಹುಕ್ಕಿ ಹರಿಯುತ್ತದೆ, ವಯನಾಡು ಸಂಸದೆ ಪ್ರಿಯಾಂಕ ವಾದ್ರಾ ಹೇಳಿದಂತೆ ಪಾಲಿಸುವ ಸಿದ್ದರಾಮಯ್ಯ ಹೈ ಕಮಾಂಡ್ ನಾಯಕರ ಗುಲಾಮಗಿರಿ ಮಾಡುತ್ತಿದ್ದಾರೆ, ರಾಜ್ಯದ ಹಿತಬಯಸದ ಇವರು ಕೇರಳಕ್ಕೆ ಧಾರಾಳವಾಗಿ ನಮ್ಮ ತೆರಿಗೆ ಹಣವನ್ನ ಧಾರೆಯೆರೆಯುತ್ತಿದ್ದಾರೆ , ಸರ್ಕಾರದ ನೇರ ಸಹಕಾರದೊಂದಿಗೆ ಕೇರಳಿಗರು ಸಂಪತ್ತು ಲೂಟಿಯಲ್ಲಿ ತೊಡಗಿದ್ದಾರೆ ಎಂದು ಟೀಕಿಸಿದರು.

**ಅರಣ್ಯ ಇಲಾಖೆಯಲ್ಲಿ ಕೋಟಿ ಕೋಟಿ ಲೂಟಿ :** ಬಂಡೀಪುರದಲ್ಲಿನ ಮೂಲಭೂತ ಸೌಕರ್ಯ, ಇನ್ನಿತರ ಪ್ರಗತಿಗೆ ಪ್ರತಿ ವರ್ಷ 30 ಕೋಟಿ ಅನುದಾನ ಬರುತ್ತಿದೆ ಆದರೆ ಸಾರ್ವಜನಿಕರ ತೆರಿಗೆ ಹಣ ಅಧಿಕಾರಿಗಳ ಜೇಬು ಸೇರುತ್ತಿದೆಯೇ ಹೊರತು ಯಾವುದೇ ಕಾಮಗಾರಿಗಳಿಗೆ, ಅರಣ್ಯ ಸಂರಕ್ಷಣೆಗೆ ಬಳಕೆಯಾಗಿಲ್ಲ. ಕೋಟಿ ಕೋಟಿ ಹಣವನ್ನ ಎಗ್ಗಿಲ್ಲದೆ ಲೂಟಿ ಹೊಡೆದಿರುವ ಅಧಿಕಾರಿಗಳು ಹತ್ತಾರು ವರ್ಷಗಳಿಂದ ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿರುವುದು ಭ್ರಷ್ಟಾಚಾರದ ಕರಾಳತೆ ಸಾರುತ್ತಿದೆ ಎಂದು ಆರೋಪಿಸಿದರು.

**ಭ್ರಷ್ಟಾಚಾರದ ಕರಾಳತೆ ಸಾರುತ್ತಿದೆ**

ಕೋಟ್ಯಾಂತರ ರೂ. ಹಣವನ್ನ ಲೂಟಿಗೈಯ್ಯಲು ಉಪಾಯಕಾರಿ ಮಾರ್ಗ ಕಂಡುಕೊಂಡಿರುವ ಅಧಿಕಾರಿಗಳು ಕಚೇರಿ ನವೀಕರಣದ ಹೆಸರಲ್ಲಿ ವ್ಯವಸ್ಥಿತವಾಗಿ ದೋಚಿದ್ದಾರೆ ಈ ಕುರಿತಾಗಿ ಅರಣ್ಯ ಸಚಿವ ಈಶ್ವರ್ ಬಿ ಖಂಡ್ರೆ ಅವರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಹಾಗಾದರೆ ಅಧಿಕಾರಿಗಳ ಲೂಟಿಯಲ್ಲಿ ಸರ್ಕಾರಕ್ಕೂ ಪಾಲಿದಿಯೇ ಎಂದು ಪ್ರಶ್ನಿಸಿದರು.ಸುದ್ದಿಗೋಷ್ಠಿಯಲ್ಲಿ ರೈತ ಸಂಘ ಜಿಲಾದ್ಯಕ್ಷ ಮಹದೇವಪ್ಪ, ಸಂಚಾಲಕ ಲೋಕೇಶ್, ತಾ.ಅದ್ಯಕ್ಷ ಕೆ.ಎಸ್. ಮಹೇಶ್, ಹಿರಿಕಾಟಿ ಚಿಕ್ಕಣ್ಣ, ಗುರು, ಶಂಭುಲಿಂಗಪ್ಪ, ಮಣಿಕಂತ, ನಂದೀಶ್, ಮಹೇಶ್, ದೊರೆಸ್ವಾಮಿ, ರಘು ಸೇರಿದಂತೆ ಹಲವರು ಹಾಜರಿದ್ದರು.

ಉದಯವಾಹಿನಿ ಚಿತ್ರ



**ಶಾಸಕರು ಒಮ್ಮೊಮ್ಮೆ ಉದ್ಯಮಿ, ಇನ್ನೊಮ್ಮೆ ರೈತರಾಗ್ತಾರೆ ಆದರೆ ರೈತರ ಮೇಲೆ ಕಾಳಜಿಯಿಲ್ಲ, ಅಕ್ರಮ ಗಣಿಗಾರಿಕೆ ಟಿಪ್ಪರ್ ಹಾವಳಿಯಿಂದ ಅಪಾರ ಪ್ರಮಾಣದ ಸಾವು ನೋವುಗಳಾದರು ಸಹ ವಿಷಾದ ವ್ಯಕ್ತಪಡಿಸುವಷ್ಟು ಸಮಯವಿಲ್ಲದ ವರು 110 ಕೆರೆಗಳಿಗೆ ನೀರು ತುಂಬಿಸುವ ವಿಚಾರವಾಗಿ ಕ್ಷೇತ್ರದ ರೈತರ ಸಭೆ ಕರೆಯದೆ ಉಡಾಫೆತನ ತೋರುತ್ತಿದ್ದಾರೆ. ಈ ಹಿಂದೆ ನೀಡಿದಂತಹ ಭರವಸೆಗಳನ್ನ ಮರೆತಿರುವ ಶಾಸಕರು ಪ್ರಸ್ತುತವಾಗಿ 110 ಕೆರೆ ಗುಮ್ಮವನ್ನ ಮುಂದಿರಿಸಿದ್ದು ಎಷ್ಟರ ಮಟ್ಟಿಗೆ ಫಲಪ್ರದವಾಗುತ್ತದೆಯೋ ಕಾದು ನೋಡಬೇಕಿದೆ.**
**-ಸಂಪತ್ತು ಕುಂದಕೆರೆ, ರೈತ ಸಂಘ ಜಿ.ಪ್ರಧಾನ ಕಾರ್ಯದರ್ಶಿ**

## ಮಿನಿ ನ್ಯೂಸ್

### ಅದ್ದೂರಿಯಾಗಿ ನಡೆದ ಅಂಬೇಡ್ಕರ್ ಜಯಂತಿ ಆಚರಣೆ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ದೊಡ್ಡತುಪ್ಪೂರು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಕಲಾ ಸಂಘ ಉದ್ಘಾಟನೆ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಗ್ರಾಮದ ಮುಖಂಡರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು.

ಈ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಕಲಾ ಸಂಘದ ಅಧ್ಯಕ್ಷ ಶಿವಮಲ್ಲು ಮಾತನಾಡಿ, ಅಂಬೇಡ್ಕರ್‌ಅವರ ತತ್ವಾದರ್ಶಗಳನ್ನು ಪಾಲಿಸಿವಂತಾಗಬೇಕು. ಅವರ ಆದರ್ಶ ಕೇಳಿಸಿಕೊಂಡರೆ ಸಾಲದು, ಅವುಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರಿಗೆ ನಿಜವಾದ ಗೌರವ ನೀಡಿದಂತಾಗುತ್ತದೆ ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಅವರು ಸಾಮಾಜಿಕ ಸಮಾನತೆಗಾಗಿ ಹೋರಾಟ ಮಾಡಿದ ಮಹಾಪುರುಷರು. ದೇಶದಲ್ಲಿ ಆಚರಣೆಯಲ್ಲಿದ್ದ ಅಸ್ಪೃಶ್ಯತೆ ವಿರುದ್ಧ ದನಿ ಎತ್ತಿದವರು ಶೋಷಣೆ ಮತ್ತು ತುಳಿತಕ್ಕೊಳಗಾದವರಿಗೆ ಮೀಸಲಾತಿಯನ್ನು ಕಲ್ಪಿಸುವ ಮೂಲಕ ಸಮಾನತೆಯನ್ನು ಸಾರಿದರು. ಇಂತಹ ಮಹಾ ಪುರುಷರ ಜಯಂತಿಯನ್ನು ಆಚರಣೆ ಮಾಡುತ್ತಿರುವುದು ನಾವೆಲ್ಲರೂ ಪುಣ್ಯವಂತರು. ಅವರು ನೀಡಿರುವ ಮೀಸಲಾತಿಯ ಪ್ರಯೋಜನವನ್ನು ಪ್ರತಿಯೊಬ್ಬರೂ ಪಡೆದುಕೊಂಡು ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಕಲಾ ಸಂಘದ ಸದಸ್ಯರುಗಳು ಹಾಜರಿದ್ದರು.

### ವಕೀಲರ ಸಂಘಕ್ಕೆ ಗಿರೀಶ್ ಅಧ್ಯಕ್ಷ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಟಿ.ವಿ. ಗಿರೀಶ್ ಮೂರನೇ ಬಾರಿಗೆ ಆಯ್ಕೆಯಾದರು. ಚುನಾವಣೆಯಲ್ಲಿ ಗಿರೀಶ್ 71 ಮತ ಪಡೆದು ಗೆಲುವು ಸಾಧಿಸಿದರು. ಪ್ರತಿಸ್ಪರ್ಧಿಗಳಾದ ದಿಲೀಪ್ ಕುಮಾರ್ 60 ಮತ್ತು ಜೆ.ಟಿ.ಪ್ರಕಾಶ್ 5 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಗಂಗಾಧರ್, ಸಹಾಯಕ ಚುನಾವಣಾಧಿಕಾರಿಗಳಾಗಿ ಶಿವಪ್ರಸಾದ್, ಅಂಬಿಕಾ, ಕೆಂಪರಾಜು ಕಾರ್ಯನಿರ್ವಹಿಸಿದರು. ಉಪಾಧ್ಯಕ್ಷರಾಗಿ ಎಲ್.ಸತೀಶ್ ಅವಿರೋಧ ಆಯ್ಕೆಯಾಗಿದ್ದರು. **ಪದಾಧಿಕಾರಿಗಳು:** ಎಸ್.ಬಿ. ಧನಂಜಯ (ಪ್ರಧಾನ ಕಾರ್ಯದರ್ಶಿ), ಧರ್ಮೇಂದ್ರಕುಮಾರ್ (ಜಂಟಿ ಕಾರ್ಯದರ್ಶಿ), ವಸಂತಮ್ಮ (ಖಜಾಂಚಿ) ಕಾರ್ಯಾಕಾರಿ ಮಂಡಳಿ ಸದಸ್ಯರಾಗಿ ಮಹೇಶ್, ತಿಮ್ಮರಾಜು, ಮರಿಸ್ವಾಮಿ, ಅರಿಷ್ ಖಾನ್, ಎಚ್.ಡಿ.ಶ್ರೀಧರ್ ಹಾಗೂ ಮಹಿಳಾ ಮೀಸಲು ಸ್ಥಾನದಿಂದ ಕವಿತಾ ಆಯ್ಕೆಯಾದರು.

### ಸಮ ಸಮಾಜ ನಿರ್ಮಾಣದ ರೂವಾರಿ

• ಉದಯವಾಹಿನಿ, ತುರುವೇಕೆರೆ

ತಾಲ್ಲೂಕು ಒಳ ಮೀಸಲಾತಿ ಹೋರಾಟ ಸಮಿತಿ, ಮಾದಾರ ಮಹಾಸಭಾ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳಿಂದ ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಜಯಂತಿ ಅಂಗವಾಗಿ ಆರೋಗ್ಯ ಶಿಬಿರ ನಡೆಯಿತು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸರ್ಕಾರದ ನಿಲುವು ಖಂಡಿಸಿ ತಮಟೆ ಬಾರಿಸುವ ಮೂಲಕ ಸರ್ಕಾರ ಒಳಮೀಸಲಾತಿ ಜಾರಿಗೆ ಮೀನಾಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃಷ್ಣಮೂರ್ತಿ ಬಿಳಿಗೆರೆ ಮಾತನಾಡಿ, ಅಂಬೇಡ್ಕರ್ ಜಗತ್ತೇ ಪೂಜಿಸುವ ವ್ಯಕ್ತಿಯಾಗಿದ್ದಾರೆ. ಪ್ರಪಂಚವೇ ಅಂಬೇಡ್ಕರ್ ಅವರನ್ನು ಪೂಜಿಸುತ್ತಿದ್ದರೂ, ಅವರು ಜೀವಂತವಿದ್ದ ಕಾಲದಲ್ಲಿ ಅವರನ್ನು ಸ್ಪೃಶ್ಯ ಸಮಾಜ ದೇಶದ್ರೋಹಿಯಂತೆ ಕಾಣುತ್ತಿತ್ತು ಎಂದು ಬೇಸರ ವ್ಯಕ್ತಪಡಿಸಿದರು. ಅಂಬೇಡ್ಕರ್ ಮಹಾನ್ ಮಾನವತಾವಾದಿ. ಎಲ್ಲರನ್ನೂ ಸಮಾನವಾಗಿ ನೋಡಬೇಕೆಂದು ಪ್ರತಿಪಾದಿಸಿದವರು. ಸಮ ಸಮಾಜದ ನಿರ್ಮಾಣದ ಕನಸು ಹೊತ್ತಿದ್ದರು. ಶಿಕ್ಷಣ, ಆರೋಗ್ಯಕ್ಕೆ ಒತ್ತು ನೀಡಿ ಎಂದು ಅಲವತ್ತುಕೊಂಡಿದ್ದವರು ಅಂಬೇಡ್ಕರ್. ಅವರು ಸಾವಿರ ವರ್ಷಗಳಿಗೆ ಆಗುವಷ್ಟು ಯೋಜನೆ ರೂಪಿಸಿದ್ದರು ಎಂದರು.

ಮಾಜಿ ಶಾಸಕ ಮಸಾಲಾ ಜಯರಾಂ ಮಾತನಾಡಿ, ರಾಜ್ಯ ಸರ್ಕಾರ ದಲಿತರ ನಡುವೆ ಹೊಡೆದಾಡುವ ನೀತಿ ಅನುಸರಿಸುತ್ತಿದೆ. ಅಂಬೇಡ್ಕರ್ ಅವರ ಕನಸಾಗಿದ್ದ ಸಮಾನತೆಯ ಮನೋಭಾವಕ್ಕೆ ಈ ಸರ್ಕಾರ ಕಿಂಚಿತ್ತೂ ಬೆಲೆ ನೀಡುತ್ತಿಲ್ಲ. ಅವರು ಶಾಸಕರಾಗಿದ್ದ ವೇಳೆಯಲ್ಲೂ ಎಲ್ಲರನ್ನೂ ಒಂದೆಡೆ ಸೇರಿಸಿ ನ್ಯಾಯ ಸಮ್ಮತವಾದ ನಿರ್ಧಾರ ಕೈಗೊಳ್ಳಿ ಎಂದು ಹೇಳಿದರೂ ದುರಾವರ್ತನೆಯಿಂದ ಈ ಸರ್ಕಾರ ವರ್ತಿಸುತ್ತಿದೆ ಎಂದು ದೂರಿದರು.

ಶಾಸಕ ಎಂ.ಟಿ.ಕೃಷ್ಣಪ್ಪ, ಮಾಜಿ ಶಾಸಕ ಎಚ್.ಬಿ.ನಂಜೇಗೌಡ, ನರಸಿಂಹಮೂರ್ತಿ, ವಿ.ಟಿ.ವೆಂಕಟರಾಮಯ್ಯ, ದಂಡಿನಶಿವರ ಕುಮಾರ್, ಮಲ್ಲೂರು ತಿಮ್ಮೇಶ್, ಲಕ್ಮೀಶ್. ಡಾ.ಮುರುಳೀಧರ್, ಡಾ.ಚಂದ್ರಯ್ಯ ಇದ್ದರು.

## ಸಂವಿಧಾನವೇ ದೇಶಕ್ಕೆ ಅಂಬೇಡ್ಕರ್ ಉಡುಗೊರೆ

• ಉದಯವಾಹಿನಿ, ಕೊಳ್ಳೇಗಾಲ

ಡಾ.ಬಿ.ಆರ್ ಅಂಬೇಡ್ಕರ್ ಅವರು ವಿಶ್ವವೇ ಮೆಚ್ಚುವ ಸಂವಿಧಾನವನ್ನು ನಮಗೆ ನೀಡಿದ್ದಾರೆ ಎಂದು ಶಾಸಕ ಎಆರ್ ಕೃಷ್ಣಮೂರ್ತಿ ಹೇಳಿದರು.

ನಗರದಲ್ಲಿ ತಾಲ್ಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮೀಸಲಾತಿ ಕುರಿತು ಉಂಟಾಗಿರುವ ಗೊಂದಲದ ವಾತಾವರಣದ ಬಗ್ಗೆ ವಿಷಾದಿಸಿದ ಅವರು ಅಂಬೇಡ್ಕರ್ ಮೀಸಲಾತಿ ಕೊಟ್ಟಾಗ ಪರಿಶಿಷ್ಟ ಜಾತಿಯಲ್ಲಿ 6 ಜಾತಿ ಮಾತ್ರ ಇತ್ತು. ಬುಧವಾರ ನೂರಕ್ಕೂ ಹೆಚ್ಚು ಜಾತಿಗಳು ಸೇರ್ಪಡೆಯಾಗಿ ಅಂದು ಅಸ್ಪೃಶ್ಯತೆ ಒಳಾಗಿದ್ದ ಜನಾಂಗಕ್ಕೆ ಅನ್ಯಾಯವಾಗಿದೆ.

ಒಗ್ಗಟ್ಟಾಗಿ ಹೋರಾಟ ಮಾಡುವ ಅನಿವಾರ್ಯತೆ ಇದೆ ಎಂದರು. ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಜಾರಿಗೆ ತಂದಿರುವ ಸಂವಿಧಾನವನ್ನು ಸಂರಕ್ಷಿಸುವ ಗುರಿ ನಮ್ಮದಾಗಿರಬೇಕು ಎಂದರು. ಡಾ.ಬಿ.ಆರ್ ಅಂಬೇಡ್ಕರ್ ಅವರ ಪ್ರತಿಮೆಗೆ ಶಾಸಕ ಎಆರ್ ಕೃಷ್ಣಮೂರ್ತಿ, ಅಧಿಕಾರಿಗಳು ಪುಷ್ಪಾರ್ಚನೆ ಮಾಡಿದರು. ಅಂಬೇಡ್ಕರ್ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿ ಇಟ್ಟು ಮೆರವಣಿಗೆ ಮಾಡಲಾಯಿತು.

ಉದಯವಾಹಿನಿ ಚಿತ್ರ



## ಮದ್ದೂರು ಕ್ಷೇತ್ರದ ಅಭಿವೃದ್ಧಿಗೆ ಪಣ

• ಉದಯವಾಹಿನಿ, ಭಾರತೀನಗರ

ಮದ್ದೂರು ಕ್ಷೇತ್ರದ ಅಭಿವೃದ್ಧಿಗೆ ಪಣತೊಟ್ಟಿದ್ದು, ಹಂತಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಕೆ.ಎಂ. ಉದಯ್ ಹೇಳಿದರು. ಇಲ್ಲಿನ ಮಾದೇಗೌಡ ಬಡಾವಣೆಯಲ್ಲಿ 55 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತಾಲ್ಲೂಕಿನಾದ್ಯಂತ ಸಾಕಷ್ಟು ಸಮಸ್ಯೆಗಳಿದ್ದು, ಎಲ್ಲವನ್ನೂ ಒಂದೇ ಬಾರಿಗೆ ಪರಿಹರಿಸಲು ಸಾಧ್ಯವಿಲ್ಲ. ಮುಖ್ಯವಾದ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅಭಿವೃದ್ಧಿ ಕೆಲಸ ಮಾಡಲಿದ್ದು, ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಭಾರತೀನಗರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿ ಮಾಡಲು ಸಾಧ್ಯವಿಲ್ಲ. ಅಕ್ಕಪಕ್ಕದ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಅಕ್ಕಪಕ್ಕದ ಗ್ರಾಮ ಪಂಚಾಯಿತಿಗಳ ಒಪ್ಪಿಗೆಯೂ ಬೇಕು. ಹಾಗಾದಲ್ಲಿ ಪಟ್ಟಣ ಪಂಚಾಯಿತಿ ಮಾಡಲು ಯಾವುದೇ ತೊಡಕಿಲ್ಲ ಎಂದು ತಿಳಿಸಿದರು. ಶಾಸಕ ಕೆ.ಎಂ.ಉದಯ್ ಅವರನ್ನು ಸ್ಥಳೀಯ ಮುಖಂಡರು ಅಭಿನಂದಿಸಿದರು. ಬಳಿಕ ಸಾರ್ವಜನಿಕರಿಂದ ಶಾಸಕ ಉದಯ್ ಅಹವಾಲುಗಳನ್ನು ಸ್ವೀಕರಿಸಿದರು.



ಉದಯವಾಹಿನಿ ಚಿತ್ರ

## 21ರಂದು ಬೃಹತ್ ಉದ್ಯೋಗ ಮೇಳ

• ಉದಯವಾಹಿನಿ, ಮದ್ದೂರು

ಶ್ರೀನಿಧಿಗೌಡ ಸಾಂಸ್ಕೃತಿಕ ಶೈಕ್ಷಣಿಕ ಟ್ರಸ್ಟ್ ಹಾಗೂ ಅಕ್ಷರ ಫೌಂಡೇಶನ್ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ತಾಲ್ಲೂಕಿನ ಯುವಕರಿಗೆ ಉದ್ಯೋಗ ಕಲ್ಪಿಸುವ ಸದುದ್ದೇಶದಿಂದ ಏ.21ರಂದು ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಮನ್ ಮುಲ್ ನಿರ್ದೇಶಕ ಎಸ್.ಪಿ. ಸ್ವಾಮಿ ತಿಳಿಸಿದರು.

ನಗರದ ಮಳವಳ್ಳಿ ರಸ್ತೆಯಲ್ಲಿರುವ ಬಿಜೆಪಿ ಕಚೇರಿಯಲ್ಲಿ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕಚೇರಿ ಆವರಣದಲ್ಲಿ ಅಂದು ಬೆಳಿಗ್ಗೆ 9ರಿಂದ ಸಂಜೆ 5ರವರಗೆ ಉದ್ಯೋಗ ಮೇಳ ನಡೆಯದ್ದು. ಆಕಾಂಕ್ಷಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು' ಎಂದು ಮನವಿ ಮಾಡಿದರು. 50ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಳ್ಳುತ್ತಿದ್ದು, ಈ 5 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಿರುವುದು ವಿಶೇಷ. ಉದ್ಯೋಗಮೇಳವು ಉನ್ನತ ವ್ಯಾಸಂಗ ಮಾಡಿದವರಿಗೆ ಸೀಮಿತವಾಗಿಲ್ಲ. ಬದಲಾಗಿ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಯಾವುದೇ ಪದವಿ ಹಾಗೂ ಸ್ನಾತಕೋತ್ತರ ಪದವಿ ಹಾಗೂ ವಿಶೇಷವಾಗಿ ಅಂಗವಿಕಲರಿಗೂ ಸಹ ಉದ್ಯೋಗಗಳು ಲಭ್ಯವಿವೆ' ಎಂದರು.

ಉತ್ಪಾದನಾ ವಲಯ, ಬ್ಯಾಂಕಿಂಗ್, ಮಾರಾಟ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ, ಗಾರ್ಮೆಂಟ್ಸ್, ಸೇವಾ ವಲಯ, ಪ್ರವಾಸೋದ್ಯಮ, ಹಣಕಾಸು ಹಾಗೂ ನಿರ್ವಹಣಾ ಕ್ಷೇತ್ರ ಸೇರಿದಂತೆ ಹತ್ತು ಹಲವು ವಿಭಾಗಗಳಲ್ಲಿ ಆಕಾಂಕ್ಷಿಗಳು ತಮ್ಮ ಕೌಶಲಕ್ಕೆ ತಕ್ಕಂತೆ ಉದ್ಯೋಗ ಪಡೆದುಕೊಳ್ಳಬಹುದಾಗಿದ್ದು, ಆಯ್ಕೆಯಾದವರಿಗೆ ಸ್ಥಳದಲ್ಲಿಯೇ ನೇಮಕಾತಿ ಪತ್ರವನ್ನು ವಿತರಿಸಲಾಗುವುದು' ಎಂದು ತಿಳಿಸಿದರು.

'ಆಸಕ್ತರು ಮೊದಲೇ ಕಚೇರಿಗೆ ಭೇಟಿ ಕೊಟ್ಟು ಪೂರ್ವ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ್ದು, 21ರಂದು ನೇರವಾಗಿ ಉದ್ಯೋಗ ಮೇಳ ನಡೆಯುವ ಸ್ಥಳಕ್ಕೆ ತಮ್ಮ ಎಲ್ಲಾ ಶೈಕ್ಷಣಿಕ ದಾಖಲೆಗಳು ಹಾಗೂ ಸ್ವವಿವರಗಳೊಂದಿಗೆ (10 ಪ್ರತಿಗಳು) ಹಾಜರಾಗಿ, ಸ್ಥಳದಲ್ಲೇ ನೋಂದಣಿ ಮಾಡಿಕೊಂಡು ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ' ಎಂದರು. ಮಾಹಿತಿಗಾಗಿ 8792143221, 5 – 7996163105 5 – 7899488488 ಕರೆ ಮಾಡಲು ಮನವಿ ಮಾಡಿದರು.



ಉದಯವಾಹಿನಿ ಚಿತ್ರ

## ಮೀಸಲಾತಿ ವಿರೋಧಿಸಿದವರು ಸಂವಿಧಾನ ಅರ್ಥೈಸಿಕೊಳ್ಳಲಿ

• ಉದಯವಾಹಿನಿ, ಗೋಣಿಕೊಪ್ಪಲು

ಮೀಸಲಾತಿ ವಿರೋಧಿಸುವವರು ಸಂವಿಧಾನವನ್ನು ಚೆನ್ನಾಗಿ ಓದಿ ಅರ್ಥೈಸಿಕೊಳ್ಳಲಿ ಎಂದು ಶಾಸಕ ಹಾಗೂ ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಹೇಳಿದರು. ಪೊನ್ನಂಪೇಟೆ, ವಿರಾಜಪೇಟೆ ತಾಲ್ಲೂಕು ಆಡಳಿತ, ಸಮಾಜಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ನಡೆದ ಬಾಬಾಸಾಹೇಬ್ ಅಂಬೇಡ್ಕರ್ ಜಯಂತಿ ಹಾಗೂ ಬಾಬು ಜಗಜೀವನರಾಂ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಶೋಷಿತರು, ದುರ್ಬಲರನ್ನು ಸಬಲಗೊಳಿಸುವುದಕ್ಕೆ ಇರುವ ಪ್ರಮುಖ ಅಸ್ತ್ರ ಮೀಸಲಾಯಿತಿ. ಪರಿಶಿಷ್ಟಜಾತಿ, ಪಂಗಡ ಒಬಿಸಿ ಮತ್ತು ಮಹಿಳೆಯರನ್ನು ಮೇಲೆ ತರಲು ಬಾಬಾಸಾಹೇಬ್ ಅಂಬೇಡ್ಕರ್ ಮೀಸಲಾತಿಯನ್ನು ಸಂವಿಧಾನಾತ್ಮಕವಾಗಿ ಘೋಷಿಸಿದರು. ಇದನ್ನು ಅರಿತುಕೊಳ್ಳದ ಕೆಲವರು ಮೀಸಲಾತಿ ಬಗ್ಗೆ ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಇಂತವರು ದೇಶದ ಸಾಮಾಜಿಕ ಸಂರಚನೆಯನ್ನು ಅರಿತುಕೊಂಡು ಮೀಸಲಾತಿಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕು ಎಂದರು.

ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರೂ ಜಾತಿ ದೌರ್ಜನ್ಯವನ್ನು ತೊಡೆದು ಹಾಕುವುದಕ್ಕೆ ಸ್ವಾತಂತ್ರ್ಯ ಲಭಿಸಿಲ್ಲ. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಲಭಿಸದ ಹೊರತು ದೇಶಕ್ಕೆ ಬಂದಿರುವ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎಂದು ಅಂಬೇಡ್ಕರ್ ಹೇಳಿದ್ದರು. ಇಂಥ ಸ್ವಾತಂತ್ರ್ಯವನ್ನು ನೀಡಲು ಸಮಾಜದ ಮೇಲು ವರ್ಗದವರ ಮನಸ್ಥಿತಿ ಬದಲಾಗಬೇಕು ಎಂದು ಆಶಿಸಿದರು. ಮುಖ್ಯ ಭಾಷಣಕಾರರಾಗಿದ್ದ ವಿರಾಜಪೇಟೆ ಸರ್ವೋದಯ ಬಿ.ಇಡಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಗಿರೀಶ್ ಮಾತನಾಡಿ, ಶಿಕ್ಷಣ ಬಂದರೆ ಜಾತಿಯತೆ ದೂರವಾಗುತ್ತದೆ ಎಂದು ಹೇಳಲಾಗುತ್ತಿದೆ. ಆದರೆ, ಬಾಬಾಸಾಹೇಬರು 32 ಪದವಿಗಳನ್ನು ಪಡೆದು ಬಹು ದೊಡ್ಡ ಜ್ಞಾನಿ ಮತ್ತು ಸಂವಿಧಾನ ಶಿಲ್ಪಿ ಎನ್ನಿಸಿಕೊಂಡರು. ಅವರಿಗೆ ಈ ದೇಶದಲ್ಲಿ ಕುಡಿಯಲು ನೀರು ಸಿಗುತ್ತಿರಲಿಲ್ಲ ವಾಸದ ಮನೆ ಕೊಡುತ್ತಿರಲಿಲ್ಲ ಎಂದು ಹೇಳಿದರು.



ಉದಯವಾಹಿನಿ ಚಿತ್ರ

## ಮಂಡ್ಯ ನೆಲದ ಪುರುಷ ರಕ್ಷಣೆ ಕೂಗು ಮಾದರಿ

• ಉದಯವಾಹಿನಿ, ಮಂಡ್ಯ

ಪುರುಷರ ರಕ್ಷಣೆಗೆ ಹಾಗೂ ಅವರ ಮೇಲಿನ ದೌರ್ಜನ್ಯ ತಡೆಗೆ ಪುರುಷರ ಹಿತರಕ್ಷಣಾ ಸಮಿತಿ ರಚಿಸಬೇಕೆನ್ನುವ ಕೂಗು ಮಂಡ್ಯ ನೆಲದಿಂದಲೇ ಎದ್ದಿರುವುದು ಮಾದರಿ ವಿಷಯ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಶ್ಲಾಘಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸಮಾನ ಮನಸ್ಕರರ ಹಾಗೂ ಹಲವು ಸಂಘಟನೆಗಳ ಮುಖಂಡರ ನೇತೃತ್ವದಲ್ಲಿ ಮಂಗಳವಾರ ಕರೆದಿದ್ದ ಪುರುಷರ ರಕ್ಷಣೆ, ಅವರ ಮೇಲಿನ ದೌರ್ಜನ್ಯ ನಿಯಂತ್ರಣ ಸಮಿತಿ ರಚಿಸುವ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಬಂದ ನಂತರದಲ್ಲಿ ಪುರುಷ ಪ್ರಧಾನ ಇತ್ತು. ಹೆಣ್ಣು ಮಕ್ಕಳು ಶಿಕ್ಷಣ, ಉದ್ಯೋಗ, ಆಸ್ತಿಯ ಹಕ್ಕು, ಸ್ವಾವಲಂಬಿತನ ಪಡೆಯುತ್ತಾ ಬಂದ ಬಳಿಕ ಹೆಣ್ಣು ಮಕ್ಕಳ ದೌರ್ಜನ್ಯ ಪ್ರಾರಂಭವಾಯಿತು. ಈಗ ಪುರುಷರ ಮೇಲಿನ ದೌರ್ಜನ್ಯ ಸಾಮಾನ್ಯ, ಹೆಣ್ಣು ಮಕ್ಕಳ ದೌರ್ಜನ್ಯಕ್ಕೆ ಪುರುಷರು ಬಾಯಿ ಮುಚ್ಚಿಕೊಂಡು ಇರುವ ಸನ್ನಿವೇಶ ನಿರ್ಮಾಣವಾಗಿದೆ ಎಂದು ವಿಷಾದಿಸಿದರು. ಮಹಿಳೆಯರ ರಕ್ಷಣೆಗೆ ದೊಡ್ಡ ಕಾನೂನುಗಳೇ ಇವೆ, ಆದರೆ ಪುರುಷ ರಕ್ಷಣೆಗೆ ಸಂವಿಧಾನ ಬಿಟ್ಟರೆ ಯಾವ ವಿಶೇಷ ಕಾನೂನು ಇಲ್ಲ. ದೂರುಗಳು ಪೊಲೀಸ್ ಇಲಾಖೆಯಲ್ಲಿ ಪುರುಷರ ವಿರುದ್ಧ ಬಂದಾಗ ಮಹಿಳೆಯ ಪರವಾಗಿಯೇ ಇರುತ್ತವೆ. ಇಲ್ಲಿ ಪುರುಷರ ಮಾತಿಗಾಗಲೀ ಅಥವಾ ಅವರ ರಕ್ಷಣೆಗೆ ಏನಿದೆ' ಎಂದು ಪ್ರಶ್ನಿಸಿದರು.

ಸಾಹಿತಿ ಜಿ.ಟಿ. ವೀರಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರು ವಿದ್ಯಾವಂತರಾಗಿ ಸ್ವತಂತ್ರರಾಗಿದ್ದು, ಇಲ್ಲಿ ಅವರ ಆಲೋಚನೆ, ನಿರ್ಧಾರಗಳಿಂದ ಪುರುಷರ ಮೇಲೆ ಆಕ್ರಮಣಕಾರಿ ದೌರ್ಜನ್ಯಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪುರುಷರ ಹಿತರಕ್ಷಣೆಗೋಸ್ಕರ ಜಿಲ್ಲಾ ಮತ್ತು ರಾಜ್ಯದಲ್ಲಿ ರಕ್ಷಣಾ ಸಮಿತಿ ರಚನೆ ಮಾಡಿಕೊಳ್ಳಲಾಗುತ್ತಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೌಟುಂಬಿಕ ಸಮಸ್ಯೆಗಳ ಸಮಾಲೋಚಕಿ ರಜನಿರಾಜ್ ಮಾತನಾಡಿ, 'ಪ್ರಸ್ತುತದಲ್ಲಿ ಪುರುಷರಿಗೆ ಕುಟುಂಬ ಇರಬಹುದು ಅಥವಾ ಬೇರೆ ಯಾವ ಕಾರಣಕ್ಕಾದರೂ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ. ಮಹಿಳಾ ಆಯೋಗ ಇರುವಂತೆಯೇ ಪುರುಷ ಆಯೋಗವೂ ರಚನೆಯಾಗಲಿ, ಪೊಲೀಸ್ ಇಲಾಖೆಯಲ್ಲಿ ಮಹಿಳೆಯರ ರಕ್ಷಣೆಗೆ ಇರುವಂತೆ ಪುರುಷರಿಗೂ ರಕ್ಷಣಾ ಕಾನೂನು ಬರಬೇಕು' ಎಂದು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

## 'ಕ್ರಾಫರ್ಡ್ ಭವನ'ಕ್ಕಿಲ್ಲ ಸುರಕ್ಷತೆ; ಪಾರಂಪರಿಕ ತಜ್ಞರ ಕಳವಳ

### ಯೋಜನೆ ಅನುಷ್ಠಾನಕ್ಕೆ ಉತ್ಸಾಹ ತೋರಿರುವ ಸಂಸದ ಯದುವೀರ್ ಅವರಿಗೆ 'ಪಾರಂಪರಿಕ ಕಟ್ಟಡಕ್ಕೆ ತೊಂದರೆ ಆಗುತ್ತದೆಂಬುದು ಗೊತ್ತಿಲ್ಲವೇ

• ಉದಯವಾಹಿನಿ, ಮೈಸೂರು

ಕುಕ್ಕರಹಳ್ಳಿ ಕೆರೆ ರೈಲ್ವೆ ಕೆಳ ಸೇತುವೆ ಯೋಜನೆ ಕಾಮಗಾರಿಯು ಅರಮನೆ ನಗರಿಯ ಹೆಮ್ಮೆಯ ಕಟ್ಟಡವಾದ 'ಕ್ರಾಫರ್ಡ್ ಭವನ'ದ ಸುರಕ್ಷತೆಗೆ ಅಪಾಯ ತಂದೊಡ್ಡಲಿದೆ. ಯೋಜನೆ ಅನುಷ್ಠಾನಕ್ಕೆ ಉತ್ಸಾಹ ತೋರಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ 'ಪಾರಂಪರಿಕ ಕಟ್ಟಡಕ್ಕೆ ತೊಂದರೆ ಆಗುತ್ತದೆಂಬುದು ಗೊತ್ತಿಲ್ಲವೇ' ಎಂಬ ಪ್ರಶ್ನೆಯನ್ನು ಪಾರಂಪರಿಕ ತಜ್ಞರು ಎತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಆಡಳಿತ ಕೇಂದ್ರವಾಗಿರುವ 'ಕ್ರಾಫರ್ಡ್ ಭವನ'ವು ನಗರದ ಸುಂದರ ಕಟ್ಟಡಗಳಲ್ಲಿ ಒಂದು. ರಮಾವಿಲಾಸ ರಸ್ತೆ, ರಾಧಾಕೃಷ್ಣನ್ ಅವೆನ್ಯೂ ರಸ್ತೆಯೆಂದು ಕರೆಯಲಾಗುವ ಬೋಗಾದಿ ರಸ್ತೆಯ ಕೌಟಿಲ್ಯ ವೃತ್ತದಿಂದ ಪದ್ಮ ವೃತ್ತದವರೆಗೆ ರೈಲ್ವೆ ಕೆಳಸೇತುವೆ ಕಾಮಗಾರಿ ನಡೆಯಲಿದ್ದು, ರಸ್ತೆ ನಿರ್ಮಾಣಕ್ಕೆ 7ರಿಂದ 10 ಮೀಟರ್ ಅಷ್ಟು ಆಳಕ್ಕೆ ಕಂದಕ ತೆಗೆಯಲಾಗುತ್ತದೆ. ಜೆಸಿಬಿ, ಡಿಗ್ಗರ್ ಮೆಷಿನ್ ಸೇರಿದಂತೆ ಆಧುನಿಕ ಯಂತ್ರಗಳನ್ನು ಬಳಸಲಾಗುತ್ತಿದೆ. ಕೌಟಿಲ್ಯ ವೃತ್ತವಿರುವ ಭಾಗವು ನಗರದ ಎತ್ತರದ ಪ್ರದೇಶವಾಗಿದ್ದು, ಶಿಲಾ ಪದರಗಳ ರಚನೆಯನ್ನು ಹೊಂದಿದೆ. ಡಿಗ್ಗರ್, ಕ್ರಷರ್‌ಯಂತ್ರಗಳನ್ನು ಬಳಕೆ ಮಾಡಿದರೆ, ಕ್ರಾಫರ್ಡ್ ಭವನವಷ್ಟೇ ಅಲ್ಲ, ಅದಕ್ಕಿಂತಲೂ ನೂರು ವರ್ಷ ಹಳೆಯದಾದ ಮಹಾರಾಜ ಕಾಲೇಜು, ಪ್ರಾಚ್ಯ ಸಂಶೋಧನಾ ಸಂಸ್ಥೆ , ಯುವರಾಜ ಕಾಲೇಜು, ಹಳೆ ಜಿಲ್ಲಾಧಿಕಾರಿ ಕಚೇರಿ, ಯೂನಿಯನ್ ಬಿಲ್ಡಿಂಗ್ ಸೇರಿದಂತೆ ಸಾಲು ಸಾಲು ಪಾರಂಪರಿಕ ಕಟ್ಟಡಗಳು ಹಾನಿಯಾಗಲಿವೆ ಎಂಬ ಆತಂಕ ವ್ಯಕ್ತವಾಗಿದೆ.

'ಸಕಲೇಶಪುರದ ಬಾಳುಪೇಟ್‌ನ ಕಾಫಿತೋಟದ ಮಾಲೀಕರಾಗಿದ್ದ ಕ್ರಾಫರ್ಡ್ ಸಹೋದರರು. ಸ್ವಾತಂತ್ರ್ಯ ನಂತರ ಬ್ರಿಟನ್‌ಗೆ ಮರಳುವಾಗ ಮೈಸೂರು ವಿಶ್ವವಿದ್ಯಾಲಯಕ್ಕೆ 1 ಲಕ್ಷವನ್ನು ಭವನ ನಿರ್ಮಾಣಕ್ಕೆ ಕೊಡುಗೆಯಾಗಿ ನೀಡಿದ್ದರು. ಅವರ ಹೆಸರಿನಲ್ಲಿಯೇ ಭವ್ಯ ಕಟ್ಟಡ ನಿರ್ಮಾಣ ಆಗಿದೆ. ಇದಕ್ಕೆ ಉದ್ದೇಶಿತ ಕೆಳಸೇತುವೆ ಕಾಮಗಾರಿಯಿಂದ ಆಗುವ ಹಾನಿಯನ್ನು ಯಾರೂ ಅಂದಾಜಿಸಿಲ್ಲ. ಕಾಮಗಾರಿ ನಡೆಯುವ ಸ್ಥಳವು ಕಟ್ಟಡದ 100 ಮೀಟರ್ ಒಳಗಡೆಯೇ ಇದೆ. ಇಲ್ಲಿ ಮಣ್ಣಿನ ಪರೀಕ್ಷೆಯನ್ನು ಮಾಡಿಲ್ಲ' ಎಂದು ಹೇಳಿದರು.

**ಎಎಂಎಸ್‌ಆರ್ ಕಾಯ್ದೆ ಹೇಳುವುದೇನು:** ಪ್ರಾಚೀನ ಸ್ಮಾರಕ, ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಕಾಯ್ದೆ–1958ರ ಅನ್ವಯ ಪಾರಂಪರಿಕ ಕಟ್ಟಡದ 100 ಮೀಟರ್ ಒಳಗೆ ಯಾವುದೇ ಕಟ್ಟಡ, ಗಣಿಗಾರಿಕೆ, ನವೀಕರಣ ಕಾಮಗಾರಿಗಳನ್ನು ನಡೆಸುವಂತಿಲ್ಲ. 100 ಮೀಟರ್‌ನಿಂದ 300 ಮೀಟರ್ ವರೆಗೆ ಅಂದರೆ 400 ಮೀಟರ್ ವ್ಯಾಪ್ತಿಯಲ್ಲಿಯೂ ಕಾಮಗಾರಿ ನಿರ್ಬಂಧಿತ. ಆದರೆ, ಕಟ್ಟಡದ ಸೌಂದರ್ಯ ಮತ್ತು ಸುರಕ್ಷತೆಗೆ ಹಾನಿ ಆಗದಂತೆ ಸ್ಥಳೀಯ ಆಡಳಿತದ ಅನುಮತಿ ಪಡೆದು ಕಾಮಗಾರಿ ಕೈಗೊಳ್ಳಬಹುದು. ಸ್ಥಳೀಯ ಆಡಳಿತದ ಪಾರಂಪರಿಕ ಸಮಿತಿಯು ಯಾವುದೇ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಮುನ್ನ ಪರಿಶೀಲನೆಯನ್ನು ಕಡ್ಡಾಯವಾಗಿ ಮಾಡಬೇಕು ರೈಲು ಮಾರ್ಗವನ್ನೇ ಕೆಳಗಿಳಿಸಲಿ. ರೈಲು ಮಾರ್ಗವು 50–60 ವರ್ಷದ ಹಿಂದೆ ಈಗಿರುವ ಮಟ್ಟಕ್ಕಿಂತಲೂ ಕೆಳಭಾಗದಲ್ಲಿತ್ತು. ದಶಕದಲ್ಲಿ ಅದರ ಮಟ್ಟವನ್ನು ಸುಮಾರು 3 ಮೀಟರ್ ಎತ್ತರಿಸಲಾಗಿದೆ. ಹುಣಸೂರು ರಸ್ತೆ ಬಳಿ ರೈಲು ಮಾರ್ಗವು ಈಗಲೂ ಕೆಳ ಭಾಗದಲ್ಲಿಯೇ ಇದೆ. ಅದೇ ಮಟ್ಟಕ್ಕೆ ರೈಲು ಮಾರ್ಗವನ್ನು ಕೆಳಗಿಳಿಸಿದರೆ ಕೆಳಸೇತುವೆ ಮಾಡುವ ಅವಶ್ಯಕತೆಯೇ ಬರುವುದಿಲ್ಲ. ನೈರುತ್ಯ ರೈಲ್ವೆ ಅವರೇ ರೈಲು ಹಳಿಗಳನ್ನು ಕೆಳ ಮಟ್ಟಕ್ಕೆ ಇಳಿಸಿ ಕೆಳಸೇತುವೆ ಬದಲು ಮೇಲ್ಸೇತುವೆಯನ್ನೇ ನಿರ್ಮಾಣ ಮಾಡಲಿ' ಎಂದು ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಸಲಹೆ ನೀಡಿದರು. ''ಕೆ.ಜಿ.ಕೊಪ್ಪಲುವರೆಗೂ ಈ ಕಾರ್ಯವನ್ನು ಮಾಡಿದರೆ ಕುಕ್ಕರಹಳ್ಳಿ ಕೆರೆಯ ಮರಗಳು, ಕ್ರಾಫರ್ಡ್ ಭವನ, ಮಹಾರಾಜ ಕಾಲೇಜು ಮೈದಾನ, ವಿದ್ಯಾರ್ಥಿನಿಲಯ ಸೇರಿದಂತೆ ಎಲ್ಲಾ ಕಟ್ಟಡಗಳಿಗೂ ಸುರಕ್ಷತೆ ಸಿಗಲಿದೆ. ಇಂಜಿನಿಯರ್‌ಗಳು ಮಾಡಬೇಕಾದ ಕೆಲಸವನ್ನು ಪಾರಂಪರಿಕ ತಜ್ಞರು ಮಾಡಬೇಕೆ ಸುಸ್ಥಿರ ಮುನ್ನೋಟವೇ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ಇಲ್ಲವಾಗಿದೆ' ಎಂದರು.

ಉದಯವಾಹಿನಿ ಚಿತ್ರ



**ನಗರದ ಪಾರಂಪರಿಕ ಕಟ್ಟಡಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನ ಹಾಗೂ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಬಹು ಪ್ರಮುಖ. ಎಎಂಎಸ್‌ಆರ್ ಕಾಯ್ದೆಯು ಅರಣ್ಯ ಕಾಯ್ದೆಯಷ್ಟೇ ಪ್ರಾಮುಖ್ಯತೆಯನ್ನು ಪಡೆದಿದೆ. ಇದರಲ್ಲಿ ಕಡ್ಡಾಯವಾಗಿ ನಿಯಮಾವಳಿ ಹಾಗೂ ನಡಾವಳಿಗಳನ್ನು ಪಾಲಿಸಲೇಬೇಕು. ಆದರೆ, ರೈಲ್ವೆ ಕೆಳ ಸೇತುವೆ ಕಾಮಗಾರಿಯಲ್ಲಿ ಇದು ಆಗಿದೆಯೇ ಇದನ್ನು ಜಿಲ್ಲಾಡಳಿತವೇ ಉತ್ತರಿಸಬೇಕು.**
**– ಪ್ರೊ.ಎನ್.ಎಸ್.ರಂಗರಾಜು ಪಾರಂಪರಿಕ ತಜ್ಞ**

**ಮರಗಳೂ ಮಾಯ**

**ಕೌಟಿಲ್ಯ ರಸ್ತೆಯ ರಮಾವಿಲಾಸ ರಸ್ತೆಯ ಎರಡೂ ಬದಿಯಲ್ಲಿ 20ಕ್ಕೂ ಹೆಚ್ಚು ಮರಗಳಿವೆ. ಅವುಗಳ ಕಡಿತಲೆ ಆಗಲಿದೆ. ದ್ವಿಪಥದ ರಸ್ತೆ ಹಾಗೂ ರೈಲ್ವೆ ಗೇಟ್ ಬಳಿ ಮಹಾರಾಜ ಕಾಲೇಜು ಮೈದಾನದ ರಸ್ತೆಗೆ ಸಂಪರ್ಕಿಸಲು ಮತ್ತೊಂದು ರಸ್ತೆಯನ್ನು ಮಾಡಲಾಗುತ್ತದೆ. ಮೈದಾನವನ್ನು ಸಂಪರ್ಕಿಸುವ ರಸ್ತೆ ಕಿಕ್ಕಿಂದೆ ಆಗುವುದರಿಂದ ಭವಿಷ್ಯದಲ್ಲಿ ಮೈಸೂರು ವಿಶ್ವವಿದ್ಯಾಲಯದವರೂ ಅನಿವಾರ್ಯವಾಗಿ ರಸ್ತೆ ವಿಸ್ತರಣೆಯನ್ನು ತಾವೇ ಮಾಡಬೇಕಾಗುತ್ತದೆ. ಹೀಗಾದಲ್ಲಿ ಫುಟ್‌ಬಾಲ್, ಹಾಕಿ ಅಂಗಳಗಳು ಐದು ಮೀಟರ್‌ನಷ್ಟು ಕಿರಿದಾಗುವ ಅನುಮಾನವೂ ಕೇಳಿಬಂದಿದೆ.**

ಅಂತರಾಳದಿಂದ... EDITORIAL

# ಆಶಾದಾಯಕ ಪಿಯು ಫಲಿತಾಂಶ ಫಲ ಕೊಟ್ಟ ಶೈಕ್ಷಣಿಕ ಸುಧಾರಣೆಗಳು



ದ್ವಿತೀಯ ಪಿಯು ಪರೀಕ್ಷೆಯ 2025–26ರ ಸಾಲಿನ ದಾಖಲೆ ಫಲಿತಾಂಶವು ಪದವಿಪೂರ್ವ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೊಸ ಭರವಸೆ ಮೂಡಿಸುವಂತಿದೆ. ಪರೀಕ್ಷೆ ಬರೆದಿದ್ದ 6.32 ಲಕ್ಷ ವಿದ್ಯಾರ್ಥಿಗಳಲ್ಲಿ 5.46 ಲಕ್ಷ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕೋವಿಡ್ ಸಮಯದಲ್ಲಿ (2023–24) ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, ಈ ಬಾರಿಯ ಶೇ 86.48ರ ಉತ್ತೀರ್ಣತೆಯ ಪ್ರಮಾಣ ಪಿಯು ಪರೀಕ್ಷೆಗಳ ಇತಿಹಾಸದಲ್ಲಿ ಅತ್ಯುತ್ತಮ ಸಾಧನೆಯಾಗಿದೆ. ಕಳೆದ ವರ್ಷದ ಶೇ 73.45ರಷ್ಟು ಸಾಧನೆಗಿಂತಲೂ ಈ ಬಾರಿಯ ಫಲಿತಾಂಶ ಶೇ 13ರಷ್ಟು ಜಿಗಿತ ಕಂಡಿರುವುದು ಗಮನಾರ್ಹ ಸಾಧನೆಯಾಗಿದೆ. ವ್ಯವಸ್ಥೆಯಲ್ಲಿನ ಹಿನ್ನಡೆಗಳ ಬಗ್ಗೆಯೇ ಸಾರ್ವಜನಿಕ ಚರ್ಚೆಗಳು ಹೆಚ್ಚು ನಡೆಯುವ ಸಂದರ್ಭದಲ್ಲಿ, ಶೈಕ್ಷಣಿಕ ಶಿಸ್ತು ಹಾಗೂ ಆಡಳಿತದ ಗಮನಹರಿಸುವಿಕೆಯು ಏನೆಲ್ಲವನ್ನು ಸಾಧಿಸಬಹುದು ಎನ್ನುವುದಕ್ಕೆ ಈ ಫಲಿತಾಂಶ ನಿದರ್ಶನದಂತಿದೆ.

ತೇರ್ಗಡೆಯ ಕನಿಷ್ಠ ಅಂಕಗಳನ್ನು ಶೇ 35ರಿಂದ 33ಕ್ಕೆ ಇಳಿಸಿರುವುದನ್ನು ಉತ್ತಮ ಫಲಿತಾಂಶಕ್ಕೆ ಕಾರಣವನ್ನಾಗಿ ಗುರ್ತಿಸಲು ಸಾಧ್ಯವಿದೆ. ಆದರೆ, ಕನಿಷ್ಠ ಅಂಕ ಇಳಿಕೆಯ ಪ್ರಯೋಜನವನ್ನು 5,577 ವಿದ್ಯಾರ್ಥಿಗಳಷ್ಟೇ ಪಡೆದಿದ್ದಾರೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಹಾಗಾಗಿ, ಈ ಸಾಧನೆಯ ಹಿಂದೆ ಬೇರುಮಟ್ಟದಲ್ಲಿ ಆಗಿರುವ ರಚನಾತ್ಮಕ ಬದಲಾವಣೆಗಳನ್ನು ಗುರ್ತಿಸಬೇಕಾಗಿದೆ. ಹುಡುಗರಿಗಿಂತಲೂ ಹುಡುಗಿಯರು ಫಲಿತಾಂಶದಲ್ಲಿ ಮುಂದಿರುವಂತಹ ಉತ್ತೇಜನಕಾರಿ ಪ್ರವೃತ್ತಿಗಳು ಈ ಸಾರಿಯೂ ಮುಂದುವರಿದಿವೆ. ಇದಕ್ಕಿಂತಲೂ ಮುಖ್ಯವಾದುದು.

ನಗರದ ಸಹವರ್ತಿಗಳನ್ನು ಗ್ರಾಮೀಣ ವಿದ್ಯಾರ್ಥಿಗಳು ಹಿಂದಿಕ್ಕಿರುವುದು ಹಾಗೂ ಸರ್ಕಾರಿ ಕಾಲೇಜುಗಳ ಸಾಧನೆ ಸಾಕಷ್ಟು ಸುಧಾರಿಸಿರುವುದು. ಕಳೆದ ವರ್ಷ 13 ಸರ್ಕಾರಿ ಪಿಯು ಕಾಲೇಜುಗಳು ನೂರಕ್ಕೆ ನೂರು ಫಲಿತಾಂಶ ಸಾಧಿಸಿದ್ದರೆ, ಈ ಬಾರಿ 74 ಕಾಲೇಜುಗಳು ಶೇ 100ರ ಯಶಸ್ಸಿನ ಸಾಧನೆ ಮಾಡಿವೆ. ಇದು ಶೈಕ್ಷಣಿಕ ಮೇಲ್ವಿಚಾರಣೆ ಹಾಗೂ ಉತ್ತರ ದಾಯಿತ್ವದ ಫಲಶ್ರುತಿಯಾಗಿದೆ. ದುರ್ಬಲ ಸಮುದಾಯದ ವಿದ್ಯಾರ್ಥಿಗಳನ್ನು ಮುನ್ನೆಲೆಗೆ ತರುವ ಉದ್ದೇಶದಿಂದ ಕಾರ್ಯ ನಿರ್ವಹಿಸುವ 'ಕರ್ನಾಟಕ ರೆಸಿಡೆನ್ಷಿಯಲ್ ಎಜುಕೇಷನಲ್ ಇನ್ ಸ್ಟಿಟ್ಯೂಷನ್ಸ್ ಸೊಸೈಟಿ'ಯು ಶೇ 93.99ರಷ್ಟು ಫಲಿತಾಂಶದ ಸಾಧನೆ ಮಾಡಿರುವುದು ಈ ಯಶಸ್ಸಿನ ಕಥೆಗೆ ಪೂರಕವಾಗಿದೆ. ದಾಖಲೆಯ ಫಲಿತಾಂಶದ ನಡುವೆಯೂ ಪ್ರಾದೇಶಿಕ ಅಸಮಾನತೆಯು ಫಲಿತಾಂಶದಲ್ಲಿ ಎದ್ದುಕಾಣಿಸುವಂತಿದೆ.

> **ಅವಧಿಗೆ ಮೊದಲೇ ಪಠ್ಯಕ್ರಮದ ಬೋಧನೆ ಮುಕ್ತಾಯ, ಪ್ರಮಾಣೀಕೃತ ಪೂರ್ವಸಿದ್ಧತಾ ಪರೀಕ್ಷೆಗಳು, ವಿಸ್ತೃತ ಶೈಕ್ಷಣಿಕ ನೀಲನಕ್ಷೆಗಳು ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣಾ ವ್ಯವಸ್ಥೆಯು ಪಿಯು ಫಲಿತಾಂಶದಲ್ಲಿನ ಸುಧಾರಣೆಗೆ ಹಾಗೂ ಶೈಕ್ಷಣಿಕ ವ್ಯವಸ್ಥೆಯ ಬಲವರ್ಧನೆಗೆ ಕಾರಣಗಳಾಗಿವೆ.**

ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ ಕೆಲವು ಜಿಲ್ಲೆಗಳ ಸಾಧನೆ ಸುಧಾರಿಸಿದ್ದರೂ, ಕನಿಷ್ಠ 15 ಜಿಲ್ಲೆಗಳು ಫಲಿತಾಂಶದಲ್ಲಿ ರಾಜ್ಯ ಸರಾಸರಿ ಸಾಧಿಸುವಲ್ಲಿ ವಿಫಲವಾಗಿವೆ. ಶೇ 71.21ರಷ್ಟು ಸಾಧನೆಯ ನಡುವೆಯೂ ಯಾದಗಿರಿ ಜಿಲ್ಲೆಯು ಫಲಿತಾಂಶ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ; ಆದರೆ, ಕಳೆದ ವರ್ಷದ ಶೇ 48.45ರಷ್ಟು ಫಲಿತಾಂಶವನ್ನು ಗಮನಿಸಿದರೆ ಯಾದಗಿರಿಯ ಗಣನೀಯ ಸುಧಾರಣೆ ಕಾಣಿಸುತ್ತದೆ. ಕಳೆದ ವರ್ಷ ಶೇ 58.81ರಷ್ಟು ಫಲಿತಾಂಶ ಗಳಿಸಿದ್ದ ವಿಜಯಪುರ ಈ ಬಾರಿ ಶೇ 92ರ ಫಲಿತಾಂಶದೊಂದಿಗೆ ಉತ್ತಮ ಸಾಧನೆ ಮಾಡಿರುವ ಜಿಲ್ಲೆಯೆನ್ನಿಸಿಕೊಂಡಿದೆ. ಉಡುಪಿ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳು ಫಲಿತಾಂಶದಲ್ಲಿ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿವೆ.

ಅವಧಿಗೆ ಮೊದಲೇ ಪಠ್ಯಕ್ರಮದ ಬೋಧನೆ ಮುಕ್ತಾಯ, ಪ್ರಮಾಣೀಕೃತ ಪೂರ್ವಸಿದ್ಧತಾ ಪರೀಕ್ಷೆಗಳು, ವಿಸ್ತೃತ ಶೈಕ್ಷಣಿಕ ನೀಲನಕ್ಷೆಗಳು ಮತ್ತು ಕಟ್ಟುನಿಟ್ಟಾದ ಮೇಲ್ವಿಚಾರಣಾ ವ್ಯವಸ್ಥೆಯು ಪಿಯು ಫಲಿತಾಂಶದಲ್ಲಿನ ಸುಧಾರಣೆಗೆ ಹಾಗೂ ಶೈಕ್ಷಣಿಕ ವ್ಯವಸ್ಥೆಯ ಬಲವರ್ಧನೆಗೆ ಕಾರಣಗಳಾಗಿವೆ. ಶೈಕ್ಷಣಿಕ ವರ್ಷದ ಆರಂಭದಲ್ಲೇ ಅತಿಥಿ ಉಪನ್ಯಾಸಕರು ಲಭ್ಯ ಇರುವಂತೆ ನಡೆದ ನೇಮಕಾತಿಯಿಂದಾಗಿ ತರಗತಿಗಳು ಅಡಚಣೆಯಿಲ್ಲದೆ ನಡೆಯಲು ಸಾಧ್ಯವಾಗಿದೆ. ನಿಯಮಿತ ಶೈಕ್ಷಣಿಕ ಪರಾಮರ್ಶೆ ಹಾಗೂ ಉಪನ್ಯಾಸಕರ ಹೊಣೆಗಾರಿಕೆಯನ್ನು ಹೆಚ್ಚಿಸಿದ್ದು ಕೂಡ ಉತ್ತಮ ಫಲಿತಾಂಶಕ್ಕೆ ಕಾರಣಗಳಾಗಿವೆ. ಈ ವರ್ಷದ ಫಲಿತಾಂಶದ ಗತಿಯನ್ನು ಮುಂದೆಯೂ ಉಳಿಸಿಕೊಳ್ಳುವ ಹಾಗೂ ಈಗಲೂ ಉಳಿದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಸವಾಲು ಶಿಕ್ಷಣ ಇಲಾಖೆಯ ಮುಂದಿದೆ. ರಾಜ್ಯದ ಪಿಯು ಫಲಿತಾಂಶವನ್ನು ಅಂಕಿಅಂಶಗಳ ಸಾಧನೆಯ ರೂಪದಲ್ಲಷ್ಟೇ ನೋಡಲಾಗದು. ಈ ಫಲಿತಾಂಶವು, ಸ್ಪಷ್ಟ ಉದ್ದೇಶ ಮತ್ತು ಪರಿಣಾಮಕಾರಿ ಕಾರ್ಯ ನಿರ್ವಹಣೆಯ ಮೂಲಕ ಸಾರ್ವಜನಿಕ ಶಿಕ್ಷಣವು ಸಮಾಜದ ಕಟ್ಟಕಡೆಯ ಸಮುದಾಯಗಳನ್ನೂ ತಲಪುತ್ತದೆ, ಪ್ರಯೋಜನಕಾರಿಯಾಗಿ ಪರಿಣಮಿಸುತ್ತದೆ ಎನ್ನುವುದರ ಸಂಕೇತವಾಗಿದೆ.

---

**ಹಸಿರು ಬಯಲು, ಮಂಜಿನ ಮುಸುಕು ಸವಿಯುವ ಮುಂಜಾನೆ, ಹಳ್ಳಿಯ ಹಾದಿಯಲ್ಲಿ ಕೇಳಿಬರುವ ಹೈಯ್... ಹೈಯ್...ಎಂಬ ಲಯಬದ್ಧ ಉಸಿರಾಟದ ಸದ್ದು ನಮ್ಮನ್ನು ನೇರವಾಗಿ ಕರೆದೊಯ್ಯುವುದು ಗರಡಿ ಮನೆಗೆ. ಆಧುನಿಕತೆಯ ಅಬ್ಬರದಲ್ಲಿ ಹವಾನಿಯಂತ್ರಿತ ವ್ಯಾಯಾಮಶಾಲೆಗಳು ಮತ್ತು ಕೃತಕ ಪ್ರೋಟೀನ್ ಪುಡಿಗಳ ಹಾವಳಿ ಹೆಚ್ಚಾಗಿದ್ದರೂ, ನಮ್ಮ ಮಣ್ಣಿನ ಅಪ್ಪಟ ಶಕ್ತಿ ಇಂದಿಗೂ ಅಡಗಿರುವುದು ಗರಡಿ ಮನೆಯ ಕೆಮ್ಮಣ್ಣಿನ ಅಖಾಡದಲ್ಲಿ. ಒಬ್ಬ ಕುಸ್ತಿ ಪಟು ಅಖಾಡಕ್ಕಿಳಿಯುವ ಮುನ್ನ ಮಾಡುವ ಮೊದಲ ಪವಿತ್ರ ಕಾಯಕವೇ ಗೋದಾ ಕೊಚ್ಚುವುದು. ಇದು ಕೇವಲ ಮಣ್ಣನ್ನು ಹದ ಮಾಡುವ ಕೆಲಸವಲ್ಲ; ಇದು ಪೈಲ್ವಾನನ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯದ ಅಗ್ನಿಪರೀಕ್ಷೆ. ಮಣ್ಣಿನ ವಾಸನೆ, ಹದವಾಗಿ ಬೆರೆತ ಎಣ್ಣೆ-ತುಪ್ಪದ ಸುಗಂಧ ಮತ್ತು ಬೆವರಿನ ಹನಿಗಳು ಸಂಗಮಿಸಿದಾಗ ಅಲ್ಲಿ ಅಪ್ಪಟ ದೇಸಿ ಕ್ರೀಡಾ ಸಂಸ್ಕೃತಿ ಅನಾವರಣಗೊಳ್ಳುತ್ತದೆ.**



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

# ಪೈಲ್ವಾನರ ಗೋದಾ ಕೊಚ್ಚುವ ಕಾಯಕ



ಗರಡಿ ಮನೆಯಲ್ಲಿ ಕುಸ್ತಿ ಅಭ್ಯಾಸ ಆರಂಭವಾಗುವುದೇ ಗೋದಾ ಕೊಚ್ಚುವುದರಿಂದ. ಅಖಾಡದ ಮಣ್ಣು ಗಟ್ಟಿಯಾಗದಂತೆ, ಪ್ರತಿದಿನ ಬೆಳಿಗ್ಗೆ ಭಾರವಾದ ಗುದ್ದಲಿ ಅಥವಾ ಕುಂಟೆಯಿಂದ ಮಣ್ಣನ್ನು ಕೆಳಗಿನಿಂದ ಮೇಲೆ ಮಾಡಿ ಮೃದುಗೊಳಿಸುವುದನ್ನೇ ಗೋದಾ ಕೊಚ್ಚುವುದು ಎನ್ನಲಾಗುತ್ತದೆ. ಮಣ್ಣು ಹಗುರವಾಗಿದ್ದರೆ ಮಾತ್ರ ಕುಸ್ತಿ ಆಡುವಾಗ ಪೆಟ್ಟು ಬೀಳುವುದಿಲ್ಲ. ಈ ಪ್ರಕ್ರಿಯೆಯಲ್ಲಿ ಪೈಲ್ವಾನನು ಇಡೀ ಅಖಾಡವನ್ನು ಅಗೆಯುವಾಗ ಆತನ ದೇಹದ ಪ್ರತಿಯೊಂದು ಸ್ನಾಯುವು ಜಾಗೃತಗೊಳ್ಳುತ್ತದೆ. ಇದು ಆಧುನಿಕ ವ್ಯಾಯಾಮಶಾಲೆಗಳಲ್ಲಿ ಮಾಡುವ ಸಿದ್ಧತಾ ವ್ಯಾಯಾಮಕ್ಕಿಂತ ಸಾವಿರ ಪಟ್ಟು ಮಿಗಿಲಾದ ನೈಸರ್ಗಿಕ ಕಸರತ್ತು.

ಗೋದಾ ಕೊಚ್ಚುವಾಗ ಪೈಲ್ವಾನನು ಭಾರವಾದ ಗುದ್ದಲಿಯನ್ನು ಎತ್ತಿ ಮಣ್ಣಿಗೆ ಬಲವಾಗಿ ಕುಕ್ಕಬೇಕು. ಈ ಕ್ರಿಯೆಯಲ್ಲಿ ಭುಜದ ಸ್ನಾಯುಗಳು, ಎದೆ ಮತ್ತು ಬೆನ್ನಿನ ಸ್ನಾಯುಗಳು ಏಕಕಾಲದಲ್ಲಿ ಸಕ್ರಿಯಗೊಳ್ಳುತ್ತವೆ. ಪದೇ ಪದೇ ಮಣ್ಣನ್ನು ಅಗೆಯುವುದರಿಂದ ತೋಳುಗಳು ಕಬ್ಬಿಣದ ಸಲಾಕೆಯಂತೆ ಗಟ್ಟಿಯಾಗುತ್ತವೆ. ಆಧುನಿಕ ತೂಕ ಎತ್ತುವಿಕೆಯಲ್ಲಿ ಸಿಗದ ಕ್ರಿಯಾತ್ಮಕ ಶಕ್ತಿ ಇಲ್ಲಿ ಸಹಜವಾಗಿ ಲಭ್ಯ. ಉದರದ ಸ್ನಾಯುಗಳು ಬಿಗಿಗೊಳ್ಳುವುದರಿಂದ ಪೈಲ್ವಾನನಿಗೆ ಅಖಾಡದಲ್ಲಿ ಸಮತೋಲನ ಕಾಯ್ದುಕೊಳ್ಳುವುದು ಸುಲಭವಾಗುತ್ತದೆ.

ಕುಸ್ತಿ ಎಂಬುದು ಕೇವಲ ಬಲಪ್ರದರ್ಶನದ ಆಟವಲ್ಲ. ಅದು ದೀರ್ಘಕಾಲದ ತಾಳ್ಮೆಯ ಕಲೆ. ಗಂಟೆಗಟ್ಟಲೆ ಗೋದಾ ಕೊಚ್ಚುವ ಪೈಲ್ವಾನನ ಶ್ವಾಸಕೋಶದ ಸಾಮರ್ಥ್ಯವು ಅಪಾರವಾಗಿ ವೃದ್ಧಿಯಾಗುತ್ತದೆ. ಮಣ್ಣಿನ ಧೂಳು ಮತ್ತು ಅರಿಶಿನ ಮಿಶ್ರಿತ ಗಾಳಿಯನ್ನು ಉಸಿರಾಡುತ್ತಾ ಶ್ರಮಿಸುವುದರಿಂದ ದೇಹದ ಆಂತರಿಕ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ನಿರಂತರವಾದ ಈ ಶ್ರಮವು ಹೃದಯದ ಬಡಿತವನ್ನು ಸ್ಥಿರಗೊಳಿಸಿ, ಅಖಾಡದಲ್ಲಿ ಎದುರಾಳಿಯ ಪಟ್ಟುಗಳಿಗೆ ದಣಿಯದೆ ಉತ್ತರ ನೀಡುವ ದಮ್ಮು ಅಥವಾ ಸಹಿಷ್ಣುತೆಯನ್ನು ಒದಗಿಸುತ್ತದೆ.

ಕುಸ್ತಿಯಲ್ಲಿ ಎದುರಾಳಿಯ ಕೈ ಅಥವಾ ಕಾಲನ್ನು ಹಿಡಿದರೆ ಅದು ಜಾರದಂತೆ ಬಿಗಿಯಾಗಿರಬೇಕು. ಗೋದಾ ಕೊಚ್ಚುವಾಗ ಗುದ್ದಲಿಯನ್ನು ಗಟ್ಟಿಯಾಗಿ ಹಿಡಿಯುವುದರಿಂದ ಹಸ್ತದ ಮತ್ತು ಮುಂಗೈಗಳ ಶಕ್ತಿ ವೃದ್ಧಿಯಾಗುತ್ತದೆ. ಇದನ್ನು ಹಿಡಿತದ ಬಲ ಎಂದು ಕರೆಯಲಾಗುತ್ತದೆ. ಇದರೊಂದಿಗೆ, ಮಣ್ಣಿನಲ್ಲಿ ಬೆರೆತಿರುವ ಎಣ್ಣೆ, ಅರಿಶಿನ ಮತ್ತು ಬೇವಿನ ಸೊಪ್ಪಿನ ಸಾರವು ದೇಹದ ಚರ್ಮವನ್ನು ಮೃದುವಾಗಿಸುವುದಲ್ಲದೆ, ಯಾವುದೇ ಚರ್ಮವ್ಯಾಧಿ ಅಥವಾ ಸೋಂಕು ತಗುಲದಂತೆ ರಕ್ಷಿಸುತ್ತದೆ. ಮಣ್ಣಿನೊಂದಿಗೆ ಮಗುವಿನಂತೆ ಆಡುವ ಪೈಲ್ವಾನನಿಗೆ ಆ ಭೂತಾಯಿಯೇ ಶಕ್ತಿಯ ಮೂಲವಾಗುತ್ತಾಳೆ.

ಗೋದಾ ಕೊಚ್ಚುವುದು ಕೇವಲ ದೈಹಿಕ ಶ್ರಮವಲ್ಲ, ಅದೊಂದು ರೀತಿಯ ಧ್ಯಾನ. ಸುಡುವ ಬಿಸಿಲನ್ನೂ ಲೆಕ್ಕಿಸದೆ ಬೆವರಿಳಿಸುತ್ತಾ ಮಣ್ಣನ್ನು ಹದಗೊಳಿಸುವಾಗ ಪೈಲ್ವಾನನಲ್ಲಿ ಏಕಾಗ್ರತೆ ಸಿದ್ಧಿಸುತ್ತದೆ. ಸೋಲು–ಗೆಲುವಿನ ಆತಂಕವಿಲ್ಲದೆ ಕಾಯಕದಲ್ಲಿ ತೊಡಗುವುದು ಶಿಸ್ತನ್ನು ಕಲಿಸುತ್ತದೆ. ಗರಡಿ ಮನೆಯ ಈ ಕಟ್ಟುನಿಟ್ಟಿನ ಶಿಸ್ತು ಪೈಲ್ವಾನನನ್ನು ಸಮಾಜದಲ್ಲಿ ಒಬ್ಬ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಹಠ, ತಾಳ್ಮೆ ಮತ್ತು ಸತತ ಪ್ರಯತ್ನದ ಗುಣಗಳು ಈ ಮಣ್ಣಿನ ಕೆಲಸದಿಂದಲೇ ರಕ್ತಗತವಾಗುತ್ತವೆ.

ಇಂದಿನ ಕಾಲಘಟ್ಟದಲ್ಲಿ ಯುವಜನತೆ ಕೃತಕ ಸ್ನಾಯುಗಳಿಗಾಗಿ ಹಂಬಲಿಸುತ್ತಿರುವಾಗ, ಗರಡಿ ಮನೆಯ ಗೋದಾ ನಮಗೆ ನೈಸರ್ಗಿಕ ಶಕ್ತಿಯ ಮಹತ್ವವನ್ನು ಸಾರುತ್ತಿದೆ.

ಹಳ್ಳಿಯ ಸೊಗಡು, ಮಣ್ಣಿನ ಮಮಕಾರ ಮತ್ತು ಕಠಿಣ ಶ್ರಮದ ಸಮ್ಮಿಶ್ರಣವೇ ಈ ಗೋದಾ ಕೊಚ್ಚುವ ಕಾಯಕ.

ಇದು ಕೇವಲ ಕ್ರೀಡೆಯಲ್ಲ, ಕರ್ನಾಟಕದ ಮಣ್ಣಿನ ವೀರ ಪರಂಪರೆಯ ಅವಿಭಾಜ್ಯ ಅಂಗ. ನಮ್ಮ ದೇಸಿ ಕ್ರೀಡೆಗಳು ಮತ್ತು ವ್ಯಾಯಾಮ ಪದ್ಧತಿಗಳನ್ನು ಉಳಿಸಿಕೊಂಡು ಹೋದರೆ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ.

ಮಣ್ಣಿನ ವಾಸನೆಯಲ್ಲಿ ಅಡಗಿರುವ ಈ ನೈಜ ಶಕ್ತಿಯನ್ನು ಅರಿತು, ಗರಡಿ ಮನೆಗಳನ್ನು ಪ್ರೋತ್ಸಾಹಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

---


**ಕರ್ನಾಟಕ ರಾಜ್ಯವು ಅಕ್ಕಿ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನ ಹೊಂದಿದ್ದು, ಗ್ರಾಮೀಣ ಆರ್ಥಿಕತೆಯಲ್ಲಿ ರೈಸ್ ಮಿಲ್‌ಗಳು ಪ್ರಮುಖ ಕೊಂಡಿಯಾಗಿವೆ. ವಿಶೇಷವಾಗಿ ಹಾಸನ ಜಿಲ್ಲೆಯಂತಹ ಕೃಷಿ ಪ್ರಧಾನ ಪ್ರದೇಶಗಳಲ್ಲಿ ರೈಸ್ ಮಿಲ್‌ಗಳು ರೈತರು ಮತ್ತು ಮಾರುಕಟ್ಟೆಯ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಉದ್ಯಮ ಹಲವು ಸವಾಲುಗಳನ್ನು ಎದುರಿಸುತ್ತಿದ್ದು, ಅದರ ಸ್ಥಿತಿ-ಗತಿ ಚಿಂತಾಜನಕವಾಗಿದೆ.**

# ಅಕ್ಕಿ ಉದ್ಯಮದ ಅಸ್ತಿತ್ವದ ಹೋರಾಟ

## ಕರ್ನಾಟಕ ಹಾಗೂ ಹಾಸನ ಜಿಲ್ಲೆಯ ರೈಸ್ ಮಿಲ್‌ಗಳ ನೈಜ ಚಿತ್ರ



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು



ಮೊದಲನೆಯದಾಗಿ, ಅಕ್ಕಿ ಉತ್ಪಾದನೆ ಬಹುಮಟ್ಟಿಗೆ ಮಳೆಪಾತದ ಮೇಲೆ ಅವಲಂಬಿತವಾಗಿದೆ. ಮಳೆ ಕೊರತೆ ಅಥವಾ ಅಸ್ಥಿರ ಮಳೆಯ ಪರಿಣಾಮವಾಗಿ ಅಕ್ಕಿ ಬೆಳೆ ಕಡಿಮೆಯಾಗುತ್ತಿದೆ. ಇದರ ನೇರ ಪರಿಣಾಮ ರೈಸ್ ಮಿಲ್‌ಗಳ ಮೇಲೆ ಬೀಳುತ್ತಿದ್ದು, ಕಚ್ಚಾ ಧಾನ್ಯಗಳ ಕೊರತೆಯನ್ನುಂಟುಮಾಡುತ್ತಿದೆ. ಹಾಸನ ಜಿಲ್ಲೆಯಲ್ಲಿಯೂ ಇದೇ ಸ್ಥಿತಿ ಕಂಡುಬರುತ್ತಿದ್ದು, ಮಿಲ್‌ಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಇನ್ನೊಂದು ಪ್ರಮುಖ ಅಂಶವೆಂದರೆ ವಿದ್ಯುತ್ ಸಮಸ್ಯೆ. ರೈಸ್ ಮಿಲ್‌ಗಳು ಹೆಚ್ಚಿನ ವಿದ್ಯುತ್ ಬಳಕೆಯ ಉದ್ಯಮವಾಗಿದ್ದು, ನಿರಂತರ ವಿದ್ಯುತ್ ಪೂರೈಕೆ ಇಲ್ಲದಿರುವುದು ಉತ್ಪಾದನೆಯನ್ನು ಕುಗ್ಗಿಸುತ್ತದೆ. ವಿದ್ಯುತ್ ಕಡಿತಗಳು ಮತ್ತು ಅಸ್ಥಿರ ಪೂರೈಕೆ ಮಿಲ್ ಮಾಲೀಕರಿಗೆ ಹೆಚ್ಚುವರಿ ವೆಚ್ಚವನ್ನುಂಟುಮಾಡುತ್ತವೆ.

ಕಾರ್ಮಿಕರ ಕೊರತೆ ಕೂಡ ಈ ಕ್ಷೇತ್ರಕ್ಕೆ ದೊಡ್ಡ ಸವಾಲಾಗಿದೆ. ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಹೆಚ್ಚುತ್ತಿರುವುದರಿಂದ ನಿಪುಣ ಕಾರ್ಮಿಕರನ್ನು ಪಡೆಯುವುದು ಕಷ್ಟವಾಗಿದೆ. ಇದರಿಂದ ಕಾರ್ಯಾಚರಣೆ ನಿಧಾನಗೊಳ್ಳುತ್ತದೆ ಮತ್ತು ಉತ್ಪಾದನಾ ಮಟ್ಟ ಕುಸಿಯುತ್ತದೆ.

ಸರ್ಕಾರದ ನೀತಿಗಳು ಮತ್ತು ನಿಯಮಾವಳಿಗಳೂ ರೈಸ್ ಮಿಲ್‌ಗಳ ಮೇಲೆ ಪರಿಣಾಮ ಬೀರುತ್ತವೆ. ಅಕ್ಕಿ ಖರೀದಿ ನೀತಿ, ಕನಿಷ್ಠ ಬೆಂಬಲ ಬೆಲೆ, ಮತ್ತು ಸಾರ್ವಜನಿಕ ವಿತರಣೆ ವ್ಯವಸ್ಥೆ ಮಿಲ್‌ಗಳ ಲಾಭದಾಯಕತೆಯನ್ನು ನಿರ್ಧರಿಸುತ್ತವೆ. ಪಾವತಿ ವಿಳಂಬ ಮತ್ತು ನಿಯಮಗಳ ಕಠಿಣತೆ ಕೆಲವೊಮ್ಮೆ ಮಿಲ್‌ಗಳ ಆರ್ಥಿಕ ಸ್ಥಿತಿಗೆ ಹೊಡೆತ ನೀಡುತ್ತದೆ.

ಆದರೆ, ಇವುಗಳ ನಡುವೆ ಕೆಲವು ಉತ್ತಮ ಬೆಳವಣಿಗೆಗಳೂ ಕಂಡುಬರುತ್ತಿವೆ. ಆಧುನಿಕ ಯಂತ್ರೋಪಕರಣಗಳು, ಸ್ವಯಂಚಾಲಿತ ವ್ಯವಸ್ಥೆಗಳು ಮತ್ತು ಡಿಜಿಟಲ್ ಮಾರುಕಟ್ಟೆ ತಂತ್ರಗಳು ರೈಸ್ ಮಿಲ್‌ಗಳಿಗೆ ಹೊಸ ಅವಕಾಶಗಳನ್ನು ನೀಡುತ್ತಿವೆ.

ಕೆಲವು ಮಿಲ್‌ಗಳು ಬ್ರಾಂಡಿಂಗ್ ಮತ್ತು ಪ್ಯಾಕೇಜಿಂಗ್ ಮೂಲಕ ತಮ್ಮ ಉತ್ಪನ್ನಗಳನ್ನು ರಾಜ್ಯದ ಹೊರಗೂ ಮಾರಾಟ ಮಾಡುತ್ತಿವೆ.

ಹಾಸನ ಜಿಲ್ಲೆಯಲ್ಲಿ ಕೆಲವು ಪ್ರಗತಿಪರ ರೈಸ್ ಮಿಲ್‌ಗಳು ಆನ್‌ಲೈನ್ ಮಾರಾಟ ಮತ್ತು ಗುಣಮಟ್ಟದ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡು ತಮ್ಮ ವ್ಯಾಪಾರವನ್ನು ವಿಸ್ತರಿಸುತ್ತಿವೆ. ಇದು ಸ್ಥಳೀಯ ಉತ್ಪನ್ನಗಳಿಗೆ ಹೊಸ ಮಾರುಕಟ್ಟೆಗಳನ್ನು ತೆರೆದಿದೆ.

ಒಟ್ಟಿನಲ್ಲಿ, ಕರ್ನಾಟಕ ಮತ್ತು ಹಾಸನ ಜಿಲ್ಲೆಯ ರೈಸ್ ಮಿಲ್‌ಗಳ ಸ್ಥಿತಿ ಮಿಶ್ರವಾಗಿದೆ. ಒಂದು ಕಡೆ ಸಮಸ್ಯೆಗಳು ಹೆಚ್ಚುತ್ತಿರುವಾಗ, ಇನ್ನೊಂದೆಡೆ ಹೊಸ ತಂತ್ರಜ್ಞಾನ ಮತ್ತು ಮಾರುಕಟ್ಟೆ ಅವಕಾಶಗಳು ಬೆಳೆಯುತ್ತಿವೆ.

ಸರ್ಕಾರ ಮತ್ತು ಉದ್ಯಮಿಗಳು ಕೈಜೋಡಿಸಿ ಸೂಕ್ತ ಕ್ರಮಗಳನ್ನು ಕೈಗೊಂಡರೆ, ಈ ಕ್ಷೇತ್ರವು ಪುನಃ ಚೇತರಿಸಿಕೊಳ್ಳುವ ಸಾಧ್ಯತೆ ಇದೆ. ರೈಸ್ ಮಿಲ್‌ಗಳು ಗ್ರಾಮೀಣ ಆರ್ಥಿಕತೆಯ ಆಧಾರಸ್ತಂಭವಾಗಿದ್ದು, ಅದರ ಉಳಿವು ಮತ್ತು ಬೆಳವಣಿಗೆ ರಾಜ್ಯದ ಅಭಿವೃದ್ಧಿಗೆ ಅಗತ್ಯವಾಗಿದೆ.

---

# ನೆನೆಸಿದ ಕಪ್ಪು ಕಡಲೆಯನ್ನು ಖಾಲಿ ಹೊಟ್ಟೆಯಲ್ಲಿ ತಿನ್ನುವುದರಿಂದಾಗುವ ಪ್ರಯೋಜನಗಳು

ನೆನೆಸಿದ ಕಪ್ಪು ಕಡಲೆಯು ಪೌಷ್ಟಿಕಾಂಶದ ಶಕ್ತಿ ಕೇಂದ್ರವಾಗಿದ್ದು, ರಾತ್ರಿಯಿಡೀ ನೆನೆಸಿದ ನಂತರ ಇನ್ನಷ್ಟು ಪ್ರಯೋಜನಕಾರಿಯಾಗುತ್ತದೆ. ನೆನೆಸುವುದರಿಂದ ದ್ವಿದಳ ಧಾನ್ಯಗಳನ್ನು ಮೃದುಗೊಳಿಸುತ್ತದೆ, ಫೈಟಿಕ್ ಆಮ್ಲದಂತಹ ವಿರೋಧಿ ಪೋಷಕಾಂಶಗಳನ್ನು ಕಡಿಮೆ ಮಾಡುತ್ತದೆ ಮತ್ತು ಖನಿಜಗಳ ಜೈವಿಕ ಲಭ್ಯತೆಯನ್ನು ಸುಧಾರಿಸುತ್ತದೆ ಮತ್ತು ಜೀರ್ಣಿಸಿಕೊಳ್ಳಲು ಸುಲಭವಾಗುತ್ತದೆ.

ಕಪ್ಪು ಕಡಲೆಯಲ್ಲಿ ಕಾರ್ಬೋಹೈಡ್ರೇಟ್‌ಗಳು, ಫೈಬರ್, ಪ್ರೋಟೀನ್‌ಗಳು, ಜೀವಸತ್ವಗಳು ಮತ್ತು ಖನಿಜಗಳಂತಹ ಸಾಕಷ್ಟು ಪೋಷಕಾಂಶಗಳು ಇರುವುದರಿಂದ ಇದು ಹೆಚ್ಚಿನ ಪೌಷ್ಟಿಕಾಂಶದ ಮೌಲ್ಯವನ್ನು ಹೊಂದಿದೆ ಎನ್ನುತ್ತಾರೆ ಬೆಂಗಳೂರಿನ ಆಸ್ಟರ್ ಆಸ್ಪತ್ರೆಯ ಪೌಷ್ಟಿಕತಜ್ಞೆ ಡಾ.ಅದಿತಿ ಪ್ರಸಾದ್.

### ಮಧುಮೇಹಕ್ಕೆ ಪ್ರಯೋಜನಕಾರಿ

ನೆನೆಸಿದ ಕಪ್ಪು ಕಡಲೆಗಳು ಮಧುಮೇಹಿಗಳಿಗೆ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗಿದೆ. ನೆನೆಸಿದ ಕಡಲೆಯ ಒಂದು ಹಿಡಿ ಅಥವಾ ನೆನೆಸಿದ ನೀರನ್ನು ಖಾಲಿ ಹೊಟ್ಟೆಯಲ್ಲಿ ಪ್ರತಿದಿನ ಕುಡಿಯುವುದರಿಂದ ಅಗತ್ಯವಾದ ಫೈಬರ್ ಮತ್ತು ಪೋಷಕಾಂಶಗಳು ದೊರೆಯುತ್ತವೆ, ಇದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಸ್ಥಿರಗೊಳಿಸಲು ಮತ್ತು ಒಟ್ಟಾರೆ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಇದರ ಕಡಿಮೆ ಗ್ಲೈಸೆಮಿಕ್ ಸೂಚ್ಯಂಕ ಮತ್ತು ಹೆಚ್ಚಿನ ನಾರಿನ ಅಂಶವು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ, ಇದು ಮಧುಮೇಹ ಅಥವಾ ಇನ್ಸುಲಿನ್ ಪ್ರತಿರೋಧವನ್ನು ನಿರ್ವಹಿಸುವ ಜನರಿಗೆ ಸುರಕ್ಷಿತ ಮತ್ತು ಪರಿಣಾಮಕಾರಿ ಆಹಾರ ಆಯ್ಕೆಯಾಗಿದೆ.

### ದೇಹಕ್ಕೆ ಶಕ್ತಿ ನೀಡುತ್ತದೆ

ಅವು ಮೆಗ್ನೀಸಿಯಮ್, ಪೊಟ್ಯಾಸಿಯಮ್, ರಂಜಕ ಮತ್ತು ಕ್ಯಾಲ್ಸಿಯಂನಂತಹ ಅಗತ್ಯ ಖನಿಜಗಳನ್ನು ಒಳಗೊಂಡಿರುತ್ತವೆ, ಇವು ರಕ್ತದೊತ್ತಡವನ್ನು ನಿಯಂತ್ರಿಸುವ, ರಕ್ತ ಪರಿಚಲನೆಯನ್ನು ಸುಧಾರಿಸುವ ಮತ್ತು ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುವ ಮೂಲಕ ಹೃದಯದ ಆರೋಗ್ಯವನ್ನು ಬೆಂಬಲಿಸಲು ಒಟ್ಟಾಗಿ ಕೆಲಸ ಮಾಡುತ್ತವೆ. ಕಪ್ಪು ಕಡಲೆಯಲ್ಲಿರುವ ಬಿ–ವಿಟಮಿನ್‌ಗಳು, ಸತು ಮತ್ತು ಮ್ಯಾಂಗನೀಸ್ ಚಯಾಪಚಯ ಕ್ರಿಯೆಯನ್ನು ಹೆಚ್ಚಿಸುತ್ತವೆ ಮತ್ತು ದಿನವಿಡೀ ನಿರಂತರ ಶಕ್ತಿಯನ್ನು ಒದಗಿಸುತ್ತವೆ.

ಹೆಚ್ಚುವರಿಯಾಗಿ, ಪಾಲಿಫಿನಾಲ್‌ಗಳು ಮತ್ತು ಆಂಥೋಸಯಾನಿನ್‌ಗಳಂತಹ ಉತ್ಕರ್ಷಣ ನಿರೋಧಕಗಳು ದೇಹವನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಿಸುತ್ತವೆ, ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತವೆ ಮತ್ತು ದೀರ್ಘಕಾಲದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡಬಹುದು. ನಿಯಮಿತ ಸೇವನೆಯು ಅದರ ಕ್ಯಾಲ್ಸಿಯಂ, ಮೆಗ್ನೀಸಿಯಮ್ ಮತ್ತು ರಂಜಕದ ಅಂಶದಿಂದಾಗಿ ಮೂಳೆಯ ಆರೋಗ್ಯವನ್ನು ಬೆಂಬಲಿಸುತ್ತದೆ, ಇದು ಮೂಳೆ ಖನಿಜ ಸಾಂದ್ರತೆಯನ್ನು ಕಾಪಾಡಿಕೊಳ್ಳಲು ಮತ್ತು ವಯಸ್ಸಿಗೆ ಸಂಬಂಧಿಸಿದ ಮೂಳೆ ಅಸ್ವಸ್ಥತೆಗಳನ್ನು ತಡೆಯಲು ಸಹಾಯ ಮಾಡುತ್ತದೆ.



---

# ಪಿಸಿಓಎಸ್ ಸಮಸ್ಯೆ ಇರುವವರಲ್ಲಿ ಚರ್ಮವು ಕಪ್ಪಾಗುವುದು ಏಕೆ?



ಪಿಸಿಓಎಸ್ ಅಥವಾ ಪಾಲಿಸಿಸ್ಟಿಕ್ ಓವರಿ ಸಿಂಡ್ರೋಮ್ ಇರುವ ಕೆಲವು ಮಹಿಳೆಯರಲ್ಲಿ, ಚರ್ಮವು ಕಪ್ಪಾಗುವುದನ್ನು ನೀವು ಗಮನಿಸಿರಬಹುದು. ಚರ್ಮವು ಕಪ್ಪಾಗುವುದು ವಾಸ್ತವವಾಗಿ ಪಿಸಿಓಎಸ್‌ನ ಲಕ್ಷಣವಾಗಿರಬಹುದು. ಕುತ್ತಿಗೆ, ತೊಡೆಗಳು ಅಥವಾ ಕಂಕುಳದಂತಹ ಪ್ರದೇಶಗಳು ಕಪ್ಪಾದಾಗ, ನಾವು ಸಾಮಾನ್ಯವಾಗಿ ಕಳಪೆ ನೈರ್ಮಲ್ಯ ಕಾರಣವೆಂದು ಭಾವಿಸುತ್ತೇವೆ, ಇದು ಪಿಸಿಓಎಸ್ ಮೂಲ ಕಾರಣವಾಗಿರಬಹುದು.

ಇನ್ಸುಲಿನ್ ಪ್ರತಿರೋಧ ಮತ್ತು ಪುರುಷ ಹಾರ್ಮೋನುಗಳ ಹೆಚ್ಚಿದ ಮಟ್ಟದಿಂದಾಗಿ ಪಿಸಿಓಎಸ್‌ನಲ್ಲಿ ಈ ಸಮಸ್ಯೆ ಉದ್ಭವಿಸಬಹುದು. ಈ ಕಪ್ಪಾಗುವಿಕೆ ಸಾಮಾನ್ಯವಾಗಿ ದೇಹದ ಮಡಿಕೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸಿಡಿಸಿ ಪ್ರಕಾರ, ಚರ್ಮದ ಕಪ್ಪಾಗುವಿಕೆ ಅಕಾಂತೋಸಿಸ್ ನಿಗ್ರಿಕನ್ಸ್ ಎಂದು ಕರೆಯಲ್ಪಡುವ ಚರ್ಮರೋಗ ಸ್ಥಿತಿಗೆ ಕಾರಣವಾಗಿರಬಹುದು.

**ಅಕಾಂತೋಸಿಸ್ ನಿಗ್ರಿಕನ್ಸ್ ಶಾಶ್ವತ ಸ್ಥಿತಿಯೇ?:** ಅಕಾಂತೋಸಿಸ್ ನಿಗ್ರಿಕನ್ಸ್ ಅತ್ಯಗತ್ಯವಾಗಿ ಅನಿರ್ದಿಷ್ಟವಾಗಿ ಮುಂದುವರಿಯುವುದಿಲ್ಲ, ಆದ್ದರಿಂದ, ಇದನ್ನು ಶಾಶ್ವತ ಸ್ಥಿತಿ ಎಂದು ಪರಿಗಣಿಸಲಾಗುವುದಿಲ್ಲ. ಇನ್ಸುಲಿನ್ ಪ್ರತಿರೋಧ, ಅಧಿಕವಾದ ತೂಕ ಅಥವಾ ಹಾರ್ಮೋನುಗಳ ಅಸಮತೋಲನದಂತಹ ಮೂಲ ಕಾರಣಗಳನ್ನು ಯಶಸ್ವಿಯಾಗಿ ನಿರ್ವಹಿಸಿದರೆ, ಸ್ಥಿತಿಯು ಕ್ರಮೇಣ ಕಡಿಮೆಯಾಗಬಹುದು.

**ಅಕಾಂತೋಸಿಸ್ ನಿಗ್ರಿಕನ್ಸ್‌ನ ಲಕ್ಷಣಗಳು:**

- **ಚರ್ಮದ ಮೇಲೆ ಕಂದು ಅಥವಾ ಕಪ್ಪು ಬಣ್ಣ ಕಾಣಿಸಿಕೊಳ್ಳುವುದು**
- **ಸುತ್ತಮುತ್ತಲಿನ ಪ್ರದೇಶಗಳಿಗಿಂತ ದಪ್ಪವಾಗಿರುವಂತೆ ಚರ್ಮ ಭಾಸ**
- **ಚರ್ಮದ ಟ್ಯಾಗ್‌ಗಳ ಉಪಸ್ಥಿತಿ**

ಕಂಕುಳು, ಕುತ್ತಿಗೆಯ ಹಿಂಭಾಗ, ಒಳ ತೊಡೆಗಳು, ಮೊಣಕೈಗಳು, ಮೊಣಕಾಲುಗಳು, ಬೆರಳುಗಳ ಕೀಲುಗಳು, ಹೊಕ್ಕುಳ, ಮುಖ, ಜನನಾಂಗದ ಪ್ರದೇಶ ಮತ್ತು ಇತರವುಗಳನ್ನು ಒಳಗೊಂಡಂತೆ ದೇಹದ ವಿವಿಧ ಭಾಗಗಳಲ್ಲಿ ಚರ್ಮದ ಕಪ್ಪಾಗುವಿಕೆ ಸಂಭವಿಸಬಹುದು.

**ಅಕಾಂತೋಸಿಸ್ ನಿಗ್ರಿಕನ್ಸ್ ಅನ್ನು ಗುಣಪಡಿಸಬಹುದೇ?:** ಕೇವಲ ಕ್ರೀಮ್‌ಗಳನ್ನು ಹಚ್ಚುವ ಮೂಲಕ ಅಕಾಂತೋಸಿಸ್ ನಿಗ್ರಿಕನ್ಸ್ ಅನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ. ಈ ಸ್ಥಿತಿಯ ಮೂಲ ಕಾರಣವನ್ನು ಗುರುತಿಸುವುದು ಮತ್ತು ಚಿಕಿತ್ಸೆ ನೀಡುವುದು ಅತ್ಯಗತ್ಯ.

ಉದಾಹರಣೆಗೆ, ಈ ಸಮಸ್ಯೆಯು ಇನ್ಸುಲಿನ್ ಪ್ರತಿರೋಧ ಅಥವಾ ಪಿಸಿಓಎಸ್‌ನಂತಹ ಹಾರ್ಮೋನುಗಳ ಅಸ್ವಸ್ಥತೆಗಳಿಂದ ಉಂಟಾಗಬಹುದು. ಆರೋಗ್ಯಕರ ಆಹಾರವನ್ನು ಅಳವಡಿಸಿಕೊಳ್ಳುವುದು ಮತ್ತು ಸೂಕ್ತವಾದ ಔಷಧಿಗಳನ್ನು ತೆಗೆದುಕೊಳ್ಳುವುದು ಅದರ ನಿರ್ವಹಣೆ ಮತ್ತು ಚೇತರಿಕೆಗೆ ಸಹಾಯ ಮಾಡುತ್ತದೆ.

---

# ಡಾ||ಬಿ.ಆರ್.ಅಂಬೇಡ್ಕರ್ ಸಮಾಜ ಸೇವಾ ರತ್ನ ಪ್ರಶಸ್ತಿ, ರತ್ನ ಪ್ರಶಸ್ತಿ ಮತ್ತು ಭೂಷಣ ಪ್ರಶಸ್ತಿ ಪ್ರಧಾನ

- **ಸಂವಿಧಾನ ಸುರಕ್ಷಿತವಾಗಿ ಇದ್ದರೆ ದೇಶ ಉಳಿಯುತ್ತದೆ, ಸಂವಿಧಾನಕ್ಕೆ ಅಪಾಯಕಾರಿ ಸ್ಥಿತಿ ಬಂದರೆ ದೇಶ ನಾಶವಾಗುತ್ತದೆ-ಉಪ ಲೋಕಾಯಕ್ತ ಬಿ.ವೀರಪ್ಪ**
- **ಜಿಬಿಎ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ 135ನೇ ಜನ್ಮದಿನಾಚರಣೆ ಮತ್ತು ವಿವಿಧ ಕ್ಷೇತ್ರಗಳ ಸಾಧಕ/ಸಾಧಕಿಯರಿಗೆ ಸನ್ಮಾನ ಸಮಾರಂಭ.**

ಉಪ ಲೋಕಾಯುಕ್ತರಾದ ಬಿ.ವೀರಪ್ಪರವರು, ಕರ್ನಾಟಕ ಉಚ್ಚನ್ಯಾಯಲಯದ ನ್ಯಾಯಮೂರ್ತಿಗಳಾದ ಹೆಚ್.ಟಿ.ನರೇಂದ್ರ ಪ್ರಸಾದ್ ರವರು, ನ್ಯಾಯಮೂರ್ತಿಗಳಾದ ಎಸ್.ರಾಚಯ್ಯರವರು, ಮುಖ್ಯ ಆಯುಕ್ತರಾದ ಮಹೇಶ್ವರರಾವ್ ರವರು, ಡಾ||ಎಸ್ .ಜಿ.ಸುಶೀಲಮ್ಮ, ಮಾಜಿ ಆಯುಕ್ತರಾದ ಜೆ.ಹೆಚ್.ಅನಿಲ್ ಕುಮಾರ್ ರವರು, ವಿಶೇಷ ಆಯುಕ್ತರಾದ ವೆಂಕಟಾಚಲಪತಿ, ಜಿಬಿಎ ಅಧಿಕಾರಿಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್, ಹಿರಿಯ ವಕೀಲರಾದ ಎ.ರಾಜೇಶ್, ಸಾಹಿತಿ ಪ್ರೊ.ಶ್ರೀನಿವಾಸಮೂರ್ತಿರವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಉಪ ಲೋಕಾಯಕ್ತರಾದ ಬಿ.ವೀರಪ್ಪರವರು ಮಾತನಾಡಿ ಭಾರತ ಜನತೆಯಲ್ಲಿ ಹೃದಯದಲ್ಲಿ 135ವರ್ಷವಾದರು ಅಂಬೇಡ್ಕರ್ ಅವರ ಮೇಲಿನ ಪ್ರೀತಿ ಕಡಿಮೆಯಾಗಿಲ್ಲ. ದೇಶಕ್ಕಾಗಿ ಬದುಕಿದರು, ದೇಶಕ್ಕಾಗಿ ಮಡಿದವರು ಅಂಬೇಡ್ಕರ್ ರವರು. ಸಂವಿಧಾನ ಎಂಬ ರಾಷ್ಟ್ರೀಯ ಗ್ರಂಥವನ್ನು ಕೊಡುಗೆಯಾಗಿ ನೀಡಿದರು. ಸಂವಿಧಾನ ವಿಶ್ವದ ಸರ್ವಶೇಷ್ಠ ಸಂವಿಧಾನವಾಗಿದೆ. ಮನುಷ್ಯ ಬದುಕಿದ್ದಾಗ, ಸತ್ತ ಮೇಲು ಗೌರವದಿಂದ ನಡೆಸಿಕೊಳ್ಳಬೇಕು ಎಂದು ಸಂವಿಧಾನದಲ್ಲಿ ಅವಕಾಶ ನೀಡಿದೆ. ಸಂವಿಧಾನ ಸುರಕ್ಷಿತವಾಗಿ ಇದ್ದರೆ ಮಾತ್ರ ದೇಶ ಉಳಿಯತ್ತದೆ ಸಂವಿಧಾನಕ್ಕೆ ಅಪಾಯಕಾರಿ ಸ್ಥಿತಿ ಬಂದರೆ ದೇಶ ನಾಶವಾಗುತ್ತದೆ.

ಅಂಬೇಡ್ಕರ್ ಚಿಂತನೆ, ಆದರ್ಶವನ್ನು ದೇಶದ ಎಷ್ಟು ಜನರು ಪಾಲಿಸುತ್ತಿದ್ದಾರೆ ಎಂಬ ಚಿಂತನೆ ಮಾಡಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಶೇಕಡ 18ರಷ್ಟು ವಿದ್ಯಾವಂತರು ಇದ್ದರು ಅದರೆ ಇಂದು ಶೇಕಡ 80ರಷ್ಟು ವಿದ್ಯಾವಂತರು ಇದ್ದಾರೆ ಅದರೆ ನಮ್ಮಲ್ಲಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಪಾಲಿಸುತ್ತಿಲ್ಲ ಜಯಂತಿ ಅಚರಣೆ ಮಾಡಿ ಸುಮ್ಮನಾಗುತ್ತಾರೆ. ಪ್ರತಿಯೊಬ್ಬರು ಅಂಬೇಡ್ಕರ್ ಅವರ ಆದರ್ಶ ಚಿಂತನೆ ಮತ್ತು ಅವರ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಎಲ್ಲರು ಸಾಗಬೇಕು ನಾನು ಇಂತಹ ಉನ್ನತ ಹುದ್ದೆ ಸಿಗಲು ಸಂವಿಧಾನ ಕಾರಣ ಎಂದು ಹೇಳಿದರು.



ನ್ಯಾಯಮೂರ್ತಿಗಳಾದ ಹೆಚ್.ಟಿ.ನರೇಂದ್ರ ಪ್ರಸಾದ್ ರವರು ಮಾತನಾಡಿ ಅಂಬೇಡ್ಕರ್ ಜಯಂತಿಯನ್ನು ಹಬ್ಬದ ರೀತಿಯಲ್ಲಿ ಎಲ್ಲಾ ಸಮಾಜದವರು ಅಚರಿಸುತ್ತಾರೆ.

ಅವರ ಹಾಕಿಕೊಟ್ಟ ಸಿದ್ದಾಂತಗಳನ್ನು ಆಳವಡಿಸಿಕೊಂಡು ಅಚರಿಸಿದಾಗ ಅರ್ಥ ಬರುತ್ತದೆ. ಸಂವಿಧಾನ ಪ್ರಕಾರ ನಿಮಗೆ ಉದ್ಯೋಗ ಸಿಕ್ಕಿದೆ ಕೆಲಸದಲ್ಲಿ ಶ್ರದ್ದೆಯಿಂದ ಜನರ ಕೆಲಸ ಮಾಡಬೇಕು. ಮಹಿಳೆಯರಿಗೆ ಸಮಾನತೆ ಹಕ್ಕು ನೀಡಿದರು. ಲೋಕಸಭೆಯಲ್ಲಿ ರಾಜಕೀಯದಲ್ಲಿ ಮಹಿಳಾ ಮೀಸಲಾತಿ ಜಾರಿಯಾಗಲು ಅಂಬೇಡ್ಕರ್ ರವರು ಕೊಟ್ಟ ಸಂವಿಧಾನ ಕಾರಣ.

ಪ್ರಪಂಚದಲ್ಲಿ ಅತ್ಯಂತ ಶೇಷ್ಠ ಸಂವಿಧಾನವಾಗಿದೆ. ಶಿಕ್ಷಣದಿಂದ ಮಾತ್ರ ದೇಶ ಅಭಿವೃದ್ದಿ ಸಾಧ್ಯ ಎಂದು ಅರಿತಿದ್ದರು. ಅಂಬೇಡ್ಕರ್ ರವರ ಅತ್ಯಂತ ಕಷ್ಟ ದಿನಗಳು ಇದ್ದರು, ಶಿಕ್ಷಣದಲ್ಲಿ ಎಂದು ಹಿಂದುಳಿಯಲಿಲ್ಲ. ಅರ್ಥಶಾಸ್ತದಲ್ಲಿ ದೇಶದಲ್ಲಿಯೆ ಪ್ರಥಮವಾಗಿ ಡಾಕ್ಟರೇಟ್ ಪಡೆದರು ಎಂದು ಹೇಳಿದರು. ನ್ಯಾಯಮೂರ್ತಿಗಳಾದ ಎಸ್.ರಾಚಯ್ಯರವರು ಮಾತನಾಡಿ ಅಂಬೇಡ್ಕರ್ ರವರು ಮಹಾನ್ ವ್ಯಕ್ತಿ, ಉತ್ತಮವಾದ ಮಾನವತವಾದಿ, ದೇಶಕ್ಕೆ ಸಂವಿಧಾನವನ್ನು ಕೊಡುಗೆ ನೀಡಿದ್ದಾರೆ. ಸಂವಿಧಾನ ರಕ್ಷಿಸಲು ನ್ಯಾಯಮೂರ್ತಿ, ವಕೀಲರ ಪಾತ್ರ ಮುಖ್ಯ.

ಸಂವಿಧಾನ ಅಡಿಯಲ್ಲಿ ನಾವೆಲ್ಲರು ಬದುಕುತ್ತಿದ್ದೇವೆ ಎಂದು ಹೇಳಿದರು. ಮುಖ್ಯ ಆಯುಕ್ತರಾದ ಮಹೇಶ್ವರರಾವ್ ರವರು ಮಾತನಾಡಿ ಅಂಬೇಡ್ಕರ್ ಜನ್ಮ ದಿನಾಚರಣೆ ಜಿಬಿಎಯಲ್ಲಿ ಅದ್ದೂರಿಯಾಗಿ ಅಚರಿಸಲಾಗುತ್ತಿದೆ.

ಪ್ರತಿಯೊಬ್ಬ ನಾಗರಿಕರ ಸಮಸ್ಯೆಗಳಿಗೆ ಸಂವಿಧಾನ ಬದ್ದವಾಗಿ ನಾವು ಸಮಾನತೆಯಿಂದ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ. ಬಡವರು, ಶೋಷಿತರ ನೋವು ನಿವಾರಣೆ ಮಾಡಬೇಕು. ಸಮಸ್ಯೆಗಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಬೇಕು ಎಂದು ಹೇಳಿದರು.

ಪದ್ಮಶ್ರೀ ಡಾ||ಎಸ್.ಜಿ.ಸುಶೀಲಮ್ಮರರಿಗೆ ಡಾ||ಬಿ.ಆರ್.ಅಂಬೇಡ್ಕರ್ ಸಮಾಜಸೇವಾ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು ಮತ್ತು ಗುರುರಾಜ ಹೊಸಕೋಟೆ, ಸತ್ಯಪ್ರಸಾದ್, ಶಿವರುದ್ರಪ್ಪ, ಹೆಚ್.ಕೆ.ಪಾಪಣ್ಣ, ಆರ್.ರಂಗಸ್ವಾಮಿ, ಮೋಹನ್ ಭೀಮರಾವ್, ಕೆ.ವಿ.ರಾಜೇಶ್ವರಿ, ಎಂ.ಶ್ರೀನಿವಾಸಮೂರ್ತಿ, ವೈಜನಾಥ್ ಬಿರಾದಾರ್, ನಾರಾಯಣ್, ನಾಗರಾಜ್ ಎಂ, ಜಿ.ಜಿ.ಬಸಪ್ಪ, ಬಿ.ಎಸ್.ಸತ್ಯನಾರಾಯಣ್, ಶ್ರೀಮತಿ ಭಾಗ್ಯ, ಶಶಿಧರ್, ನಾಗರಾಜ್ ಬಳ್ಳಕೆರೆ, ಎನ್.ಶಿವದತ್ತ, ಬಿ.ಮಹದೇವಸ್ವಾಮಿ, ಆರ್.ಚಂದ್ರಶೇಖರ್ , ಡಾ||ಬಿ.ಆರ್. ಅಂಬೇಡ್ಕರ್ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪಾಲಿಕೆ ಅಧಿಕಾರಿ ಮತ್ತು ನೌಕರರಿಗೆ ಡಾ||ಬಿ.ಆರ್.ಅಂಬೇಡ್ಕರ್ ಭೂಷಣ ಪ್ರಶಸ್ತಿ ನೀಡಲಾಯಿತು.

ಡ್ರೋನ್ ತಂತ್ರಜ್ಞಾನವು ಸಣ್ಣ ರಾಷ್ಟ್ರಗಳಿಗೂ ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುತ್ತಿವೆ

# ಡ್ರೋನ್ ಕ್ರಾಂತಿಕಾರಿ ತಂತಜ್ಞಾನ: ಜಿಲ್ಲಾ ಕಮಾಂಡರ್ ಮಿಶ್ರಾ

• ಉದಯವಾಹಿನಿ ಮೂಡುಬಿದಿರೆ

ಏರೋಡೈನಾಮಿಕ್ಸ್ ಸಂಸ್ಥೆಯು ಆಳ್ವಾಸ್ ಕಾಲೇಜಿನಲ್ಲಿ ಆರಂಭಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಮೊದಲ ಡಿಜಿಸಿಎ ಮಾನ್ಯತೆ ಪಡೆದ ಡ್ರೋನ್ ತರಬೇತಿ ಕೇಂದ್ರವನ್ನು ಕಾಲೇಜಿನ ಆವರಣದಲ್ಲಿ ಉದ್ಘಾಟಿಸಲಾಯಿತು.

ಕರ್ನಾಟಕದ ಕೋಸ್ಟ್ ಗಾರ್ಡ್ ಉಪ ಮಹಾ ನಿರೀಕ್ಷಕ (ಡಿಐಜಿ) ಹಾಗೂ ಜಿಲ್ಲಾ ಕಮಾಂಡರ್ ಪಿ.ಕೆ. ಮಿಶ್ರಾ ಮಾತನಾಡಿ, ರಕ್ಷಣೆ ಹಾಗೂ ನಾಗರಿಕ ಕ್ಷೇತ್ರಗಳಲ್ಲಿ ಡ್ರೋನ್ ತಂತ್ರಜ್ಞಾನವು ವ್ಯಾಪಕವಾಗಿ ಬಳಸಲ್ಪಡುತ್ತಿರುವುದರಿಂದ ಇದರ ಮಹತ್ವ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕಡಿಮೆ ವೆಚ್ಚ, ನಿಖರತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಬಳಸಬಹುದಾದ ಸಾಮರ್ಥ್ಯದಿಂದ ಡ್ರೋನ್‌ಗಳು ಕ್ರಾಂತಿಕಾರಿ ತಂತ್ರಜ್ಞಾನವಾಗಿ ಹೊರಹೊಮ್ಮುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು.

ಜಾಗತಿಕ ಬೆಳವಣಿಗೆಗಳನ್ನು ಉಲ್ಲೇಖಿಸಿ, ಅಮೆರಿಕ, ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷಗಳಲ್ಲಿ, ಡ್ರೋನ್‌ಗಳು ಆಧುನಿಕ ಯುದ್ಧ ತಂತ್ರಗಳನ್ನು ಮಹತ್ತರವಾಗಿ ಬದಲಾಯಿಸುತ್ತಿವೆ. ಡ್ರೋನ್ ತಂತ್ರಜ್ಞಾನವು ಸಣ್ಣ ರಾಷ್ಟ್ರಗಳಿಗೂ ತಾಂತ್ರಿಕವಾಗಿ ಮುಂದುವರಿದ ರಾಷ್ಟ್ರಗಳನ್ನು ಎದುರಿಸುವ ಸಾಮರ್ಥ್ಯವನ್ನು ನೀಡುತ್ತಿವೆ. ದುಬಾರಿ ಸಾಂಪ್ರದಾಯಿಕ ಯುದ್ಧೋಪಕರಣಗಳಿಗಿಂತ ಕಡಿಮೆ ವೆಚ್ಚದ ಮಾನವರಹಿತ ಡ್ರೋನ್‌ಗಳ ಅಭಿವೃದ್ಧಿಗೆ ದೇಶಗಳು ಹೆಚ್ಚು ಒತ್ತು ನೀಡುತ್ತಿವೆ. ವಿದ್ಯಾರ್ಥಿಗಳು ಇಂತಹ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

> ಈ ಕೇಂದ್ರದ ಆರಂಭದಿಂದ ಆಳ್ವಾಸ್ ಕಾಲೇಜಿನ ಶೈಕ್ಷಣಿಕ ವಾತಾವರಣವನ್ನು ಮತ್ತಷ್ಟು ಸಮೃದ್ಧಗೊಳಿಸುವುದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಡಿಜಿಸಿಎ ಮಾನ್ಯತೆ ಪಡೆದ ಡ್ರೋನ್ ತರಬೇತಿಯ ಪ್ರಮುಖ ಕೇಂದ್ರವಾಗಿ ಸ್ಥಾಪಿಸಲು ಸಹಕಾರಿಯಾಗಲಿದೆ. - ಡಾ. ಎಂ. ಮೋಹನ ಆಳ್ವ
> ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ

ಇಬ್ಬರು ಭಾರತೀಯ ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಯಾರಿಸಿದ ಡ್ರೋನ್ ಸುಮಾರು 50,000 ರೈತರಿಗೆ ಬೆಳೆ ಸಮಸ್ಯೆಗಳನ್ನು ಗುರುತಿಸಲು ಹಾಗೂ ವೆಚ್ಚವನ್ನು ಕಡಿಮೆ ಮಾಡಲು ಸಹಾಯ ಮಾಡಿರುವುದನ್ನು ಉದಾಹರಣೆಯಾಗಿ ಉಲ್ಲೇಖಿಸಿದರು. ವಿದ್ಯಾರ್ಥಿಗಳಿಂದ ನಿರ್ಮಿಸಲಾದ ಕಡಿಮೆ ವೆಚ್ಚದ ರಾಕೆಟ್ ಯೋಜನೆಗೆ ಇಸ್ರೋ ಗಮನ ಸೆಳೆದಿರುವುದನ್ನು ತಿಳಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಡ್ರೋನ್ ತಂತ್ರಜ್ಞಾನವನ್ನು ಸಿದ್ಧಿಸಿಕೊಳ್ಳುವುದು ಕಾಲದ ಅಗತ್ಯ. ವಿದ್ಯಾರ್ಥಿಗಳು ಭವಿಷ್ಯಕ್ಕೆ ಸಿದ್ಧರಾಗಿ ಸುತ್ತಮುತ್ತಲಿನ ಸಂಪನ್ಮೂಲಗಳನ್ನು ಮೌಲ್ಯಪೂರ್ಣವಾಗಿ ಬಳಸಿಕೊಳ್ಳಬೇಕು. ಡ್ರೋನ್ ತಂತ್ರಜ್ಞಾನದಿಂದ ಆಧುನಿಕ ಯುದ್ಧದ ಸ್ವರೂಪವೇ ಬದಲಾಗುತ್ತಿದ್ದು, ಪರಂಪರಾಗತ ಸಶಸ್ತ್ರ ಪಡೆಗಳ ಅಗತ್ಯತೆಯನ್ನೇ ಪ್ರಶ್ನಿಸುವಂತಾಗಿದೆ ಎಂದರು.

> ಕೃಷಿ, ರಕ್ಷಣಾ ಕ್ಷೇತ್ರ ಮತ್ತು ಪರಿಸರ ಸಂರಕ್ಷಣಾ ಕ್ಷೇತ್ರಗಳಲ್ಲಿ ಡ್ರೋನ್ ತಂತ್ರಜ್ಞಾನವು ಮಹತ್ವದ ಬದಲಾವಣೆಗಳನ್ನು ತರುತ್ತಿದ್ದು, ಬೆಳೆಗಳ ಮೇಲ್ವಿಚಾರಣೆ, ನಿಖರ ಸಿಂಪಡಣೆ, ನೀರಾವರಿ ಪರಿಶೀಲನೆ ಹಾಗೂ ಬೆಳೆ ಆರೋಗ್ಯ ವಿಶ್ಲೇಷಣೆಗೆ ಡ್ರೋನ್‌ಗಳು ಸಹಕಾರಿಯಾಗಿವೆ. ಪರಿಸರ ಸಂರಕ್ಷಣೆಯಲ್ಲಿಯೂ, ವನ್ಯಜೀವಿ ಮೇಲ್ವಿಚಾರಣೆ ಮತ್ತು ಅಕ್ರಮ ಚಟುವಟಿಕೆಗಳನ್ನು ತಡೆಯಲು ಡ್ರೋನ್‌ಗಳು ಉಪಯುಕ್ತವಾಗಿವೆ. ವಿದ್ಯಾರ್ಥಿಗಳು ಇಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಮಾಜಮುಖಿ ನವೀನತೆಗಳನ್ನು ರೂಪಿಸಬೇಕು. -ವಿವೇಕ್ ಆಳ್ವ

ಏರೋಡೈನಾಮಿಕ್ಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ದೇವಿಪ್ರಸಾದ್ ಶೆಟ್ಟಿ ಪ್ರಸ್ತಾವಿಕವಾಗಿ ಮಾತನಾಡಿ, ಈ ಕೇಂದ್ರದ ಮೂಲಕ ಡ್ರೋನ್ ತಂತ್ರಜ್ಞಾನದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಡ್ರೋನ್ ಕಾರ್ಯಾಚರಣೆ, ನಿರ್ವಹಣೆ, ಸುರಕ್ಷತಾ ನಿಯಮಗಳು ಮತ್ತು ತಾಂತ್ರಿಕ ಅಂಶಗಳ ಬಗ್ಗೆ ಸಮಗ್ರ ತರಬೇತಿ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗೋನ್ಮುಖವಾಗಿ ರೂಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು. ನ್ಯಾಯವಾದಿ ಜಗದೀಶ ಕೆ. ಶೇಣವ ಇದ್ದರು. ಕಾರ್ಯಕ್ರಮವನ್ನು ಡಾ. ಪ್ರಣಮ್ಯ ಭಟ್ ನಿರೂಪಿಸಿ,ಸುಧೀರ್ ಅಮೀನ್ ಸ್ವಾಗತಿಸಿ, ಅನುಷಾ ಶೆಟ್ಟಿ ವಂದಿಸಿದರು.

## ಮಿನಿ ನ್ಯೂಸ್

### ಜ್ಞಾನ ಇದ್ದವನು ಬಾಗುತ್ತಾನೆ, ಎಂದಿಗೂ ಬೀಗುವುದಿಲ್ಲ

• ಉದಯವಾಹಿನಿ ಜೇವರಗಿ

ಶ್ರೀ ಮಹಾಲಕ್ಷ್ಮೀ ಮಹಿಳಾ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದ ವತಿಯಿಂದ ಗಂವಾರದಲ್ಲಿ ಐದು ದಿನಗಳ ಕಾಲ ನಡೆಯುವ ರಾಷ್ಟ್ರೀಯ ಸೇವಾ ಯೋಜನಾ ಶಿಬಿರದ ಕಾರ್ಯಕ್ರಮಕ್ಕೆ ತ್ರಿವಿಕ್ರಮಾನಂದ ಸರಸ್ವತಿ ಮಹಾಸ್ವಾಮಿಗಳ ಮಠದ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಐದನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಭಾಗದ ಕಾಲೇಜಿನ ಉಪನ್ಯಾಸಕ ಸುರೇಶ ಕುಮಾರ್ ಹಿರೇಮಠ ವಹಿಸಿಕೊಂಡಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ,ಮಾತನಾಡಿದ ಅವರು ಸಾಧನೆಗೆ ಶ್ರಮವೇ ಮೂಲ ಎಂಬುದು ಅಕ್ಷರಶಃ ಸತ್ಯವಾದ ಮಾತು ಶ್ರಮ ಏವ ಜಯತೆ ಯಾವುದೇ ವಿಷಯವನ್ನು ಕರಗತ ಮಾಡಿಕೊಳ್ಳಲು ಅಭ್ಯಾಸ ಮಾಡಬೇಕು, ಜ್ಞಾನ ಇದ್ದವನು ಬಾಗುತ್ತಾನೆ, ಎಂದಿಗೂ ಬೀಗುವುದಿಲ್ಲ ಪ್ರಯತ್ನ ಮತ್ತು ಪರಿಶ್ರಮ ಪಟ್ಟಾಗ ಯಶಸ್ಸು ತಾನಾಗಿ ಒಲಿಯುತ್ತದೆ. ಎಂದರು. ಮುಖ್ಯ ಅತಿಥಿಗಳಾಗಿ ಜೇವರ್ಗಿಯ ಸರಕಾರಿ ಐಟಿಐ ಕಾಲೇಜಿನ ಪ್ರಭಾರಿ ಪ್ರಾಚಾರ್ಯ ಅಶೋಕ ಕಾಬಾ, ಉಪನ್ಯಾಸಕರುಗಳಾದ ಸುಧಾಕರ್ ಚಿಕ್ಕಮಠ, ಪಾಲ್ಗೊಂಡರು.

### ಹಗರಿಗೆ ನೀರು ಬಿಡಿಸಲು ಜಿಲ್ಲಾಡಳಿತಕ್ಕೆ ಮನವಿ

• ಉದಯವಾಹಿನಿ ಬಳ್ಳಾರಿ

ತುಂಗಭದ್ರ ಜಲಾಶಯದಿಂದ ಬೇಸಿಗೆ ಬೆಳೆಗೆ ನೀರು ಇಲ್ಲದೆ ಕುಡಿಯುವ ನೀರಿನ ಕೆರೆಗಳು, ಹಳ್ಳಗಳು, ಬಾವಿಗಳು ಬೋರ್ವೆಲ್‌ಗಳು ಹಗರಿ (ವೇದಾವತಿ ನದಿ) ನೀರಿಲ್ಲದೆ ಬತ್ತಿಹೋಗಿ ಜನರಿಗೂ ಮತ್ತು ಜಾನುವಾರುಗಳಿಗೆ ನೀರಿನ ಸಮಸ್ಯೆಯಾಗುತ್ತಿದೆ. ಕುಡಿಯುವ ನೀರಿಗಾಗಿ ತುಂಗಭದ್ರ ಜಲಾಶಯದ ಬಲದಂಡೆಯ ಕೆಳ ಮಟ್ಟದ ಕಾಲುವೆಗೆ (ಎಲ್.ಎಲ್.ಸಿ) ನೀರು ಬಿಡಲಾಗಿದೆ. ಈ ನೀರಿನ್ನು ಕುಡಿಯುವ ನೀರಿನ ಕೆರೆಗಳಿಗೆ ಗ್ರಾಮಪಂಚಾಯಿತಿಗಳು ತುಂಬಿಸುತ್ತಿದ್ದಾರೆ. ಆದರೆ ಹಗರಿ (ವೇದಾವತಿ ನದಿ)ಯ ಪಕ್ಕದ ಹಳ್ಳಿಗಳ ರೈತರಿಗೆ ಈ ನೀರು ಲಭ್ಯವಿಲ್ಲ.

ಹಾಗಾಗಿ ಬಳ್ಳಾರಿ ಗ್ರಾಮೀಣ ಭಾಗದ ಬರದನಹಳ್ಳಿ, ಮೋಕಾ, ಗೋಟೂರು, ಬಾಣಾಪುರ, ಬೆಣಕಲ್ಲು, ಕರ್ಚೇಡು. ಹೊಣೆನೂರು, ಯರಗುಡಿ, ಬಸರಕೋಡು, ಹದ್ದಿಗಿ, ತಾಳೂರು, ಉಳೂರು, ಉತ್ತನೂರು, ಮಾಟಸೂಗುರು, ಕೂರಿಗನೂರು, ಬೂದುಗುವ, ಮೈಲಾಪುರ, ಬಲಕುಂದಿ, ಹಳ್ಳಿಗನೂರು, ಚಾಣುಕ್ಯನೂರು, ರಾರಾವಿ, ಕರ್ಚಿಗನೂರು, ಬಾಗೇವಾಡಿ, ಕುಡದರಹಾಳು, ಶ್ರೀಧರಗಡ್ಡೆ ಮೊದಲಾದ ಗ್ರಾಮಗಳಿಗೆ ನೀರು ದೊರೆಯುತ್ತಿಲ್ಲ. ಅದಕ್ಕಾಗಿ ಮೋಕಾ ಗ್ರಾಮದ ಹತ್ತಿರ, ಹಗರಿ (ವೇದಾವತಿ ನದಿ)ಗೆ ನೀರು ಬಿಟ್ಟರೆ ಈ ಹಳ್ಳಿಗಳಿಗೆನೀರು ದೊರೆಯಲಿದೆ.

## ನರೇಂದ್ರ ಮೋದಿ ಚಾಯಿ ಮಾರಿ ದೇಶದ ಪ್ರಧಾನ ಮಂತ್ರಿಯಾಗಲು ಅಂಬೇಡ್ಕರ್ ಬರೆದ ಸಂವಿಧಾನದಿಂದ ಮಾತ್ರ: ಶಾಸಕ ಡಾ.ಅವಿನಾಶ ಜಾಧವ

• ಉದಯವಾಹಿನಿ ಚಿಂಚೋಳಿ

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದ ದೇಶದಲ್ಲಿರುವ ಪ್ರತಿಯೋಂದು ಜಾತಿಧರ್ಮದವರಿಗೆ ಸರ್ವರಿಗೂ ಸಮಾನತೆ ಹಕ್ಕು,ಮೀಸಲಾತಿ ಹಕ್ಕು,ಸ್ವಾತಂತ್ರ್ಯ ಹಕ್ಕು ನೀಡಿದ್ದಾರೆ,ನರೇಂದ್ರ ಮೋದಿ ಚಾಯಿ ಮಾರಿ ದೇಶದ ಪ್ರಧಾನ ಮಂತ್ರಿಯಾಗಲು ಅಂಬೇಡ್ಕರ್ ಬರೆದ ಸಂವಿಧಾನದಿಂದ ಮಾತ್ರ,ಭಾರತ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ ಎಂದು ಶಾಸಕ ಡಾ.ಅವಿನಾಶ ಜಾಧವ ಹೇಳಿದರು.

ಪಟ್ಟಣದ ಪ್ರಜಾಸೌಧ ಕಛೇರಿ ಆವರಣದಲ್ಲಿ ತಾಲ್ಲೂಕಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೋಂಡ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ 135ನೇ ಜಯಂತ್ಯೋತ್ಸವ ವೇದಿಕೆ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಂಬೇಡ್ಕರ್ ಜಯಂತಿ ಆಚರಣೆಗೆ ಸೀಮೀತಗೋಳಿಸದೆ ಅವರು ಹೇಳಿರುವ ಪ್ರತಿಯೋಂದು ಮಾತುಗಳು,ಸಂವಿಧಾನದ ಬರೆದ ಆಶಯಗಳು ನಾವೇಲ್ಲರೂ ಮೈಗೂಡಿಸಿಕೋಂಡು ಅವರ ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕು,ಅಂಬೇಡ್ಕರ್ ಶೋಷಣೆಗೆ ಒಳಗಾಗಿ ನಮ್ಮೇಲ್ಲರಿಗೂ ಒಳ್ಳೆಯ ಸಂವಿಧಾನ ನೀಡಿದ್ದಾರೆ, ಆಗ ಅಂಬೇಡ್ಕರ್ ಸಂವಿಧಾನ ಬರೆಯುವಾಗ ಮಹಿಳೆಯರಿಗೆ 33%ಪ್ರತಿಶತ ಮೀಸಲಾತಿ ನೀಡಬೇಕೆಂದು ಬರೆದಿದರು.


ಉದಯವಾಹಿನಿ ಚಿತ್ರ

ಆದರೆ ಅವರ ಆಶಯದಂತೆ ಈಗ ನರೇಂದ್ರ ಮೋದಿಯವರು ಮಹಿಳೆಯರಿಗೆ 33%ಪ್ರತಿಶತಃ ಮೀಸಲಾತಿ ಬಿಲ್ ಪಾಸ್ ಮಾಡುತ್ತಿದ್ದಾರೆ,ಕಾರ್ಯಕ್ರಮದಲ್ಲಿ ಅಧಿಕಾರಿಗಳು ಕಾಣುತ್ತಿಲ್ಲ,ತಹಶೀಲ್ದಾರ್ ಅವರೆ ನೀವು ಏನು ಮಾಡುತ್ತಿದ್ದಿರಿ ಇನ್ನೋಮ್ಮೆ ಹೀಗೆ ಆಗದಂತೆ ನೋಡಿಕೋಳ್ಳಿವೆಂದು ಆದೇಶ ನೀಡಿದರು.

ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ಭೀಮರಾವ ಟಿಟಿ, ಸಂಜೀವನ್ ಯಾಕಾಪೂರ, ಗೌತಮ್ ಬೋಮ್ನಳ್ಳಿ, ಮಾರುತಿ ಗಂಜಗಿರಿ,ಮಾತನಾಡಿದರು.

ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ ಸ್ವಾಗತಿಸಿದರು,ಅಶೋಕ ಹೂವಿನಭಾವಿ ನಿರೂಪಿಸಿದರು, ಸಮಾಜ ಕಲ್ಯಾಣ ಅಧಿಕಾರಿ ಡಾ.ಶೃತಿ ಎಮ್ ವಂದಿಸಿದರು. ಈ ಸಂದರ್ಭದಲ್ಲಿ ತಾಪಂ.ಇಒ ಸಂತೋಷಕುಮಾರ ಚವ್ಹಾಣ,ಶಾಮರಾವ ಕೋರವಿ, ರೇವಣಸಿದ್ದಪ್ಪ ಸುಬೇದಾರ,ಆನಂದಕುಮಾರ ಟೈಗರ್, ದೇವಿಂದ್ರಪ್ಪ ಹೋಳ್ಕರ್, ಪಾಂಡುರಂಗ ಲೋಡನೂರ, ಶಶಿದರಸ್ವಾಮಿ, ಆರೀಫ್, ಅಶೋಕ ಕುಲಕರ್ಣಿ,ಸೇರಿದಂತೆ ಸ್ಥಳಿಯ ಮುಖಂಡರು,ವಿವಿಧ ರಾಜಕೀಯ ಮುಖಂಡರು, ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

> ಅಂಬೇಡ್ಕರ್ ಜನ್ಮದಿನವು ಭಾರತ ದೇಶ ಅಲ್ಲದೆ ವಿಶ್ವದ್ಯಾಂತ 193 ರಾಷ್ಟ್ರಗಳಲ್ಲಿ ಆಚರಣೆ ಮಾಡುತ್ತಾರೆ, ಅಂಬೇಡ್ಕರ್ ಜನ್ನದಿನವು ಜ್ಞಾನದ ದಿನವಾಗಿ ಆಚರಿಸಲು ವಿಶ್ವಸಂಸ್ಥೆಯು ಘೋಷಣೆ ಮಾಡಲಾಗಿದೆ, ಮಹಿಳೆಯರಿಗೆ ಸಮಾನತೆ ಹಕ್ಕು ನೀಡಿರುವುದರಿಂದ ಮಹಿಳೆಯರು ಪ್ರತಿಯೋಂದು ಕ್ಷೇತ್ರದಲ್ಲಿ ಉದ್ಯೋಗದಲ್ಲಿ ಸರ್ಕಾರಿ ನೌಕರರಾಗಿ ಕಾಣುತ್ತಿದ್ದೇವೆ.
> -ಕಲಬುರ್ಗಿಯ ಶೇಕ್ ರೋಜಾ ಪ್ರೌಢ ಶಾಲೆಯ ಮುಖ್ಯಗುರು,

## ಅರ್ಧ ಕಾಮಗಾರಿಯಿಂದ ಜಲಾವೃತ ಭೀತಿ

• ಉದಯವಾಹಿನಿ ಭಟ್ಕಳ

ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಇದರಿಂದಾಗಿ ಅಪಘಾತ ಪ್ರಕರಣಗಳು ಹೆಚ್ಚುತ್ತಿದೆ ಎನ್ನುವ ಸಾರ್ವಜನಿಕರ ದೂರು ಒಂದೆಡೆಯಾದರೆ, ಮೂಡಭಟ್ಕಳ ಗ್ರಾಮದ ಬಳಿ ಅಂಡರ್‌ಪಾಸ್‌ನ ಅರೆಬರೆ ಕಾಮಗಾರಿಯಿಂದಾಗಿ ಗ್ರಾಮ ಮಳೆಗಾಲದಲ್ಲಿ ಜಲಾವೃತಗೊಳ್ಳಬಹುದು ಎಂಬ ಆತಂಕ ಸ್ಥಳೀಯರನ್ನು ಕಾಡತೊಡಗಿದೆ.

ಸಾರ್ವಜನಿಕರ ಬೇಡಿಕೆಯ ಮೇರೆಗೆ ತಾಲ್ಲೂಕಿನ ಮೂಡಭಟ್ಕಳ ಹಾಗೂ ಕಾಯ್ಕಿಣಿ ಮತ್ತು ಅಂಕೋಲಾ ಪಟ್ಟಣದಲ್ಲಿ ಅಂಡರ್‌ಪಾಸ್ ನಿರ್ಮಾಣ ಮಾಡಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕಳೆದ 6 ತಿಂಗಳ ಹಿಂದೆ ರೂ.38 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಕಾಮಗಾರಿ ನಿರ್ಮಾಣದ ಹೊಣೆಯನ್ನು ಕ್ಲಾಸಿಕ್ ಕನ್ಸಲ್ಸಿ ಎಂಬ ಖಾಸಗಿ ಕಂಪನಿ ಪಡೆದುಕೊಂಡಿತು

ಟೆಂಡರ್ ಪಡೆದುಕೊಂಡ ಆರಂಭದಲ್ಲಿ ಬಿರುಸಿನಲ್ಲಿ ಕೆಲಸ ಆರಂಭಿಸಿದ ಗುತ್ತಿಗೆದಾರ ಕಂಪೆನಿ ಈಗ ಕಾಮಗಾರಿಯನ್ನು ಅರ್ಧಕ್ಕೆ ಬಿಟ್ಟು ತೆರಳಿದೆ. ಅಂಡರ್ ಪಾಸ್ ಕಾಮಗಾರಿಗಾಗಿ ರಸ್ತೆಯ ಇಕ್ಕೆಲಗಳಲ್ಲಿ ಹೊಂಡವನ್ನು ತೆಗೆದು ಹಾಗೆ ಬೀಡಲಾಗಿದೆ. ಮಳೆಗಾಲದಲ್ಲಿ ಈ ಹೊಂಡಗಳಿಂದ ಮೂಡಭಟ್ಕಳ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶ ಜಲಾವೃತ್ತಗೊಳ್ಳಲಿದೆ ಎಂಬುದಾಗಿ ಸ್ಥಳೀಯರು ದೂರಿದ್ದಾರೆ.


ಉದಯವಾಹಿನಿ ಚಿತ್ರ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಗುತ್ತಿಗೆ ಪಡೆದ ಐಆರ್‌ಬಿ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಮಳೆಗಾಲದ ನೀರು ಹರಿದು ಹೋಗಲು ಸಮರ್ಪಕ ಚರಂಡಿ ನಿರ್ಮಾಣ ಮಾಡದ ಕಾರಣ ಪ್ರತಿ ಮಳೆಗಾಲದಲ್ಲಿ ಮೂಡಭಟ್ಕಳ ಪ್ರದೇಶ ಜಲಾವೃತಗೊಳ್ಳುತ್ತದೆ. ಆದರೆ ಈ ಬಾರಿ ಅಂಡರ್ ಪಾಸ್ ಕಾಮಗಾರಿಗಾಗಿ ಮೂಡಭಟ್ಕಳ ಭೂ ಪ್ರದೇಶವನ್ನು ಅಗೆದು ತಗ್ಗು ಪ್ರದೇಶವನ್ನಾಗಿ ಮಾಡಿ ಹಾಗೆಯೇ ಬೀಡಲಾಗಿದೆ. ಮಳೆಗಾಲದಲ್ಲಿ ಪಕ್ಕದಲ್ಲೆ ಇರುವ ಶರಾಬಿ ನದಿಯಿಂದ ಉಕ್ಕಿ ಬಂದರೆ ಮೂಡಭಟ್ಕಳ ಮಾತ್ರವಲ್ಲ ಹೂವಿನ ಮಾರುಕಟ್ಟೆ ಪ್ರದೇಶ ಕೂಡ ಸಂಪೂರ್ಣ ಜಲಾವೃತಗೊಳ್ಳಲಿದೆ ಎಂದು ಸ್ಥಳೀಯ ವೆಂಕಟೇಶ ನಾಯ್ಕ ಹೇಳಿದರು.

ಅಂಡರ್ ಪಾಸ್ ಕಾಮಗಾರಿಗೆ ಭೂಸ್ವಾಧೀನದ ಸಮಸ್ಯೆ ಎದುರಾಗಿದೆ ಎಂದು ಕಂಪನಿ ಹೇಳುತ್ತಿದೆ. ಆದರೆ, ಜಾಗ ಸ್ವಾಧೀನಗೊಳ್ಳದೆ ಅರೆಬರೆ ಕಾಮಗಾರಿ ಮಾಡಿರುವುದು ಏಕೆ? ಎಂದೂ ಪ್ರಶ್ನಿಸಿದರು.

## ಜಾತಿ ವಿಮೋಚನೆಗೆ ರಾಜಕಾರಣಿಗಳು ಬಿಡಲ್ಲ


ಉದಯವಾಹಿನಿ ಚಿತ್ರ

• ಉದಯವಾಹಿನಿ ತೀರ್ಥಹಳ್ಳಿ

ಸಮಾಜವು ಜಾತಿ ತೊರೆಯಲು ತಯಾರಿದೆ. ಆದರೆ ರಾಜಕಾರಣಿಗಳು ಜಾತಿ ವಿಮೋಚನೆಗೆ ಬಿಡುವುದಿಲ್ಲ. ಆಧುನಿಕತೆ ಬೆಳೆದಿದ್ದರೂ ಮೇಲು ಕೀಳೆಂಬುದು ಸರಿಯಲ್ಲ. ಸಮಾಜದಲ್ಲಿ ಬದಲಾವಣೆ ಆಗಬೇಕು' ಎಂದು ಶಾಸಕ ಅರಗ ಜ್ಞಾನೇಂದ್ರ ಅಭಿಪ್ರಾಯಪಟ್ಟರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಂ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಸರ್ಕಾರ ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ರೂ. 24,000 ಕೋಟಿಯನ್ನು ಗ್ಯಾರಂಟಿ ಯೋಜನೆಗೆ ವಿನಿಯೋಗಿಸುತ್ತಿದೆ. ನಿಮ್ಮ ಸಮುದಾಯಕ್ಕೆ ಅನ್ಯಾಯವಾಗುತ್ತಿದ್ದರೂ ಪ್ರಶ್ನಿಸದ ನೀವು ಎಂತಹ ನಾಯಕರು? ಸರ್ಕಾರವನ್ನು ಹೊಗಳುವ ಭಟ್ಟಂಗಿತನವನ್ನು ಎಷ್ಟು ದಿನ ಮಾಡುತ್ತೀರಿ. ನಿಮಗೆ ಅನ್ಯಾಯ ಖಂಡಿಸುವ ಶಕ್ತಿ ಇಲ್ಲವೆ? ಎಂದು ಮುಖಂಡರನ್ನು ಪ್ರಶ್ನಿಸಿದರು.

ಅಸ್ಪೃಶ್ಯತೆ ಎನ್ನುವುದು ಮನುಷ್ಯ ವಿರೋಧಿಯಾಗಿದೆ. ದಲಿತರ ಹೆಸರಿನಲ್ಲಿ ಯಾವ ಮುಖಂಡರೂ ರಾಜಕೀಯ ಮಾಡಬಾರದು. ಹೊಣೆಗಾರಿಕೆ ಅರಿತು ಸಮುದಾಯಕ್ಕೆ ಸಹಾಯ ಮಾಡಬೇಕು. ಅಗತ್ಯ ಬಿದ್ದರೆ ನನ್ನ ಸಹಕಾರ ಪಡೆಯಿರಿ. ಜಾತಿ, ಪಂಗಡದ ಹೆಸರಿನಲ್ಲಿ ಕಿತ್ತಾಡಬೇಡಿ. ವಿಸಿಟಿಂಗ್ ಕಾರ್ಡ್ ಮುಖಂಡರಾಗಿ ಗುರುತಿಸಿಕೊಳ್ಳುವುದನ್ನು ಗಮನಿಸಿದರೆ ನೋವಾಗುತ್ತದೆ ಎಂದು ಹೇಳಿದರು.

## ಪುರಸಭೆ ಸಾರ್ವಜನಿಕ ಶೌಚಾಲಯದ ಪಕ್ಕವೇ ರಾಶಿ ರಾಶಿ ಕಸ !!! ಅಂದವಾದ ಹೊಸ ಸಿಸಿ ರಸ್ತೆ ಮೇಲೆ ಕಸದ ತಾಂಡವ!!! ಪುರಸಭೆ ಅಧಿಕಾರಿಗಳು ಸ್ವಚ್ಛತೆಗೆ ಮುಂದಾಗುವರೇ?

ಉದಯವಾಹಿನಿ ವಿಶೇಷ

• ಉದಯವಾಹಿನಿ ಬಸವನಬಾಗೇವಾಡಿ

ಪಟ್ಟಣದಿಂದ ನಾಗೂರ ಹಾಗೂ ಹುಡಕೋ ಬಡಾವಣೆಗೆ ತೆರಳುವ ಇತ್ತೀಚಿಗಷ್ಟೇ ನಿರ್ಮಾಣಗೊಂಡ ಸುಂದರ ಸಿಸಿ ರಸ್ತೆಯ ಮೇಲೆಯೇ ನಿತ್ಯ ರಾಶಿ ರಾಶಿ ಕಸ ಸಂಗ್ರಹಣೆಯಾಗಿ ಗಬ್ಬು ನಾರುತ್ತಿದೆ. ಸ್ಥಳೀಯ ಪುರಸಭೆ ನಿರ್ಮಿಸಿದ ಸಾರ್ವಜನಿಕ ಶೌಚಾಲಯ ಪಕ್ಕವೇ ಈ ಕಸದ ಸಂಗ್ರಹ ನಿತ್ಯ ರಾರಾಜಿಸುತ್ತಿದೆ.

ಅರ್ಧ ರಸ್ತೆಯನ್ನೇ ಆಕ್ರಮಿಸಿಕೊಂಡ ಕಸದ ಮೇಲೆ ನಾಯಿ ಹಂದಿಗಳ ಹಾರಾಟ ಜೋರಾಗಿ ಕಾಣುತ್ತಿದೆ. ಹೀಗಾಗಿ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಈ ರಸ್ತೆ ಮೂಲಕ ಸಂಚರಿಸುವುದು ತುಂಬಾ ಕಷ್ಟಮಯವಾಗಿದೆ. ಈ ಮೂಲಕ ತೆರಳುವ ಹುಡ್ಕೋ ಹಾಗೂ ನಾಗೂರ ಕಡೆ ಸಂಚರಿಸುವ ಸಾರ್ವಜನಿಕರು ಮೂಗು ಮುಚ್ಚಿಕೊಂಡೆ ಹಿಡಿ ಶಾಪ ಹಾಕುತ್ತಾ ತೆರಳಬೇಕಾದ ಪರಸ್ಥಿತಿ ನಿರ್ಮಾಣವಾಗಿದೆ. ಹಂದಿ ನಾಯಿಗಳು ಸತ್ತರೆ, ಕಸ ತುಂಬಿಕೊಂಡು ನೇರವಾಗಿ ಈ ರಸ್ತೆ ಮೇಲೆ ಎಸೆದು ಹೋಗುತ್ತಾರೆ. ಹೀಗಾಗಿ ಈ ರಸ್ತೆಯು ಕಸದ ತಾಣವಾಗಿ ನಿರ್ಮಾಣವಾಗಿದ್ದಂತೂ ಸತ್ಯ. ಪುರಸಭೆಯವರು ಈ ಕಸದ ಪ್ರಮಾಣ ಬಹಳವಾದಾಗ ವಾಹನದ ಮೂಲಕ ತೆಗೆದುಕೊಂಡು ಹೋಗುತ್ತಾರೆ.


ಉದಯವಾಹಿನಿ ಚಿತ್ರ

> ರಸ್ತೆ ಮೇಲಿನ ಕಸವನ್ನು ಸ್ವಚ್ಛಗೊಳಿಸಿ ಅಲ್ಲಿಯ ನಿವಾಸಿಗಳಿಗೆ ಎಲ್ಲೆಂದರಲ್ಲಿ ಕಸ ಹಾಕದೆ ಪುರಸಭೆಯ ವಾಹನದಲ್ಲಿ ಕಸ ಹಾಕುವಂತೆ ನಮ್ಮ ಸಿಬ್ಬಂದಿಯವರಿಂದ ತಿಳುವಳಿಕೆ ನೀಡುವ ಕೆಲಸವನ್ನು ಎರಡು ದಿನದಲ್ಲಿ ಮಾಡುವೆ.
> -ವಿಜಯ ಕುಮಾರ ವಂದಾಲ,ಹಿರಿಯ ಆರೋಗ್ಯ ನಿರೀಕ್ಷಕರು, ಪುರಸಭೆ, ಬಸವನಬಾಗೇವಾಡಿ.

ಬರೀ ಕಸ ತೆಗೆದುಕೊಂಡು ಹೋಗುವ ಮುನ್ನ ಅಲ್ಲಿಯ ನಿವಾಸಿಗಳಿಗೆ ಎಲ್ಲೆಂದರಲ್ಲಿ ಕಸ ಎಸಗದಂತೆ ಪರಿಸರವನ್ನು ಸ್ವಚ್ಛವಾಗಿಡುವಂತೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಾಗಿದೆ. ಕಸದ ತೊಟ್ಟಿಯನ್ನು ಇರಿಸಿ ಸ್ವಚ್ಛ ವಾತಾವರಣ ನಿರ್ಮಾಣಕ್ಕೆ ಪುರಸಭೆ ಮುಂದಾಗಿತೇ?

> ಪುರಸಭೆ ವಾಹನದಲ್ಲಿ ಕಸ ಹಾಕದೇ ರಸ್ತೆ ಮೇಲೆ ಹಾಕುವುದರಿಂದ ಪಟ್ಟಣದ ಅಂದ ಹದಗೆಡುತ್ತಿದೆ. ಈ ಕುರಿತು ಸಾರ್ವಜನಿಕರು ಪಟ್ಟಣದ ಸ್ವಚ್ಛತೆಗೆ ಮುಂದಾಗಬೇಕಿದೆ.ಡಾ. ಜಗದೀಶ ನಿಡಗುಂದಿ. ಹುಡಕೋ ನಿವಾಸಿಗಳು.

> ಈ ರಸ್ತೆ ಮೇಲೆ ಸದಾ ಕಸ ಸಂಗ್ರಹ ಹಾಗೂ ಗಟಾರ ತುಂಬಿ ಗಬ್ಬು ನಾರುತ್ತಿವೆ. ಈ ಕುರಿತು ಪುರಸಭೆ ಸ್ವಚ್ಛತೆಗೆ ಗಮನ ಹರಿಸಬೇಕಾಗಿದೆ.
> -ಶಿವಾನಂದ ಡೋಣುರ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ ಹಾಗೂ ನಾಗೂರ ನಿವಾಸಿಗಳು.

> ಈ ರಸ್ತೆಯ ಅರ್ಧ ಭಾಗ ಕಸದಿಂದ ಕೂಡಿರುತ್ತದೆ. ಇಲ್ಲಿ ಶುಚಿತ್ವವೇ ಮಾಯವಾಗಿದೆ. ಈ ಕುರಿತು ಪುರಸಭೆ ಅಧಿಕಾರಿಗಳು ಗಮನ ಹರಿಸಬೇಕಾಗಿದೆ.
> ಎಸ್‌ಎಸ್ ಕೋಳೂರ, ನ್ಯಾಯವಾದಿ, ನಾಗೂರು ನಿವಾಸಿಗಳು.

### ತಾಲ್ಲೂಕು ಆಸ್ಪತ್ರೆಗೆ ಎನ್‌ಕ್ಯುಎಎಸ್ ಮಾನ್ಯತೆ

• ಉದಯವಾಹಿನಿ ಹೊನ್ನಾವರ

ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಸಾರ್ವಜನಿಕ ಆರೋಗ್ಯ ಸೇವೆಗಳ ಗುಣಮಟ್ಟ ಸುಧಾರಿಸುವ ನಿಟ್ಟಿನಲ್ಲಿ ರೂಪಿಸಿರುವ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡ (ಎನ್‌ಕ್ಯುಎಎಸ್) ಪ್ರಕ್ರಿಯೆಯಲ್ಲಿ ಪಟ್ಟಣದ ತಾಲ್ಲೂಕು ಸರ್ಕಾರಿ ಆಸ್ಪತ್ರೆ ಮಾನ್ಯತೆ ಪಡೆದಿದೆ ಎಂದು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ರಾಜೇಶ ಕಿಣಿ ತಿಳಿಸಿದ್ದಾರೆ. ತಜ್ಞರನ್ನು ಒಳಗೊಂಡ ತಂಡವು ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರ ಕಾರ್ಯಕ್ರಮತೆ, ಲಭ್ಯವಿರುವ ಆರೋಗ್ಯ ಸೇವೆಗಳನ್ನು ಪರಿಶೀಲಿಸಿ ಅರ್ಹತಾ ಮಾನ್ಯತೆ ನೀಡಿದರು. ಈ ಸಾಧನೆಗೆ ಆಸ್ಪತ್ರೆ ಸಿಬ್ಬಂದಿಗಳ ಶ್ರಮವಿದ್ದು, ಆಸ್ಪತ್ರೆ ರಾಷ್ಟ್ರಮಟ್ಟದ ಅರ್ಹತೆ ಗಳಿಸುವ ವಿಶ್ವಾಸವಿದೆ' ಎಂದು ವೈದ್ಯಾಧಿಕಾರಿ ತಿಳಿಸಿದರು.

### ಶಿಕ್ಷಣ ಎಲ್ಲರಿಗೂ ಸಂಜೀವಿನಿ ಇದ್ದಂತೆ

• ಉದಯವಾಹಿನಿ ಚನ್ನರಾಯಪಟ್ಟಣ

ಅಂಬೇಡ್ಕರ್ ನುಡಿದಂತೆ ಪ್ರತಿಯೊಬ್ಬರಿಗೂ ಶಿಕ್ಷಣ ಸಂಜೀವಿನಿ ಇದ್ದಂತೆ. ವಿದ್ಯಾವಂತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು. ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಅಂಬೇಡ್ಕರ್ ಜಯಂತ್ಯೋತ್ಸವದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ರಚಿಸಿದ ಸಂವಿಧಾನದಿಂದ ದೇಶವನ್ನು ಸಮರ್ಥವಾಗಿ ಮುನ್ನಡೆಸಲು ಅವಕಾಶವಾಗಿದೆ ಎಂದರು.

ಪಟ್ಟಣದಲ್ಲಿರುವ ಅಂಬೇಡ್ಕರ್ ಭವನವನ್ನು ನವೀಕರಣಗೊಳಿಸಲಾಗುವುದು. ಅದೇ ರೀತಿ ತಾಲ್ಲೂಕಿನಲ್ಲಿ 13 ಗ್ರಾಮಗಳಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲಾಗುವುದು. ಪ್ರಸಕ್ತ ಹಣಕಾಸು ವರ್ಷದಲ್ಲಿ ಇನ್ನೂ 15 ಅಂಬೇಡ್ಕರ್ ಭವ ನಿರ್ಮಾಣಕ್ಕೆ ಮಂಜೂರಾತಿ ದೊರಕಲಿದೆ. ತಾಲ್ಲೂಕು ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡುವ ಕುರಿತು ಸದ್ಯದಲ್ಲಿ ದಿನಾಂಕ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

ಸರ್ಕಾರಿ ಅಲ್ಪಸಂಖ್ಯಾತ ಮೊರಾರ್ಜಿ ದೇಸಾಯಿ ಪಿಯು ಕಾಲೇಜು ಉಪನ್ಯಾಸಕ ಎಂ.ಜಿ. ರತ್ನಾಕರ್ ಮಾತನಾಡಿ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಭಾವನೆ ಪ್ರಜಾತಂತ್ರ ವ್ಯವಸ್ಥೆಯ ಆಧಾರ ಸ್ತಂಭ ಎಂದು ತಿಳಿಸಿದರು. ತಹಶೀಲ್ದಾರ್ ಜಿ.ಎಸ್. ಶಂಕರಪ್ಪ ಮಾತನಾಡಿದರು. ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಎಂ.ಎಸ್. ಮಣಿಕಂಠ ಸೇರಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಂ.ಆರ್. ನಾಗೇಶ್ (ಕೃಷಿ), ನಂಜುಂಡಯ್ಯ (ಶಿಕ್ಷಣ), ಎಸ್. ರಾಮಕೃಷ್ಣ (ರಂಗಭೂಮಿ), ಡಿ.ಸಿ.ರವಿಚಂದ್ರ (ಸಮಾಜಸೇವೆ), ಕೃಷ್ಣಮೂರ್ತಿ (ಪೌರಕಾರ್ಮಿಕ), ಯಶೋಧ (ಅಂಗನವಾಡಿ ಕಾರ್ಯಕರ್ತೆ), ಸಿ.ಎಂ. ಶಿವಕುಮಾರ್ (ಸಮಾಜ ಸೇವೆ), ಜವರಯ್ಯ (ರಂಗಭೂಮಿ), ಇ. ಈಶ್ವರನ್ (ಶಿಕ್ಷಣ), ಎಂ.ಎಸ್ ರಾಮಕೃಷ್ಣ (ಶಿಕ್ಷಣ) ಅವರನ್ನು ಸನ್ಮಾನಿಸಲಾಯಿತು.

## ರಸ್ತೆ ಮೇಲೆಯೇ ಹರಿಯುತ್ತಿದೆ ಚರಂಡಿ ತ್ಯಾಜ್ಯ: ಮೂಲ ಸೌಲಭ್ಯ ವಂಚಿತ ಆಡಗಲ್

• ಉದಯವಾಹಿನಿ ಬಾದಾಮಿ

ತಾಲ್ಲೂಕಿನ ಆಡಗಲ್ ಗ್ರಾಮ ಮೂಲ ಸೌಲಭ್ಯಗಳಿಂದ ವಂಚಿತರಾಗಿದೆ. ಗ್ರಾಮದ 2ನೇ ವಾರ್ಡಿನ ರಸ್ತೆಯಲ್ಲೇ ಚರಂಡಿ ನೀರು ಹರಿಯುತ್ತಿದ್ದು, ಪಾದಚಾರಿಗಳಿಗೆ ಮತ್ತು ವಾಹನ ಸವಾರರಿಗೆ ತೊಂದರೆಯಾಗಿದೆ. ಸೊಳ್ಳೆಗಳ ಕಾಟದಿಂದ ಜನರ ಆರೋಗ್ಯ ಹದಗೆಡುವಂತಾಗಿದೆ.

2 ವರ್ಷದಿಂದ ಈ ಸಮಸ್ಯೆ ಐತಿ. ಮಕ್ಕಳು, ಮುದುಕರು ರಸ್ತಾದಾಗ ಅಡ್ಯಾಡಾಕ ಬರಲಾರದಂಗ ಆಗೈತಿ ಎಂದು ಗ್ರಾಮದ ನಿವಾಸಿ ಹನುಮವ್ವ ಬೇಸರ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಜೆಜೆಎಂ ಕಾಮಗಾರಿಯಲ್ಲಿ ಪ್ರತಿಯೊಂದು ಮನೆಗೆ ಶುದ್ಧ ಕುಡಿಯುವ ನೀರಿನ ನಳವನ್ನು ಜೋಡಿಸಲಾಗಿದೆ. ಆದರೆ ಮನೆಗಳಿಗೆ ನೀರು ಪೂರೈಕೆಯಾಗುತ್ತಿಲ್ಲ. ಕಳಪೆ ಕಾಮಗಾರಿಯಿಂದ ಕೆಲವು ನಳಗಳು ಕಿತ್ತಿವೆ' ಎಂದು ಗ್ರಾಮಸ್ಥರು ದೂರಿದರು. ಆಡಗಲ್ ಪಂಚಾಯಿತಿ ವ್ಯಾಪ್ತಿಯ ಬಾದಾಮಿ ರೈಲು ನಿಲ್ದಾಣ ಸಮೀಪ ಅಂಗನವಾಡಿ ಕಟ್ಟಡವು ಮೂರು ವರ್ಷಗಳ ಹಿಂದೆಯೇ ನಿರ್ಮಾಣವಾಗಬೇಕಿತ್ತು. ಆದರೆ, ಈವರೆಗೂ ಕಟ್ಟಡ ಕಾಮಗಾರಿ ಆರಂಭವಾಗಿಲ್ಲ.

ಆಡಗಲ್ ಗ್ರಾಮದಲ್ಲಿ 116 ಅಂಗವಿಕಲರಿದ್ದಾರೆ. ಅವರ ಆರೋಗ್ಯ ತಪಾಸಣೆ ಮತ್ತು ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಸರಿಯಾಗಿ ಒದಗಿಸಬೇಕು ಎಂದು ಆಗ್ರಹಿಸಿದರು.

ಅಂಗವಿಕಲರ ಆರೋಗ್ಯ ತಪಾಸಣೆ ಮಾಡಲಾಗಿದೆ. ರಕ್ತ ಸಂಬಂಧಿಕರಲ್ಲಿಯೇ ಹೆಚ್ಚಿನ ಮದುವೆ ನಡೆಯುವುದರಿಂದ ಅಂಗವಿಕಲ ಮಗು ಜನಿಸಿರಬಹುದೆಂದು ಅಂದಾಜಿಸಲಾಗಿದೆ. ಜನರಿಗೆ ತಿಳಿವಳಿಕೆ ನೀಡಲಾಗಿದೆ' ಎಂದು ತಾಲ್ಲೂಕು ಆರೋಗ್ಯ ಕೇಂದ್ರದ ಅಧಿಕಾರಿ ಡಾ. ಎಂ.ಬಿ. ಪಾಟೀಲ ಪ್ರತಿಕ್ರಿಯಿಸಿದರು.


ಉದಯವಾಹಿನಿ ಚಿತ್ರ

**ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆ**

ಅಂಗನವಾಡಿ ಕಟ್ಟಡ ನಿರ್ಮಿಸಲು ಗ್ರಾಮ ಪಂಚಾಯಿತಿಯಲ್ಲಿ ಅನುದಾನವಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅನುದಾನ ಬಂದ ಕೂಡಲೇ ಟೆಂಡರ್ ಕರೆಯಲಾಗುವುದು. ಜೆಜೆಎಂ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆ ದಾರರಿಗೆ ತಿಳಿಸಲಾಗಿದೆ. ರಸ್ತೆಯಲ್ಲಿ ನೀರು ಹರಿಯುವುದನ್ನು ತಡೆಯಲು ಕಾಮಗಾರಿ ಕೈಗೊಳ್ಳುವ ಕುರಿತು ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿಗಳ ಗಮನ ಸೆಳೆಯುವೆ ಪಿಡಿಒ ಶಿವಪ್ಪ ಕೊಂತಿಕಲ್ ಹೇಳಿದರು.

## ತತ್ವಜ್ಞಾನಿ, ಸಮಾಜ ಸುಧಾರಕ, ರಾಜನೀತಿಜ್ಞ: ವಿಶ್ವನಾಥ ಹೊಸಮನಿ

• ಉದಯವಾಹಿನಿ ಮುಂಡರಗಿ

ಬಡತನ ಹಾಗೂ ಸೌಲಭ್ಯ ವಂಚಿತ ಕುಟುಂಬದ ಹಿನ್ನೆಲೆಯಿಂದ ಬಂದ ಡಾ.ಅಂಬೇಡ್ಕರ್ ಅವರು ನಿಶ್ಚಿತ ಗುರಿಯೊಂದಿಗೆ ಅಧ್ಯಯನಶೀಲರಾಗಿ ಜಗತ್ತಿಗೆ ಮಾದರಿಯಾಗಬಲ್ಲ ಸಂವಿಧಾನ ರಚಿಸಿದರು. ಅವರು ರಚಿಸಿರುವ ಸಂವಿಧಾನವು ಇಂದು ಜಗತ್ತಿನ ಹಲವು ರಾಷ್ಟ್ರಗಳ ಸಂವಿಧಾನಗಳಿಗೆ ಪ್ರೇರಣೆಯಾಗಿದೆ ಎಂದು ತಾ.ಪಂ.ಇ.ಒ. ವಿಶ್ವನಾಥ ಹೊಸಮನಿ ತಿಳಿಸಿದರು.

ತಾಲ್ಲೂಕು ಆಡಳಿತವು ಮಂಗಳ ವಾರ ಇಲ್ಲಿಯ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಂಬೇಡ್ಕರ್ ಅವರು ನೀಡಿ ಸಮಾನತೆಯ ಕಾರಣದಿಂದ ಇಂದು ದೇಶದ ಎಲ್ಲಾ ಧರ್ಮ, ಜಾತಿ, ಮತ, ಪಂತಗಳ ಜನರು ಸಮಾನತೆಯಿಂದ ಬದುಕುವಂತಾಗಿದೆ. ಅವರ ಬದುಕು ನಮಗೆಲ್ಲ ಮಾದರಿಯಾಗಿದೆ ಎಂದು ತಿಳಿಸಿದರು.

ಡಿ.ಎಸ್.ಎಸ್. ಮುಖಂಡ ಸತೀಶ ಪಾಶಿ ಮಾತನಾಡಿ, ಅಪಾರ ಜ್ಞಾನ ಸಂಪನ್ನರಾಗಿದ್ದ ಡಾ.ಅಂಬೇಡ್ಕರ್ ಅವರು ಅಪ್ರತಿಮ ಪಂಡಿತರಾಗಿದ್ದರು. ಕೆಲವು ದೇಶಗಳಲ್ಲಿ ಅವರ ಜಯಂತಿಯನ್ನು ಜ್ಞಾನದ ಜಯಂತಿಯನ್ನಾಗಿ ಆಚರಿಸಲಾಗುತ್ತಿದೆ. ಬಡತನ ಕಲಿಸುವಷ್ಟು ಪಾಠಗಳನ್ನು ಯಾವ ವಿಶ್ವವಿದ್ಯಾಲಯಗಳು ಕಲಿಸುವುದಿಲ್ಲ ಎಂದು ತಿಳಿಸಿದರು.

ತಹಶೀಲ್ದಾರ್ ಎರ್ರಿಸ್ವಾಮಿ.ಪಿ.ಎಸ್. ಮಾತನಾಡಿ, ಮಹಾನ್ ತತ್ವಜ್ಞಾನಿಯಾಗಿದ್ದ ಅಂಬೇಡ್ಕರ್ ಅವರು ಜಗತ್ತು ಕಂಡ ಒಬ್ಬ ಮಹಾನ್ ನಾಯಕರಾಗಿದ್ದಾರೆ. ಅವರ ತತ್ವಾದರ್ಶಗಳನ್ನು ನಾವೆಲ್ಲ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಆಶಯಗಳಂತೆ ಬದುಕಬೇಕು ಎಂದು ಸಲಹೆ ನೀಡಿದರು. ಡಿ.ಎಸ್.ಎಸ್. ಮುಖಂಡ ಎಚ್.ಡಿ. ಪೂಜಾರ ಸಂವಿಧಾನದ ಪೀಠಿಕೆ ಬೋಧಿಸಿದರು. ಪ್ರತಿಭಾವಂತ


ಉದಯವಾಹಿನಿ ಚಿತ್ರ

**ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವ**

### ವಿಶ್ವಕಂಡ ಮಹಾನ್ ಸಮಾಜ ಸುಧಾರಣೆಯ ಹರಿಕಾರರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರ

**ಜಾತಿ ವಿನಾಶಕ್ಕೆ ಕರೆ ನೀಡಿದ ಸುಧಾರಕ**

ವಿಶ್ವಕಂಡ ಮಹಾನ್ ಸಮಾಜ ಸುಧಾರಣೆಯ ಹರಿಕಾರರಾದ ಡಾ.ಬಿ.ಆರ್.ಅಂಬೇಡ್ಕರ್ ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ ಎಂದು ಸರ್ವಧರ್ಮ ಸಮನ್ವಯ ಸಮಿತಿಯ ಮುಖಂಡ ಸಂತೋಷ ಹನಮಸಾಗರ ಹೇಳಿದರು. ನರೇಗಲ್ ಪಟ್ಟಣದ ಹೊಸ ಬಸ್ ನಿಲ್ದಾಣದ ಹಿಂದುಗಡೆಯ ಸರ್ಕಲ್‌ನಲ್ಲಿ ಸರ್ವಧರ್ಮ ಸಮನ್ವಯ ಸಮಿತಿ ವತಿಯಿಂದ ಆಚರಣೆ ಮಾಡಲಾದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವದಲ್ಲಿ ಮಾತನಾಡಿದರು. ಬಹಳಷ್ಟು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಿ ಸಾಮಾಜಿಕ ಸಾಮರಸ್ಯ ಹಾಗೂ ಸಮಾಜ ಸುಧಾರಣೆಗಾಗಿ ಹೋರಾಡಿದ ಮಹಾನ್ ದಾರ್ಶನಿಕರಾಗಿದ್ದಾರೆ. ಸಮಾಜದಲ್ಲಿನ ಅನಿಷ್ಠ ಜಾತಿ ಪದ್ಧತಿಯನ್ನು ತಮ್ಮ ಚಿಕ್ಕವಯಸ್ಸಿನಲ್ಲೇ ಕಂಡ ಡಾ. ಅಂಬೇಡ್ಕರ ಅವರು ಜಾತಿ ಪದ್ಧತಿ ಸಂಪೂರ್ಣ ನಿರ್ಮೂಲನೆ ಮಾಡಲು ಸಾಕಷ್ಟು ಹೋರಾಟಗಳನ್ನು ಕೈಗೊಂಡಿದ್ದಾರೆ. ದೇಶದ ಸಂವಿಧಾನ ರಚನೆಯಲ್ಲಿ ಅವರ ಪಾತ್ರ ಪ್ರಮುಖವಾಗಿದೆ ಎಂದರು.

ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಉದಯಕುಮಾರ ಎಲಿವಾಳ ಸರ್ವರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.


ಶ್ರೀಕಾಂತ ಅರಹುಣಸಿ ಕಾರ್ಯಕ್ರಮ ನಿರೂಪಿಸಿದರು. ಡಿ.ಎಸ್.ಎಸ್. ಮುಖಂಡರಾದ ಸೊಮಣ್ಣ ಹೈತಾಪುರ, ದುರುಗಪ್ಪ ವಿಠಲಾಪೂರ, ಮುಖಂಡರಾದ ರಾಮಣ್ಣ ಕೋಳಿ, ಆನಂದಗೌಡ ಪಾಟೀಲ, ನಾಗೇಶ ಹುಬ್ಬಳ್ಳಿ, ಬಸವರಾಜ ದೇಸಾಯಿ, ಚಿನ್ನಪ್ಪ ಒಡ್ಡಟ್ಟಿ, ಬಸವರಾಜ ನವಲಗುಂದ, ದ್ರುವಕುಮಾರ ಹೂಗಾರ, ಪುಷ್ಪಾ ಉಕ್ಕಲಿ ಉಪಸ್ಥಿತರಿದ್ದರು. ಸರ್ವಧರ್ಮ ಸಮನ್ವಯ ಸಮಿತಿಯ ಮುಖಂಡ ರಫೀಕ ನದಾಫ್ ಮಾತನಾಡಿದರು. ಕಾರ್ಯಕ್ರಮದ ಬಳಿಕ ಜನರಿಗೆ ಅನ್ನಸಂತರ್ಪಣೆ ನೆರವೇರಿತು. ಮುಖಂಡರಾದ ಸದ್ದಾಂ ನಶೇಖಾನ್, ಮುತ್ತಪ್ಪ ನೂಲ್ಕಿ, ಖಾದರ ಭಾಷಾ ಹೂಲಗೇರಿ, ಸಂತೋಷ ಸಾತನೂರ, ಸತೀಶ ಮಾಳವಾಡ, ರಘು ಕಟ್ಟಿಮನಿ, ಮುತ್ತಪ್ಪ ಹನಮಸಾಗರ, ನೀಲಪ್ಪ ಚಳ್ಳಮರದ ಇದ್ದರು. ಪಟ್ಟಣದ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಭಾರತರತ್ನ ಬಿ.ಆರ್.ಅಂಬೇಡ್ಕರ್ ಅವರ ದಿನಾಚರಣೆಯಲ್ಲಿ ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಪ್ರಾಂಶುಪಾಲ ಎಸ್.ಎಲ್. ಗುಳೇದಗುಡ್ಡ, ದೇಶಕ್ಕೆ ಸಮಾನತೆ ತತ್ವಬೋಧಿಸಿದ ಸಂವಿಧಾನಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರು ಮಹಾನ್ ಮಾನವತಾವಾದಿ, ಅಹಿಂಸಾ ಪ್ರತಿಪಾದಕರು. ತಮ್ಮ ಜ್ಞಾನ ಹಾಗೂ ಮಾನವೀಯತೆ ಎನ್ನುವ ಸಂಪತ್ತು ಅನ್ನು ಗಳಿಸಿ ಜಗತ್ತಿಗೆ ತೋರಿಸಿದ ಸಾಧಕರಾಗಿದ್ದಾರೆ ಎಂದರು. ಸಿಬ್ಬಂದಿ ಇದ್ದರು. ಡಾ. ಬಿ.ಆರ್.ಅಂಬೇಡ್ಕರ್ ನಗರದಲ್ಲಿರುವ 130ನೇ ಅಂಗನವಾಡಿ ಕೇಂದ್ರದಲ್ಲಿ ಆಚರಣೆ ಮಾಡಲಾದ ಜಯಂತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಅನಿತಾ ಚಳ್ಳಮರದ, ಅಲ್ಲಮ್ಮಾ ನಧಾಪ್, ಸಹಾಯಕಿ ಹುಸೇನ್‌ಬಿ ನೇಶಖಾನ, ಶಶಿಕಲಾ ಗದಗಿನಮನಿ ಇದ್ದರು.

# ಅಂತ್ಯದತ್ತ ಯುದ್ಧ ಇರಾನ್ ಮೇಲೆ ಎಲ್ಲವೂ ಅವಲಂಬನೆ

**ವಾಷಿಂಗ್ಟನ್:** ಅಮೆರಿಕ-ಇರಾನ್ ನಡುವಿನ ಯುದ್ಧ ಅಂತ್ಯಗೊಳ್ಳುವ ಹಂತಕ್ಕೆ ಬಂದಿದೆ ಎಂದು ಹೇಳಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಆದರೆ ಯುದ್ಧ ಇನ್ನೂ ಮುಗಿದಿಲ್ಲ' ಎಲ್ಲವೂ ಇರಾನ್ ಮೇಲೆ ಅವಲಂಬಿಸಿದೆ ಎಂದು ಎಚ್ಚರಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಸಮಾನಾಂತರ ರಾಜತಾಂತ್ರಿಕ ಪ್ರಯತ್ನಗಳ ಜೊತೆಗೆ ನಿರಂತರ ಉದ್ವಿಗ್ನತೆಯ ನಡುವೆ ಇರಾನ್‌ನೊಂದಿಗೆ ಎರಡನೇ ಸುತ್ತಿನ ಮಾತುಕತೆಗೆ ಅಮೆರಿಕ ಮುಂದಾಗಿದೆ. ಆದರೆ ಅಮೆರಿಕ ಇನ್ನೂ ಸೇನಾ ಕಾರ್ಯಾಚರಣೆ ಮುಗಿಸಿಲ್ಲ ಎಂದಿದ್ದಾರೆ. ಸುದ್ದಿಗಾರೊಂದಿಗೆ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಜೊತೆಗಿನ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮ ಮುಂದಿನವಾರ ಅಂತ್ಯಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಇರಾನ್ ಜೊತೆಗೆ ಎರಡನೇ ಸುತ್ತಿನ ಮಾತುಕತೆಗೆ ಅಮೆರಿಕ ಮುಂದಾಗಿದೆ. ಯುದ್ಧ ಮುಗಿಯುವ ಸಮಯ ಹತ್ತಿರಕ್ಕೆ ಬಂದಿದೆ. ಆದರೆ ಅದು ಇರಾನ್ ನಡೆಯ ಮೇಲೆ ಅವಲಂಬಿತವಾಗಿದೆ ಎಂದು ತಿಳಿಸಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆಯಲ್ಲಿ ಉಭಯ ದೇಶಗಳ ನಡುವೆ ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಇರಾನಿನ ಬಂದರುಗಳನ್ನು ಗುರಿಯಾಗಿಸಿ ದಾಳಿ ಮಾಡುವುದಾಗಿ ಅಮೆರಿಕ ಬೆದರಿಕೆ ಹಾಕಿತ್ತು, ಇದಕ್ಕೆ ಮಣಿದ ಇರಾನ್ ಎರಡನೇ ಸುತ್ತಿನ ಮಾತುಕತೆಗೆ ಮುಂದಾಗಿದೆ ಎಂದಿದ್ದಾರೆ.



ಜಗತ್ತಿನ ಪ್ರಮುಖ ಕಚ್ಚಾತೈಲ ಪೂರೈಕೆ ಮಾರ್ಗವಾದ ಹೊರ್ಮುಜ್ ಜಲಸಂಧಿಯಲ್ಲಿ ನಡೆಯುತ್ತಿರುವ ಅಮೆರಿಕ ನೌಕಾ ದಿಗ್ಬಂಧನದ ಮಧ್ಯೆ ಈ ಹೇಳಿಕೆಗಳು ಬಂದಿವೆ. ಸಾವಿರಾರು ಅಮೆರಿಕನ್ ಸಿಬ್ಬಂದಿ ಮತ್ತು ಬಹು ಯುದ್ಧನೌಕೆಗಳಿಂದ ಜಾರಿಗೊಳಿಸಲಾದ ದಿಗ್ಬಂಧನ ಈಗಾಗಲೇ ಹಲವಾರು ಹಡಗುಗಳನ್ನು ಇರಾನಿನ ಜಲಪ್ರದೇಶದಿಂದ ಹಿಂತಿರುಗುವಂತೆ ಮಾಡಿದೆ ಎಂದು ತಿಳಿಸಿದ್ದಾರೆ. ಇರಾನ್‌ನೊಂದಿಗೆ ಯುದ್ಧ ಮುಗಿಯುವ ಹಂತಕ್ಕೆ ಬಂದಿದೆ ಆದರೆ ಇನ್ನೂ ಮುಗಿದಿಲ್ಲ, ಈ ಬಗ್ಗೆ ಮಾತುಕತೆಗಳು ನಡೆಯಲಿವೆ. ಇದರಿಂದ ಇರಾನ್ ನಡೆಯ ಮೇಲೆ ಎಲ್ಲವೂ ಅವಲಂಬಿತವಾಗಿದೆ ಎಂದಿದ್ದಾರೆ. ಇರಾನ್ ಮೇಲೆ ಅಮೆರಿಕ ದಾಳಿ ನಡೆಸಿದ ಹಲವು ಮೂಲಸೌಕರ್ಯ ನಾಶ ಮಾಡಿದ್ದೇವೆ, ಇದನ್ನು ಪುನರ್ನಿರ್ಮಿಸಲು ಇರಾನ್‌ಗೆ ಇನ್ನೂ 20 ವರ್ಷಗಳು ಬೇಕಾಗಬಹುದು ಎಂದು ತಿಳಿಸಿದ್ದಾರೆ.

**ಇನ್ನೆರಡು ದಿನದಲ್ಲಿ ಇರಾನ್-ಅಮೆರಿಕ ಮಾತುಕತೆ:** ಅಮೆರಿಕ-ಇರಾನ್ ನಡುವೆ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ವಿಫಲವಾದ ನಂತರ ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಇನ್ನೆರಡು ದಿನದಲ್ಲಿ ಇಸ್ಲಾಮಾಬಾದ್‌ನಲ್ಲಿ ಮಾತುಕತೆ ನಡೆಯುವ ಸಾಧ್ಯತೆ ಇದೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಳಿವು ನೀಡಿದ್ದಾರೆ.

ಇರಾನ್‌ನ ಎಲ್ಲಾ ಬಂದರುಗಳಿಗೆ ಅಮೆರಿಕ ದಿಗ್ಬಂಧನ ಹಾಕುವುದಾಗಿ ಬೆದರಿಕೆ ಹಾಕಿದ ನಡುವೆ ಇರಾನ್ ಅಮೆರಿಕ ಜೊತೆ ಮಾತುಕತೆ ಮುಂದಾಗಿದ್ದು ಈ ವಾರದಲ್ಲಿ ಮತ್ತೆ ಮಾತುಕತೆ ಪುನರ್ ಆರಂಭವಾಗಬಹುದು ಎಂದು ಮಾಹಿತಿ ನೀಡಿದ್ದಾರೆ.

## 2027ರ ಅರ್ಧ ಕುಂಭಮೇಳದ ವೇಳಾಪಟ್ಟಿ ಪ್ರಕಟ



**ಹರಿದ್ವಾರ:** ಬರುವ 2027 ರಲ್ಲಿ ಉತ್ತರಾಖಂಡದ ಹರಿದ್ವಾರದಲ್ಲಿ ನಡೆಯಲಿರುವ ಅರ್ಧ ಕುಂಭ ಮೇಳವು ಮೂರು ಅಮೃತ ಸ್ನಾನಗಳು ಸೇರಿದಂತೆ ಒಟ್ಟು 10 ಪ್ರಮುಖ ಸ್ನಾನ ಉತ್ಸವಗಳನ್ನು ಒಳಗೊಂಡಿರುತ್ತದೆ ಎಂದು ಮೇಳ ಆಡಳಿತ ಮಂಡಳಿ ಪ್ರಕಟಿಸಿದೆ.

ಅರ್ಧ ಕುಂಭ ಸ್ನಾನದ ದಿನಾಂಕಗಳನ್ನು ಘೋಷಿಸುವಾಗ, ಮೇಳದ ಅಧಿಕಾರಿ ಸೋನಿಕಾ ಸಿಂಗ್ ಇದು ನಾಲ್ಕು ತಿಂಗಳ ಅವಧಿಯ ಮೇಳವಾಗಿರುತ್ತದೆ ಜನವರಿಯಿಂದ ಏಪ್ರಿಲ್ 2027 ರವರೆಗೆ. ಮೊದಲ ಸ್ನಾನ ಆಚರಣೆ ಜನವರಿ 14 (ಮಕರ ಸಂಕ್ರಾಂತಿ); ಎರಡನೆಯದು ಫೆಬ್ರವರಿ 6 (ಮೌನಿ ಅಮಾವಾಸ್ಯೆ); ಮೂರನೆಯದು ಫೆಬ್ರವರಿ 11 (ಬಸಂತ್ ಪಂಚಮಿ); ನಾಲ್ಕನೆಯದು ಫೆಬ್ರವರಿ 20 (ಮಾಘ ಪೂರ್ಣಿಮೆ); ಮತ್ತು ಐದನೆಯದು ಮಾರ್ಚ್ 6 (ಮಹಾಶಿವರಾತ್ರಿ) ರಂದು ನಡೆಯಲಿದೆ ಎಂದು ಸಿಂಗ್ ಹೇಳಿದರು.

ಅರ್ಧ ಕುಂಭದ ಆರನೇ ಸ್ನಾನ ಆಚರಣೆ ಮಾರ್ಚ್ 8 ರಂದು ಫಾಲ್ಗುಣ ಅಮಾವಾಸ್ಯೆ ಸಂದರ್ಭದಲ್ಲಿ ನಡೆಯಲಿದೆ ಎಂದು ಸಿಂಗ್ ಹೇಳಿದರು. ಏಳನೇ ಸ್ನಾನ ಏಪ್ರಿಲ್ 7 ರಂದು (ನವ ಸಂವತ್ಸರ); ಎಂಟನೇ ಸ್ನಾನ ಏಪ್ರಿಲ್ 14 ರಂದು (ಮೇಷ ಸಂಕ್ರಾಂತಿ) ಮತ್ತು ಒಂಬತ್ತನೇ ಸ್ನಾನ ಏಪ್ರಿಲ್ 15 ರಂದು ನಡೆಯಲಿದೆ. ಅರ್ಧ ಕುಂಭ ಮೇಳವು ಏಪ್ರಿಲ್ 20 ರಂದು ಚೈತ್ರ ಪೂರ್ಣಿಮೆಯ ಸಂದರ್ಭದಲ್ಲಿ ಅಂತಿಮ ಸ್ನಾನ ಆಚರಣೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.

ಈ ದಿನಾಂಕಗಳಲ್ಲಿ, ಮಾರ್ಚ್ 6 (ಮಹಾಶಿವರಾತ್ರಿ), ಮಾ. 8 (ಫಾಲ್ಗುಣ ಅಮಾವಾಸ್ಯೆ) ಮತ್ತು ಏಪ್ರಿಲ್ 14 (ಮೇಷ ಸಂಕ್ರಾಂತಿ) ಗಳಿಗೆ ನಿಗದಿಪಡಿಸಲಾದ ಸ್ನಾನಗಳನ್ನು ಅಮೃತ ಸ್ನಾನ ಎಂದು ಗೊತ್ತುಪಡಿಸಲಾಗುತ್ತದೆ ಎಂದು ಸಿಂಗ್ ಗಮನಿಸಿದರು.

### 1993ರ ಬಳಿಕ ಉಭಯದೇಶಗಳ ನಡುವೆ ನಡೆಯುತ್ತಿರುವ ಮೊದಲ ನೇರ ರಾಜತಾಂತ್ರಿಕ ಮಾತುಕತೆ

# ಫಸ್ಟ್ ಟೈಂ ಇಸ್ರೇಲ್-ಲೆಬನಾನ್ ನಡುವೆ ನೇರ ಮಾತುಕತೆ

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ಮಧ್ಯೆ ಇಸ್ರೇಲ್ ಹಾಗೂ ಹೆಜ್ಬೊಲ್ಲಾ ಉಗ್ರಗಾಮಿ ಗುಂಪಿನ ನಡುವಿನ ನಿರಂತರ ಉದ್ವಿಗ್ನತೆಯ ನಡುವೆ ಇಸ್ರೇಲ್ ಹಾಗೂ ಲೆಬನಾನ್ ಉಭಯದೇಶಗಳು ದಶಕಗಳ ನಂತರ ಇದೇ ಮೊದಲ ಬಾರಿಗೆ ತಮ್ಮ ಮೊದಲ ನೇರ ರಾಜತಾಂತ್ರಿಕ ಮಾತುಕತೆಗಳನ್ನು ವಾಷಿಂಗ್ಟನ್ ಡಿಸಿಯಲ್ಲಿ ನಡೆಸಿದ್ದಾರೆ. ಅಮೆರಿಕಾ ಮಧ್ಯಸ್ಥಿಕೆಯಲ್ಲಿ ಸುಮಾರು ದಶಕಗಳ ಬಳಿಕ ಇಸ್ರೇಲ್ ಹಾಗೂ ಲೆಬನಾನ್ ನಡುವೆ ಅಮೆರಿಕಾದ ವಿದೇಶಾಂಗ ಇಲಾಖೆಯ ಕಚೇರಿಯಲ್ಲಿ ನಡೆಯುತ್ತಿರುವ ಮಾತುಕತೆಗಳಿಗೆ ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ನೇತೃತ್ವ ವಹಿಸಿದ್ದು, ಈ ಮಾತುಕತೆಯಲ್ಲಿ ಇಸ್ರೇಲಿ ರಾಯಭಾರಿ ಯೆಚಿಯಲ್ ಲೀಟರ್ ಮತ್ತು ಲೆಬನಾನ್ ರಾಯಭಾರಿ ನಾಡಾ ಹಮಾದೆ ಮೊವಾದ್ ನಿಯೋಗ ಭಾಗಿಯಾಗಿದ್ದರು. ಈ ಮಾತುಕತೆಗಳನ್ನು ಮಾರ್ಕೊ ರುಬಿಯೊ ಐತಿಹಾಸಿಕ ಅವಕಾಶ ಎಂದು ಕರೆದಿದ್ದಾಗ್ಯೂ, ಒಪ್ಪಂದವನ್ನು ತಕ್ಷಣವೇ ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**ಮಾತುಕತೆ ಬಗ್ಗೆ ಮಾರ್ಕೊ ರುಬಿಯೊ ಹೇಳಿದ್ದಿಷ್ಟು:** ಮಾತುಕತೆಗಾಗಿ ಆಗಮಿಸಿದ ಉಭಯದೇಶಗಳ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡಿದ ಮಾರ್ಕೊ ರುಬಿಯೊ ಇದು ಒಂದು ಐತಿಹಾಸಿಕ ಅವಕಾಶವಾಗಿದ್ದು, ದಶಕಗಳ ಇತಿಹಾಸ ಹಾಗೂ ಈ ವಿಶಿಷ್ಟ ಕ್ಷಣ ಮತ್ತು ಇಲ್ಲಿನ ಅವಕಾಶಕ್ಕೆ ನಮ್ಮನ್ನು ಕರೆದೊಯ್ಯುವ ಸಂಕೀರ್ಣತೆಗಳ ವಿರುದ್ಧ ಕೆಲಸ ಮಾಡುತ್ತಿದ್ದೇವೆ ಎಂಬುದು ನಮ್ಮ ಗಮನದಲ್ಲಿದೆ. ಆದಾಗ್ಯೂ, ಇಂದಿನ ಮಾತುಕತೆಗಳಲ್ಲಿ ನಾವು ಶಾಶ್ವತವಾದ ಹಾಗೂ ಬಹಳ ಸಕಾರಾತ್ಮಕವಾದ ಒಂದು ಚೌಕಟ್ಟನ್ನು ರೂಪಿಸುವ ಮೂಲಕ ಒಂದು ಒಪ್ಪಂದಕ್ಕೆ ಬರಲು ನಾವು ಪ್ರಯತ್ನಿಸಬಹುದು, ಇದರಿಂದ ಲೆಬನಾನ್ ಜನರು ಅರ್ಹವಾದ ಭವಿಷ್ಯವನ್ನು ಹೊಂದಬಹುದು ಮತ್ತು ಇಸ್ರೇಲ್ ಜನರು ಭಯವಿಲ್ಲದೆ ಬದುಕಬಹುದು ಎಂದು ತಿಳಿಸಿದ್ದಾರೆ. ಇದಕ್ಕೂ ಮೊದಲು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಈ ಮಾತುಕತೆಗಳ ಕುರಿತು ಸಕರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದು, ವಾಷಿಂಗ್ಟನ್‌ನಲ್ಲಿ ನಡೆಯುವ ಸಭೆಯು ಸಾಮಾನ್ಯವಾಗಿ ಲೆಬನಾನಿನ ಜನರು ಮತ್ತು ನಿರ್ದಿಷ್ಟವಾಗಿ ದಕ್ಷಿಣ ಪ್ರಾಂತ್ಯದಲ್ಲಿರುವ ದುಃಖಕ್ಕೆ ಅಂತ್ಯಹಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ ಎಂದು ಭಾವಿಸುತ್ತೇನೆ. ಅಲ್ಲದೆ, ಇಸ್ರೇಲ್ ನಮ್ಮ ಭೂಮಿಯನ್ನು ಆಕ್ರಮಿಸಿಕೊಳ್ಳುವುದನ್ನು ಮುಂದುವರೆಸಿದರೆ ದಕ್ಷಿಣಕ್ಕೆ ಸ್ಥಿರತೆ ಮರಳುವುದಿಲ್ಲ, ಬದಲಾಗಿ ಲೆಬನಾನಿನ ಸೈನ್ಯವನ್ನು ಅಂತಾರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಗಡಿಗೆ ಮರು ನಿಯೋಜಿಸುವುದು ಮತ್ತು ಆ ಪ್ರದೇಶದ ಭದ್ರತೆಗೆ ಮಾತ್ರ ಜವಾಬ್ದಾರರಾಗಿರುವುದು ಎಂದು ತಿಳಿಸಿದ್ದರು.

### ಮಾತುಕತೆಗೆ ಹೆಜ್ಬೊಲ್ಲಾ ವಿರೋಧ

**ಆದಾಗ್ಯೂ, ಇಸ್ರೇಲ್ ಹಾಗೂ ಲೆಬನಾನ್ ಮಾತುಕತೆಗಳನ್ನು ಹೆಜ್ಬೊಲ್ಲಾ ಪಡೆಗಳು ನಿರಂತರವಾಗಿ ವಿರೋಧಿಸುತ್ತಿದ್ದು, ಲೆಬನಾನ್ ಸರ್ಕಾರಕ್ಕೆ ಹತೋಟಿ ಕೊರತೆಯಿದೆ ಮತ್ತು ಅದು ಇರಾನ್‌ನ ಸ್ಥಾನವನ್ನು ಬೆಂಬಲಿಸಬೇಕು ಎಂದು ಪ್ರತಿಪಾದಿಸಿದ್ದು, ಈ ಪಡೆಯ ಉನ್ನತ ಸದಸ್ಯ ವಾಫಿಕ್ ಸಫಾ, ಮಾತುಕತೆಯ ಸಮಯದಲ್ಲಿ ಮಾಡಿಕೊಳ್ಳುವ ಯಾವುದೇ ಒಪ್ಪಂದಗಳಿಗೆ ಬದ್ಧವಾಗಿರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇದಕ್ಕೆ ಪೂರಕವೆಂಬಂತೆ ಮಾತುಕತೆಗಳು ನಡೆಯುತ್ತಿರುವಂತೆ ಉತ್ತರ ಇಸ್ರೇಲಿನ 13 ಪಟ್ಟಣಗಳನ್ನು ಗುರಿಯಾಗಿಸಿ ದಾಳಿ ನಡೆಸಿರುವುದಾಗಿ ಹೇಳಿಕೊಂಡಿದೆ.**



### 1993ರ ಬಳಿಕ ನಡೆಯುತ್ತಿರುವ ಮೊದಲ ನೇರ ಮಾತುಕತೆ

**ಇಸ್ರೇಲ್ ಹಾಗೂ ಲೆಬನಾನ್ ನಲ್ಲಿರುವ ಹೆಜ್ಬೊಲ್ಲಾ ಪಡೆಗಳ ನಡುವಿನ ದಶಕಗಳ ನಿರಂತರ ಸಂಘರ್ಷದ ಮಧ್ಯೆ 1993ರ ಬಳಿಕ ಉಭಯದೇಶಗಳ ನಡುವೆ ನಡೆಯುತ್ತಿರುವ ಮೊದಲ ನೇರ ರಾಜತಾಂತ್ರಿಕ ಮಾತುಕತೆ ಇದಾಗಿದೆ. ಇದಕ್ಕೂ ಮೊದಲು ಉಭಯ ದೇಶಗಳು ಹಲವು ಸಂದರ್ಭಗಳಲ್ಲಿ ಮಾತುಕತೆ ನಡೆಸಿದಾಗ್ಯೂ, ಪರೋಕ್ಷವಾಗಿದ್ದು, ಯುಎಸ್ ಅಥವಾ ದಕ್ಷಿಣ ಲೆಬನಾನ್‌ನಲ್ಲಿರುವ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆಯಾದ UNIFIL ಮಧ್ಯವರ್ತಿಯಾಗಿ ನಡೆಯುತ್ತಿದ್ದವು. ಆದರೆ, ಇದೀಗ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ತಾರಕಕ್ಕೇರುತ್ತಿರುವ ನಡುವೆ ಈ ಮಾತುಕತೆಗಳು ಶಾಂತಿಯ ಮೊದಲ ಹೆಜ್ಜೆಯಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.**

**ಯುಎಸ್ ವಿದೇಶಾಂಗ ಕಾರ್ಯದರ್ಶಿ ನೇತೃತ್ವ**

- ಮಧ್ಯಪ್ರಾಚ್ಯದಲ್ಲಿ ಸಂಘರ್ಷದ ನಡುವೆ ದಶಕಗಳ ಬಳಿಕ ಅಮೆರಿಕಾದಲ್ಲಿ ಇಸ್ರೇಲ್-ಲೆಬನಾನ್ ನಡುವೆ ಮೊದಲ ನೇರ ಮಾತುಕತೆ
- ಇಸ್ರೇಲ್-ಲೆಬನಾನ್ ಸರ್ಕಾರದ ನಡುವಿನ ಮಾತುಕತೆಗಳಿಗೆ ಹೆಜ್ಬೊಲ್ಲಾ ವಿರೋಧ, ಹೇಳಿದ್ದೇನು?
- 1993ರ ಬಳಿಕ ಉಭಯ ದೇಶಗಳ ನಡುವೆ ನಡೆಯುತ್ತಿರುವ ಮೊದಲ ನೇರ ರಾಜತಾಂತ್ರಿಕ ಮಾತುಕತೆ

# ಬಾಂಗ್ಲಾದಿಂದ ಮಲೇಷ್ಯಾಗೆ ರೋಹಿಂಗ್ಯಾ ನಿರಾಶ್ರಿತರನ್ನು ಸಾಗಿಸುತ್ತಿದ್ದ ಬೋಟ್ ಅಂಡಮಾನ್‌ನಲ್ಲಿ ಮುಳುಗಡೆ: 250 ಮಂದಿ ನಾಪತ್ತೆ

**ಅಂಡಮಾನ್:** ಬಾಂಗ್ಲಾದೇಶದ ದಕ್ಷಿಣದಲ್ಲಿರುವ ಟೆಕ್ನಾಫ್ ಪ್ರಾಂತ್ಯದಿಂದ ಮಲೇಷ್ಯಾದತ್ತ ರೋಹಿಂಗ್ಯಾ ನಿರಾಶ್ರಿತರು ಹಾಗೂ ಬಾಂಗ್ಲಾದೇಶದ ಪ್ರಜೆಗಳನ್ನು ಹೊತ್ತೊಯ್ಯುತ್ತಿದ್ದ ಹಡಗು ಅಂಡಮಾನ್ ಸಮುದ್ರದಲ್ಲಿ ಮುಳುಗಿದ್ದು, ಸುಮಾರು 250 ಜನರು ಕಾಣೆಯಾಗಿರುವ ಘಟನೆ ನಡೆದಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ಈ ಘಟನೆ ಕುರಿತು ವಿಶ್ವಸಂಸ್ಥೆಯ ನಿರಾಶ್ರಿತರ ಹೈಕಮೀಷನ್ ಅಧಿಕೃತ ಹೇಳಿಕೆ ಬಿಡುಗಡೆ ಮಾಡುವ ಮೂಲಕ ಮಾಹಿತಿ ನೀಡಿದೆ. ಇದರ ಪ್ರಕಾರ, ದಕ್ಷಿಣ ಬಾಂಗ್ಲಾ ಪ್ರದೇಶದಿಂದ ಮಲೇಷ್ಯಾದತ್ತ ಸಾಗುತ್ತಿದ್ದ ಹಡುಗು ಮುಳುಗಿದ್ದು, ಇದರಲ್ಲಿದ್ದ ಸುಮಾರು 250 ನಿರಾಶ್ರಿತರು ಕಾಣೆಯಾಗಿದ್ದಾರೆ ಎಂದು ತಿಳಿಸಿದೆ.

ಈ ಕುರಿತು UNHCR ಹೇಳಿಕೆ ನೀಡಿದ್ದು ದಕ್ಷಿಣ ಬಾಂಗ್ಲಾದೇಶದ ಟೆಕ್ನಾಫ್‌ನಿಂದ ಹೊರಟು ಮಲೇಷ್ಯಾಕ್ಕೆ ತೆರಳುತ್ತಿದ್ದ ಟ್ರಾಲರ್ ಮಾರ್ಗದಲ್ಲಿನ ಭಾರೀ ಗಾಳಿ, ಒರಟಾದ ಸಮುದ್ರ ಮತ್ತು ಬೋಟ್ ನಲ್ಲಿ ಜನದಟ್ಟಣೆಯಿಂದಾಗಿ ಮುಳುಗಿದೆ ಎಂದು ವರದಿಯಾಗಿದೆ. ಇನ್ನು, ಇದರಲ್ಲಿ ಮಕ್ಕಳು, ಮಹಿಳೆಯರು ಹಾಗೂ ಪುರುಷರು ಒಳಗೊಂಡಿದ್ದಾರೆ ಎಂದು ತಿಳಿಸಿದೆ.



ಇನ್ನು, ಪ್ರಾಥಮಿಕ ಮಾಹಿತಿ ಪ್ರಕಾರ, ಮ್ಯಾನ್ಮಾರ್‌ನ ಪಶ್ಚಿಮ ರಾಜ್ಯವಾದ ರಾಖೈನ್‌ನಿಂದ ಪಲಾಯನ ಮಾಡಬೇಕಾದ ಒಂದು ದಶಲಕ್ಷಕ್ಕೂ ಹೆಚ್ಚು ನಿರಾಶ್ರಿತರು ವಾಸಿಸುತ್ತಿದ್ದು, ಈ ದೋಣಿಯಲ್ಲಿದ್ದ ರೋಹಿಂಗ್ಯಾಗಳು ಬಾಂಗ್ಲಾದೇಶದ ಕಾಕ್ಸ್ ಬಜಾರ್‌ನಲ್ಲಿರುವ ಬೃಹತ್ ಶಿಬಿರಗಳನ್ನು ತೊರೆದಿದ್ದು, ಈ ದೋಣಿಯಲ್ಲಿ ಸುಮಾರು 280 ಜನರನ್ನು ಹೊತ್ತು ಏ. 4 ರಂದು ಬಾಂಗ್ಲಾದೇಶವನ್ನು ತೊರೆದಿತ್ತು. ಇನ್ನು, ಮ್ಯಾನ್ಮರ್ ನಲ್ಲಿ 2017ರಲ್ಲಿ ಮಿಲಿಟರಿ ಕಾರ್ಯಾಚರಣೆಯಿಂದಾಗಿ ಬರೋಬ್ಬರಿ 73000 ರೋಹಿಂಗ್ಯಾಗಳು ತಮ್ಮ ದೇಶವನ್ನು ಬಿಟ್ಟು ತೊರೆಯುವಂತೆ ಮಾಡಿದಾಗಿನಿಂದ ನಿರಾಶ್ರಿತರ ಸಮಸ್ಯೆ ಉಲ್ಬಣಗೊಂಡಿದೆ.

ಈ ನಿಟ್ಟಿನಲ್ಲಿ ಬಾಂಗ್ಲಾದೇಶದಲ್ಲಿ ರೋಹಿಂಗ್ಯಾ ನಿರಾಶ್ರಿತರಿಗೆ ಮಾನವೀಯ ನೆರವು ಹಾಗೂ ಆರ್ಥಿಕ ಬೆಂಬಲ ನೀಡಲು ಸಹಕರಿಸುವಂತೆ ಅಂತಾರಾಷ್ಟ್ರೀಯ ಸಮುದಾಯಕ್ಕೆ ವಿಶ್ವಸಂಸ್ಥೆ ಒತ್ತಾಯಿಸಿದೆ.

**ರೋಹಿಂಗ್ಯಾ ನಿರಾಶ್ರಿತರ ಸಮಸ್ಯೆ ಉಲ್ಬಣ:** ರೋಹಿಂಗ್ಯಾಗಳು ಮ್ಯಾನ್ಮಾರ್‌ನಲ್ಲಿ ಶೋಷಣೆಗೊಳಗುತ್ತಿರುವ ಮುಸ್ಲಿಂ ಮೈನಾರಿಟಿ ಸಮುದಾಯವಾಗಿದ್ದು, ಅಲ್ಲಿನ ನಾಗರಿಕರ ದಂಗೆಯಿಂದಾಗುವ ಹಿಂಸಾಚಾರಗಳಿಂದ ತಪ್ಪಿಸಿಕೊಂಡು ಉತ್ತಮ ಜೀವನದ ಕನಸಿನೊಂದಿಗೆ ಪ್ರತಿವರ್ಷವೂ ಈ ಮಾರ್ಗದ ಮೂಲಕ ಸಾವಿರಾರು ಸಂಖ್ಯೆಯಲ್ಲಿ ರೋಹಿಂಗ್ಯಾಗಳ ಬೇರೆ ದೇಶಗಳಿಗೆ ವಲಸೆ ಹೋಗಲು ಪ್ರಯತ್ನಿಸುತ್ತಾರೆ.

ಇದಕ್ಕೂ ಮೊದಲು ನಡೆದ ಪ್ರತ್ಯೇಕ ಘಟನೆಯಲ್ಲಿ ಬಾಂಗ್ಲಾದೇಶದ ಧ್ವಜಹೊಂದಿರುವ ಮೇಗನ್ ಪ್ರೈಡ್ ಎಂಬ ದೋಣಿಯಲ್ಲಿ ಸಾಗುತ್ತಿದ್ದ ರೋಹಿಂಗ್ಯಾಗಳು ಅಂಡಮಾನ್ ದ್ವೀಪದ ಹತ್ತಿರದಲ್ಲಿನ ಆಳವಾದ ಸಮುದ್ರದಲ್ಲಿ ಮುಳುಗುತ್ತಿರುವುದು ಪತ್ತೆಯಾಗಿದ್ದು ಅವರನ್ನು ರಕ್ಷಿಸಲಾಗಿದೆ ಎಂದು ಬಂದರು ಪ್ರಾಧಿಕಾರದ ವಕ್ತಾರರು ತಿಳಿಸಿದ್ದರು.

# ಬಿಹಾರ ಸಿಎಂ ಆಗಿ ಸಾಮ್ರಾಟ್ ಪ್ರಮಾಣ ವಚನ

**ಪಾಟ್ನಾ:** ಬಿಹಾರದಲ್ಲಿ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಪ್ರಮಾಣ ಸ್ವೀಕರಿಸುವ ಮೂಲಕ ಬಿಜೆಪಿಯ ಹೊಸ ಪರ್ವ ಆರಂಭವಾಗಿದೆ. ಇದೇ ವೇಳೆ ಜೆಡಿಯು ಶಾಸಕರಾದ ವಿಜಯ್ ಕುಮಾರ್ ಚೌಧರಿ ಮತ್ತು ಬಿಜೇಂದ್ರ ಪ್ರಸಾದ್ ಯಾದವ್ ಉಪ ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು.

ಲೋಕಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಬಿಹಾರದ 21 ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು, ರಾಜ್ಯಪಾಲ ಸೈಯದ್ ಅತಾ ಹಸ್ನೈನ್ ಅವರು ಅಧಿಕಾರ ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಕಳೆದ 21 ವರ್ಷದಿಂದ ಮುಖ್ಯಮಂತ್ರಿಯಾಗಿದ್ದ ನಿತೀಶ್ ಕುಮಾರ್ ಅವರು ರಾಜ್ಯಸಭೆಗೆ ಆಯ್ಕೆಯಾದ ಹಿನ್ನೆಲೆಯಲ್ಲಿ ನಿನ್ನೆಯಷ್ಟೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು., ಇದರ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರನ್ನು ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡಲಾಗಿತ್ತು, ಲೋಕಭವನದಲ್ಲಿ ಬಿಹಾರದ ಮೊದಲ ಬಿಜೆಪಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಭಾಷ್ಯ ಬರೆದಿದ್ದಾರೆ. ಸಾಮ್ರಾಟ್ ಚೌಧರಿ ಪ್ರಮಾಣವಚನದೊಂದಿಗೆ, ಬಿಜೆಪಿ



ಪ್ರಸ್ತುತ ದೇಶದಲ್ಲಿ 16 ಮುಖ್ಯಮಂತ್ರಿಗಳನ್ನು ಹೊಂದಿದೆ ಮತ್ತು ಇದುವರೆಗೆ ತನ್ನ ಸರ್ಕಾರ ಹೊಂದಿರುವ 19 ನೇ ರಾಜ್ಯ ಮತ್ತು ಕೇಸರಿ ಪಕ್ಷದ ಇತಿಹಾಸದಲ್ಲಿ 57 ನೇ ಮುಖ್ಯಮಂತ್ರಿ ಹೊಂದಿದ ಇತಿಹಾಸ ನಿರ್ಮಾಣ ಮಾಡಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಛತ್ತೀಸ್ ಗಢ, ರಾಜಸ್ಥಾನ, ಉತ್ತರಾಖಂಡ, ಹರಿಯಾಣ ಮತ್ತು ದೆಹಲಿ ಸೇರಿದಂತೆ ಪ್ರಮುಖ ಹಿಂದಿ ಹೃದಯಭೂಮಿ ರಾಜ್ಯಗಳನ್ನು ಬಿಜೆಪಿ ಈಗಾಗಲೇ ಆಳುತ್ತಿದೆ, ಬಿಹಾರ ಬಹಳ ಹಿಂದಿನಿಂದಲೂ ಗಮನಾರ್ಹ ಅಪವಾದವಾಗಿ ಉಳಿದಿದೆ, ಈಗ ಬಿಹಾರವೂ ಬಿಜೆಪಿ ತೆಕ್ಕೆಗೆ ಬಂದಿದೆ.ಈ ಹಿಂದೆ ಉಪಮುಖ್ಯಮಂತ್ರಿಯಾಗಿದ್ದ ಚೌಧರಿ ಅವರನ್ನು ರಾಜ್ಯಸಭಾ ಸದಸ್ಯರಾಗಿರುವ ನಿತೀಶ್ ಕುಮಾರ್ ಅವರ ಸಮ್ಮುಖದಲ್ಲಿ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರನ್ನಾಗಿ ನೇಮಿಸಲಾಯಿತು.

# 180 ಅಪ್ರಾಪ್ತೆಯರಿಗೆ ಲೈಂಗಿಕ ಕಿರುಕುಳ ನೀಡಿದ್ದ ಕಾಮುಕ ಮೊಹಮ್ಮದ್ ಬಂಧನ

**ಮುಂಬೈ:** ಬರೊಬ್ಬರಿ 180 ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ 350 ಕ್ಕೂ ಹೆಚ್ಚು ಅಶ್ಲೀಲ ವೀಡಿಯೊಗಳನ್ನು ರೆಕಾರ್ಡ್ ಮಾಡಿಟ್ಟುಕೊಂಡಿದೆ ಕಾಮುಕನನ್ನು ಮಹಾರಾಷ್ಟ್ರದ ಅಮರಾವತಿಯಲ್ಲಿ ಬಂಧಿಸಲಾಗಿದೆ. ಪರತ್ವಾಡ ನಗರದ ನಿವಾಸಿ ಮೊಹಮ್ಮದ್ ಅಯಾಜ್ ಅಲಿಯಾಸ್ ತನ್ವೀರ್ ಎಂಬಾತ ಹುಡುಗಿಯರನ್ನು ಪ್ರೀತಿಯ ಬಲೆಗೆ ಬೀಳಿಸಿ, ಮುಂಬೈ ಮತ್ತು ಪುಣೆಗೆ ಕರೆದೊಯ್ದು ಅವರ ಅಶ್ಲೀಲ ವಿಡಿಯೋಗಳನ್ನು ಚಿತ್ರೀಕರಿಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಹುಡುಗಿಯರನ್ನು ಬ್ಲ್ಯಾಕ್‌ಮೇಲ್ ಮಾಡಲು ಮತ್ತು ವೇಶ್ಯಾವಾಟಿಕೆಗೆ ಒತ್ತಾಯಿಸಲು ಈ ವಿಡಿಯೋಗಳನ್ನು ಬಳಸಲಾಗುತ್ತಿತ್ತು ಎಂದು ಆರೋಪಿಸಲಾಗಿದೆ. ಕೆಲವನ್ನು ಆನ್‌ಲೈನ್‌ನಲ್ಲಿಯೂ ವ್ಯಾಪಕವಾಗಿ ಹಂಚಿಕೊಳ್ಳಲಾಗಿದೆ. ರಾಜ್ಯಸಭಾ ಸಂಸದ ಅನಿಲ್ ಬೋಂಡೆ ಅವರು ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮೀಣ) ವಿಶಾಲ್ ಆನಂದ್ ಅವರಿಗೆ ಸಲ್ಲಿಸಿದ ಜ್ಞಾಪಕ ಪತ್ರದ ಪ್ರಕಾರ, ಅಪ್ರಾಪ್ತ ವಯಸ್ಕರನ್ನು ವಾಟ್ಸಾಪ್ ಮತ್ತು ಸ್ನ್ಯಾಪ್‌ಚಾಟ್ ಗ್ರೂಪ್‌ಗಳ ಮೂಲಕ ವ್ಯವಸ್ಥಿತವಾಗಿ ಟಾರ್ಗೆಟ್ ಮಾಡಲಾಗುತಿದ್ದು, ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸದಿದ್ದರೆ ಎಸ್‌ಪಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಮುಸ್ಲಿಂ ಸಮುದಾಯದ ಕೆಲವು ಸದಸ್ಯರು ಸಹ ಪೊಲೀಸ್ ಠಾಣೆಗೆ ಭೇಟಿ ನೀಡಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಸಮುದಾಯದ ಖ್ಯಾತಿಗೆ ಕಳಂಕ ಬರದಂತೆ ತಡೆಯುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ.



ಮೊಹಮ್ಮದ್ ಅಯಾಜ್ ಈ ಹಿಂದೆ ಎಐಎಂಐಎಂನ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ. ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ವಿಡಿಯೋಗಳು ಮತ್ತು ಛಾಯಾಚಿತ್ರಗಳಲ್ಲಿ ಆತ ಪಕ್ಷದ ಅಮರಾವತಿ ಅಧ್ಯಕ್ಷ ಹಾಜಿ ಇರ್ಫಾನ್ ಖಾನ್ ಅವರಿಂದ ಪತ್ರವನ್ನು ಸ್ವೀಕರಿಸುತ್ತಿರುವುದು ಇದೆ. ಜೊತೆಗೆ ಪಕ್ಷದ ರ‍್ಯಾಲಿಗಳಲ್ಲಿ ಸಾಮಾಜಿಕ ಮಾಧ್ಯಮ ರೀಲ್‌ಗಳನ್ನು ರೆಕಾರ್ಡ್ ಮಾಡುತ್ತಿರುವುದು ಕಂಡುಬಂದಿದೆ. ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಅಂತಹ ಹಲವಾರು ವಿಡಿಯೋಗಳನ್ನು ಇನ್‌ಸ್ಟಾಗ್ರಾಮ್ ಖಾತೆಯಿಂದ ಅಳಿಸಲಾಗಿದೆ.

# ಯುಎಸ್ ಅಭಿವೃದ್ಧಿಯಲ್ಲಿ ಭಾರತೀಯರ ಕೊಡುಗೆ ಅಪಾರವಾದದ್ದು

## ಪ್ರತಿಯೊಬ್ಬರೂ ತಮ್ಮನ್ನು ತಾವು ಅಮೆರಿಕನ್ನರು ಎಂದು ಭಾವಿಸಿದಾಗ ಮಾತ್ರ ವ್ಯವಸ್ಥೆಯು ಕಾರ್ಯ ನಿರ್ವಹಿಸುತ್ತದೆ: ಜೆ.ಡಿ.ವ್ಯಾನ್ಸ್

**ವಾಷಿಂಗ್ಟನ್:** ಅಮೆರಿಕಾದಲ್ಲಿ ಇತ್ತೀಚೆಗೆ H-1B ವಲಸೆ ನೀತಿಗಳು ಕಠಿಣವಾಗುತ್ತಿದ್ದು, ಅದರಲ್ಲೂ ಪ್ರಮುಖವಾಗಿ ಇದರ ಪರಿಣಾಮ ಭಾರತೀಯರ ಮೇಲೆ ಬೀಳುತ್ತಿದೆ. ಈ ನಡುವೆ ಅಮೆರಿಕಾದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅಮೆರಿಕಾದ ಸಮಗ್ರ ಪ್ರಗತಿಯಲ್ಲಿ ಭಾರತೀಯರ ಕೊಡುಗೆ ಅಪಾರವಾಗಿದೆ ಎಂದು ಶ್ಲಾಘಿಸಿದ್ದು, ಇದೇ ವೇಳೆ, H-1B ವೀಸಾದಲ್ಲಿನ ಭ್ರಷ್ಟಾಚಾರದ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

**ಅಮೆರಿಕಾದ ಅಭಿವೃದ್ಧಿಗೆ ಭಾರತೀಯರ ಕೊಡುಗೆ ಅಪಾರ!** ಟರ್ನಿಂಗ್ ಪಾಯಿಂಟ್ ಯುಎಸ್‌ಎ ಕಾರ್ಯಕ್ರಮದಲ್ಲಿ ಮಾತನಾಡಿದ ಜೆ.ಡಿ.ವ್ಯಾನ್ಸ್ ಅಮೆರಿಕಾದ ಪ್ರಗತಿಯಲ್ಲಿ ವಲಸಿಗರ ಪಾತ್ರ ಮಹತ್ವದ್ದು ಎಂದು ಒಪ್ಪಿಕೊಂಡಿದ್ದಾರೆ. ಇದೇ ವೇಳೆ, ಈ ದೇಶದಿಂದ ಲಾಭ ಪಡೆಯುತ್ತಿರುವ ಜನರು ಅಮೆರಿಕಾದ ಗುರುತು ಹಾಗೂ ಇದರ ರಾಷ್ಟ್ರೀಯ ಹಿತಾಸಕ್ತಿಯನ್ನು ಆದ್ಯತೆಯಾಗಿ ಪರಿಗಣಿಸಿದಾಗ ವ್ಯವಸ್ಥೆ ಉತ್ತಮಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾರತದೊಂದಿಗೆ ತಮಗಿರುವ ವೈಯಕ್ತಿಕ ನಂಟನ್ನು ಉಲ್ಲೇಖಿಸಿದ ವಾನ್ಸ್ ಭಾರತೀಯ ಮೂಲದ ವಲಸಿಗರ ಮಗಳನ್ನು ಮದುವೆಯಾಗಿರುವುದಾಗಿ ಸ್ಮರಿಸಿದ್ದಾರೆ. ಅಲ್ಲದೆ, ಬಹಳಷ್ಟು ವಲಸಿಗರು ಅದರಲ್ಲೂ ಭಾರತೀಯ ವಲಸಿಗರು ದೇಶವನ್ನು ಸದೃಢ ಮಾಡುವಲ್ಲಿ ಹಾಗೂ ಇದರ ಸಮಗ್ರ ಬೆಳವಣಿಗೆಯಲ್ಲಿ ಸಾಕಷ್ಟು ಮಹತ್ವದ ಕೊಡುಗೆ ನೀಡಿದ್ದಾರೆ ಎಂಬ ಸತ್ಯವನ್ನು ಒಪ್ಪಿಕೊಂಡಿದ್ದಾರೆ.

**H-1B ವೀಸಾ ದುರುಪಯೋಗದ ಕುರಿತು ವಾನ್ಸ್ ಹೇಳಿದ್ದೇನು?:** ಆದಾಗ್ಯೂ, H-1B ವೀಸಾದಲ್ಲಿನ ಭ್ರಷ್ಟಾಚಾರದ ಕುರಿತು ಕಳವಳ ವ್ಯಕ್ತಪಡಿಸಿದ್ದು, ಒಂದೆಡೆ, H-1B ವ್ಯವಸ್ಥೆಯಲ್ಲಿ ಬಹಳಷ್ಟು ವಂಚನೆ ಇದೆ ಮತ್ತು ಮತ್ತೊಂದೆಡೆ, ನನ್ನ ಅತ್ತೆ-ಮಾವಂದಿರಂತೆ ಬಂದು ದೇಶವನ್ನು ಶ್ರೀಮಂತಗೊಳಿಸಿದ ಜನರಿದ್ದಾರೆ... ಅಂತಹ ನಾಗರಿಕರ ಬಾಧ್ಯತೆಗಳಲ್ಲಿ ಒಂದು ಅವರು ದೇಶದ ಬಗ್ಗೆ ಯೋಚಿಸಬೇಕು ಮತ್ತು ಅವರು ಬಂದ ದೇಶ ಅಥವಾ ಗುಂಪಿನ ಬಗ್ಗೆ ಅಲ್ಲ... ಅಮೆರಿಕಾದಲ್ಲಿ ಹೆಚ್ಚುತ್ತಿದೆ ಭಾರತೀಯ ವಲಸಿಗರ ವಿರುದ್ಧ ಕೂಗು ವಾನ್ಸ್ ಅವರ ಈ ಹೇಳಿಕೆಗಳು ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕಾದಲ್ಲಿ , H-1B ವೀಸಾ



- **ಅಮೆರಿಕಾದ ಸಮಗ್ರ ಅಭಿವೃದ್ಧಿಗೆ ಭಾರತೀಯ ವಲಸಿಗರ ಪಾತ್ರ ಮಹತ್ವವಾಗಿದೆ ಎಂದು ಶ್ಲಾಘಿಸಿದ ಅಮೆರಿಕಾ ಉಪಾಧ್ಯಕ್ಷ ಜೆ.ಡಿ ವಾನ್ಸ್**
- **ಭಾರತದೊಂದಿಗೆ ಹೊಂದಿರುವ ವೈಯಕ್ತಿಕ ಸಂಬಂಧನವನ್ನು ಉಲ್ಲೇಖಿಸಿ ವಾನ್ಸ್ ಹೇಳಿದ್ದೇನು?**
- **H-1Bವೀಸಾದಲ್ಲಿನ ದುರುಪಯೋಗದ ಕುರಿತು ಕಳವಳ ವ್ಯಕ್ತಪಡಿಸಿದ ವಾನ್ಸ್ ನಿಂದ ವಲಸಿಗರಿಗೆ ಸಲಹೆ**

ದುರುಪಯೋಗವಾಗುತ್ತಿದೆ ಎಂಬ ಆರೋಪಗಳ ಬೆನ್ನಲ್ಲೇ, ಬಂದಿದ್ದು, ಟ್ರಂಪ್ ಆಡಳಿತ ಈ ಹಿನ್ನಲೆಯಲ್ಲಿ ಕಠಿಣ ನಿಲುವನ್ನು ಹೊಂದಿದೆ. ಇದರ ಭಾಗವಾಗಿಯೇ ಟ್ರಂಪ್ ಆಡಳಿತ H-1B ವೀಸಾದ ಮೇಲೆ ಬರೋಬ್ಬರಿ 10000 ಡಾಲರ್ ಶುಲ್ಕ ವಿಧಿಸುವ ಜೊತೆಗೆ ವೀಸಾ ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ಕಠಿಣ ಮಾಡಿದ್ದರು. ಅದರಲ್ಲೂ ಟೆಕ್ಸಾಸ್ ನಂತಹ ರಾಜ್ಯಗಳಲ್ಲಿ ಭಾರತೀಯ ಮೂಲದ ವಲಸಿಗರು H-1B ವೀಸಾದ ಮೂಲಕ ಅಡ್ಡದಾರಿಗಳನ್ನು ಹಿಡಿದು ದೇಶಕ್ಕೆ ಪ್ರವೇಶಿಸಿ ಸಾಮಾನ್ಯ ಅಮೆರಿಕನ್ನರ ಕೆಲಸಗಳನ್ನು ಕಿತ್ತುಕೊಳ್ಳುತ್ತಿದ್ದಾರೆ ಎಂಬ ಆರೋಪಗಳು ಜೋರಾಗಿ ಕೇಳಿಬರುತ್ತಿವೆ. ಈ ನಡುವೆ ವಾನ್ಸ್ ಅಮೆರಿಕಾಗೆ ಭಾರತೀಯ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

> ಅಮೆರಿಕಾದ ಉಪಾಧ್ಯಕ್ಷ ಜೆ.ಡಿವಾನ್ಸ್ ಅಮೆರಿಕಾದ ಸಮಗ್ರ ಅಭಿವೃದ್ಧಿಯಲ್ಲಿ ವಲಸಿಗರ ಅದರಲ್ಲೂ ಪ್ರಮುಖವಾಗಿ ಭಾರತೀಯರ ಕೊಡುಗೆ ಮಹತ್ವಪೂರ್ಣವಾಗಿದೆ ಎಂದು ಶ್ಲಾಘಿಸಿದ್ದಾರೆ. ಇದರ ಜೊತೆಗೆ H-1B ವೀಸಾ ದುರುಪಯೋಗವಾಗುತ್ತಿದೆ ಎಂಬ ಆರೋಪಗಳ ಬೆನ್ನಲ್ಲೇ, ಬಂದಿದ್ದು, ಟ್ರಂಪ್ ಆಡಳಿತ ಈ ಹಿನ್ನಲೆಯಲ್ಲಿ ಕಠಿಣ ನಿಲುವನ್ನು ಹೊಂದಿದೆ. ವೀಸಾದಲ್ಲಿನ ದುರಪಯೋಗದ ಕುರಿತು ಕಳವಳ ವ್ಯಕ್ತಪಡಿಸಿರುವ ಅವರು ವಲಸಿಗರು ಅಮೆರಿಕಾದ ಹಿತಾಸಕ್ತಿಗಳನ್ನು ಆದ್ಯತೆಯಾಗಿ ಪರಿಗಣಿಸಿ ಕೆಲಸ ಮಾಡಿದರೆ ವ್ಯವಸ್ಥೆ ಉತ್ತಮವಾಗುತ್ತದೆ.
> -ಜೆ.ಡಿ.ವ್ಯಾನ್ಸ್

## ಮಿನಿ ನ್ಯೂಸ್

### ಅಂದಾಜಿಗಿಂತ ವೇಗ ಪಡೆದ ದೇಶದ ಆರ್ಥಿಕತೆ

**ನವದೆಹಲಿ:** ಭಾರತದ ಜಿಡಿಪಿ ಬೆಳವಣಿಗೆಯ ಬಗ್ಗೆ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹೊಸ ಅಂಕಿಅಂಶಗಳನ್ನು ಬಿಡುಗಡೆ ಮಾಡಿದೆ. ಐಎಂಎಫ್ ಪ್ರಕಾರ, ಮಧ್ಯಪ್ರಾಚ್ಯದಲ್ಲಿ ಪ್ರಸ್ತುತ ಉದ್ವಿಗ್ನತೆಯ ಹೊರತಾಗಿಯೂ, ಭಾರತದ ಆರ್ಥಿಕತೆಯು ಈ ಹಿಂದೆ ಅಂದಾಜಿಸಿದ್ದಕ್ಕಿಂತ ವೇಗವಾಗಿ ಬೆಳೆಯುತ್ತದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ 2027 ರ ಆರ್ಥಿಕ ವರ್ಷದಲ್ಲಿ ಭಾರತದ ಬೆಳವಣಿಗೆಯ ಮುನ್ಸೂಚನೆಯನ್ನು ಶೇಕಡಾ 6.5 ಕ್ಕೆ ಏರಿಸಿದೆ, ಇದು ಹಿಂದಿನ ಅಂದಾಜಿಗಿಂತ 10 ಮೂಲ ಅಂಕಗಳ ಹೆಚ್ಚಳವಾಗಿದೆ. ಜಾಗತಿಕವಾಗಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು, ವಿಶೇಷವಾಗಿ ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹೊರತಾಗಿಯೂ ಈ ಪರಿಷ್ಕರಣೆ ಮಾಡಲಾಗಿದೆ. ಐಎಂಎಫ್ ನ ಇತ್ತೀಚಿನ ವಿಶ್ವ ಆರ್ಥಿಕ ದೃಷ್ಟಿಕೋನ ಮತ್ತು ಜಾಗತಿಕ ಹಣಕಾಸು ಸ್ಥಿರತೆ ನವೀಕರಣದ ಪ್ರಕಾರ, ಭಾರತದ ಆರ್ಥಿಕ ಬೆಳವಣಿಗೆ ಆರ್ಥಿಕ ವರ್ಷ28 ರಲ್ಲಿ ಶೇಕಡಾ 6.5 ರಷ್ಟು ಸ್ಥಿರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ.

2025 ರಲ್ಲಿ ಭಾರತದ ಆರ್ಥಿಕತೆಯ ಅತ್ಯುತ್ತಮ ಸಾಧನೆ ,ದೇಶೀಯ ಬೇಡಿಕೆ ಮತ್ತು ಯುಎಸ್ ನಿಂದ ಆಮದು ಸುಂಕಗಳನ್ನು ಕಡಿಮೆ ಮಾಡಿರುವುದು ಈ ಸ್ಥಿರತೆಗೆ ಕಾರಣವಾಗಿದೆ ಎಂದು ಸಂಸ್ಥೆ ಹೇಳಿದೆ.

ಭಾರತ ಸರ್ಕಾರ ಮತ್ತು ಐಎಂಎಫ್ ಅಂಕಿಅಂಶಗಳ ನಡುವೆ ದೊಡ್ಡ ವ್ಯತ್ಯಾಸವಿದೆ. 2025-26ರ ಹಣಕಾಸು ವರ್ಷದಲ್ಲಿ ಆರ್ಥಿಕತೆಯು 7.6% ದರದಲ್ಲಿ ಬೆಳೆಯಲಿದೆ ಎಂದು ಭಾರತ ಸರ್ಕಾರ ಅಂದಾಜಿಸಿದೆ.

### ಆಸ್ಪತ್ರೆಯಲ್ಲಿ ಸಿರಿಂಜ್ ಮರುಬಳಕೆ ಪಾಕ್‌ನ 331 ಮಕ್ಕಳಿಗೆ ಹೆಚ್‌ಐವಿ ಸೋಂಕು

**ಇಸ್ಲಾಮಾಬಾದ್:** ಪಾಕಿಸ್ತಾನ ಆಸ್ಪತ್ರೆಯಲ್ಲಿ ಸಿರಿಂಜ್ ಮರುಬಳಕೆಯಿಂದ 331 ಮಕ್ಕಳಿಗೆ ಹೆಚ್‌ಐವಿ ಸೋಂಕು ತಗುಲಿರುವ ಆಘಾತಕಾರಿ ವಿಚಾರ ತನಿಖೆಯಿಂದ ಬಹಿರಂಗಗೊಂಡಿದೆ. ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ಅಸುರಕ್ಷಿತ ಇಂಜೆಕ್ಷನ್ ಪದ್ಧತಿಗಳು ಮುಂದುವರೆದಿವೆ. ಮಕ್ಕಳಲ್ಲಿ ಹೆಚ್‌ಐವಿ ಪ್ರಕರಣಗಳು ಹೆಚ್ಚಾದ ನಂತರ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ರಹಸ್ಯ ದೃಶ್ಯಾವಳಿಗಳು ಮತ್ತು ಅಧಿಕೃತ ದತ್ತಾಂಶವನ್ನು ಆಧರಿಸಿದ ಸಂಶೋಧನೆಗಳು, ಖಿಊಕಿ ಟೌನ್ಸಾ ಆಸ್ಪತ್ರೆಯಲ್ಲಿ ಸೋಂಕು ನಿಯಂತ್ರಣದಲ್ಲಿನ ವ್ಯವಸ್ಥಿತ ವೈಫಲ್ಯಗಳನ್ನು ಸೂಚಿಸುತ್ತವೆ. ಅಲ್ಲಿ ಮರುಬಳಕೆ ಮಾಡಲಾದ ಸಿರಿಂಜ್‌ಗಳು ಮತ್ತು ಕಲುಷಿತ ಬಾಟಲುಗಳು ನೂರಾರು ಮಕ್ಕಳನ್ನು ಸೋಂಕಿಗೆ ದೂಡಿವೆ ಎನ್ನಲಾಗಿದೆ. ಪ್ರಾಂತೀಯ ಸ್ಕ್ರೀನಿಂಗ್ ಕಾರ್ಯಕ್ರಮಗಳು, ಖಾಸಗಿ ಚಿಕಿತ್ಸಾಲಯಗಳು ಮತ್ತು ಸೋರಿಕೆಯಾದ ಪೊಲೀಸ್ ದಾಖಲೆಗಳ ಡೇಟಾವನ್ನು ಬಳಸಿಕೊಂಡು ತನಿಖಾ ವರದಿ ಮಾಡಲಾಗಿದೆ. 2024ರ ನವೆಂಬರ್‌ನಿಂದ 2025 ರ ಅಕ್ಟೋಬರ್ ನಡುವೆ ಟೌನ್ಸಾದಲ್ಲಿ ಹೆಚ್‌ಐವಿ ಪಾಸಿಟಿವ್ ಪರೀಕ್ಷೆಯಲ್ಲಿ 331 ಮಕ್ಕಳು ಸೋಂಕಿಗೆ ತುತ್ತಾಗಿದ್ದಾರೆ.

### ಆಪ್ ರಾಜ್ಯಸಭಾ ಸಂಸದ ಅಶೋಕ್ ಮಿತ್ತಲ್ ಮನೆ ಮೇಲೆ ಇ.ಡಿ ದಾಳಿ

**ಅಮೃತಸರ:** ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸಂಸದ ಮತ್ತು ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ ಸಂಸ್ಥಾಪಕ-ಚಾನ್ಸಲರ್ ಅಶೋಕ್ ಮಿತ್ತಲ್ ಅವರಿಗೆ ಸೇರಿದ ವಿವಿಧ ಆಸ್ತಿಗಳ ಮೇಲೆ ಜಾರಿ ನಿರ್ದೇಶನಾಲಯ ದಾಳಿ ನಡೆಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ಉಲ್ಲಂಘನೆಗೆ ಸಂಬಂಧಿಸಿದ ತನಿಖೆಯ ಭಾಗವಾಗಿ ದಾಳಿ ನಡೆಸಲಾಗಿದೆ. ಪಂಜಾಬ್‌ನ ಜಲಂಧರ್, ಫಗ್ವಾರಾ ಮತ್ತು ಹರಿಯಾಣದ ಗುರುಗ್ರಾಮ್‌ನ ಸುಮಾರು 8 ರಿಂದ 10 ಸ್ಥಳಗಳಲ್ಲಿ ಏಕಕಾಲದಲ್ಲಿ ಶೋಧ ಕಾರ್ಯ ನಡೆದಿದೆ. ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ ಕ್ಯಾಂಪಸ್ ಮಾತ್ರವಲ್ಲದೆ, ಈ ಸಮೂಹಕ್ಕೆ ಸೇರಿದ ಲವ್ಲಿ ಆಟೋಸ್, ಲವ್ಲಿ ಸ್ವೀಟ್ಸ್, ಮತ್ತು ಗುರುಗ್ರಾಮ್‌ನಲ್ಲಿರುವ ಟೆಟರ್ ಕಾಲೇಜ್ ಆಫ್ ಬಿಸಿನೆಸ್ ಹಾಗೂ ಮಾಸ್ಟರ್ಸ್ ಯೂನಿಯನ್ ಕಾಲೇಜ್ ಆಫ್ ಬಿಸಿನೆಸ್ ಸಂಸ್ಥೆಗಳ ಮೇಲೆಯೂ ದಾಳಿ ಮಾಡಲಾಗಿದೆ.

ಸಂಸದ ಅಶೋಕ್ ಮಿತ್ತಲ್ ಅವರ ಮನೆ ಮತ್ತು ಅವರ ಸಹೋದರರಾದ ರಮೇಶ್ ಹಾಗೂ ನರೇಶ್ ಮಿತ್ತಲ್ ಅವರ ಮನೆಗಳ ಮೇಲೆಯೂ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಇಡಿ ಅಧಿಕಾರಿಗಳು ಪ್ರಸ್ತುತ ಹಣಕಾಸಿನ ದಾಖಲೆಗಳು ಮತ್ತು ವಿದೇಶಿ ವಹಿವಾಟುಗಳಿಗೆ ಸಂಬಂಧಿಸಿದ ಪುರಾವೆಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಬೆಳವಣಿಗೆಯು ಅಶೋಕ್ ಮಿತ್ತಲ್ ಅವರು ರಾಜ್ಯಸಭೆಯಲ್ಲಿ ರಾಘವ್ ಚಡ್ಡಾ ಅವರ ಬದಲಿಗೆ ಎಎಪಿ ಉಪನಾಯಕರಾಗಿ ನೇಮಕಗೊಂಡ ಕೆಲವೇ ದಿನಗಳಲ್ಲಿ ನಡೆದಿದೆ.

### 20,400 ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತು ಭಾರತಕ್ಕೆ ಬಂದ ಜಗ ವಿಕ್ರಮ್ ಟ್ಯಾಂಕರ್

**ಗಾಂಧಿನಗರ:** 20,400 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಹೊತ್ತ ಭಾರತದ ಹಡಗುಜಗ ವಿಕ್ರಮ್ ಯಶಸ್ವಿಯಾಗಿ ಗುಜರಾತ್‌ನ ಕಾಂಡ್ಲಾ ಬಂದರಿಗೆ ಬಂದು ತಲುಪಿದೆ. ಅಮೆರಿಕ ಮತ್ತು ಇರಾನ್ ನಡುವಿನ ಇತ್ತೀಚಿನ ಕದನ ವಿರಾಮದ ಮಾತುಕತೆ ನಂತರ ಜಲಸಂಧಿಯನ್ನು ದಾಟಿ ಬಂದ ಭಾರತದ ಮೊದಲ ಹಡಗು ಇದಾಗಿದೆ.

ಜಗ ವಿಕ್ರಮ್ ಸುರಕ್ಷಿತವಾಗಿ ಹಾರ್ಮುಜ್‌ಜಲಸಂಧಿಯನ್ನು ದಾಟಿದ 9ನೇ ಹಡಗಾಗಿದೆ. ಮುಂಬೈ ಮೂಲದ ಗ್ರೇಟ್ ಈಸ್ಟರ್ನ್ ಶಿಪ್ಪಿಂಗ್ ಕಂಪನಿ ಮಾಲೀಕತ್ವದ ಈ ಹಡಗು ಮಧ್ಯಮ ಗಾತ್ರದ್ದಾಗಿದೆ. ಈ ಹಡಗು 20,400 ಟನ್ ಸಾಮರ್ಥ್ಯದ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಸಾಗಾಣಿಕೆಯ ಸಾಮರ್ಥ್ಯ ಹೊಂದಿದೆ. ಈ ಹಡಗಿನಲ್ಲಿ 24 ಮಂದಿ ಭಾರತೀಯ ಸಿಬ್ಬಂದಿ ಇದ್ದರು.

### ಪಾಕ್‌ಗೆ ಮತ್ತೆ 3 ಬಿಲಿಯನ್ ಡಾಲರ್ ನೆರವು ನೀಡಲು ಮುಂದಾದ ಸೌದಿ

**ಸೌದಿ ಅರೇಬಿಯಾ:** ತೀವ್ರ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ಕಂಗಾಲಾಗಿರುವ ಪಾಕಿಸ್ತಾನದ ಕೈಯನ್ನು ಸೌದಿ ಅರೇಬಿಯಾ ಮತ್ತೊಮ್ಮೆ ಹಿಡಿದಿದೆ. ಸೌದಿ ಸರ್ಕಾರವು ಪಾಕಿಸ್ತಾನಕ್ಕೆ 3 ಬಿಲಿಯನ್ ಅಮೆರಿಕನ್ ಡಾಲರ್ ಹೆಚ್ಚುವರಿ ಆರ್ಥಿಕ ಸಹಾಯವನ್ನು ಘೋಷಿಸಿದೆ. ಅಷ್ಟೇ ಅಲ್ಲದೆ, ಈಗಾಗಲೇ ನೀಡಿರುವ 5 ಬಿಲಿಯನ್ ಡಾಲರ್ ನೆರವಿನ ಅವಧಿಯನ್ನು ಮುಂದಿನ ಮೂರು ವರ್ಷಗಳವರೆಗೆ ವಿಸ್ತರಿಸುವ ಮೂಲಕ ದೊಡ್ಡ ಸಮಾಧಾನ ನೀಡಿದೆ.

ಪಾಕಿಸ್ತಾನದ ಪಾಲಿಗೆ ಈ ನೆರವು ಅತ್ಯಂತ ನಿರ್ಣಾಯಕವಾಗಿದೆ. ಈ ತಿಂಗಳ ಅಂತ್ಯದ ವೇಳೆಗೆ ಪಾಕಿಸ್ತಾನವು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ 3.5 ಬಿಲಿಯನ್ ಡಾಲರ್ ಸಾಲವನ್ನು ಮರುಪಾವತಿಸಬೇಕಿದೆ. ಇಂತಹ ಸಮಯದಲ್ಲಿ ಬೊಕ್ಕಸ ಖಾಲಿಯಾಗುವ ಭೀತಿಯಲ್ಲಿದ್ದ ಇಸ್ಲಾಮಾಬಾದ್‌ಗೆ ಸೌದಿಯ ಘೋಷಣೆ ಆನೆಬಲ ನೀಡಿದೆ.

ಈ ಹಿಂದೆ ನೀಡಲಾಗಿದ್ದ 5 ಬಿಲಿಯನ್ ಡಾಲರ್ ಸಾಲಕ್ಕೆ ಪ್ರತಿ ವರ್ಷ ನೀಡಲಾಗುತ್ತಿದ್ದ 'ರೋಲ್‌ಓವರ್' (ಅವಧಿ ವಿಸ್ತರಣೆ) ವ್ಯವಸ್ಥೆಯನ್ನು ತೆಗೆದುಹಾಕಿ, ಅದನ್ನು ನೇರವಾಗಿ 3 ವರ್ಷಗಳ ದೀರ್ಘಾವಧಿಗೆ ವಿಸ್ತರಿಸಲಾಗಿದೆ. ಪ್ರಧಾನಿ ಶೆಹಬಾಜ್ ಷರೀಫ್ ಅವರು ಏಪ್ರಿಲ್ 15 ರಿಂದ 18 ರವರೆಗೆ ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿಗೆ ಭೇಟಿ ನೀಡುತ್ತಿರುವ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

